रेलवे भर्ती बोर्ड / RAILWAY RECRUITMENT BOARD
सी०ई०एन ० ०९ /२०२५ -7 वें सीपीसी वेतन मैट्रिक्स के लेवल १ में विभिन्न पदों हेतु
CEN 09/2025 - Various Posts in Level 1 of 7th CPC Pay Matrix

# RRB Group D 2025

## Level-1 · CEN 09/2025 · Mathematics · Question Paper Compilation

**Kannada**

All 48 Shifts (Sets) · Mathematics Section · Official Answer Key

## About this Compilation

This booklet compiles all **48 shift papers** of the **RRB Group D (Level-1) 2025** examination (CEN 09/2025) in **Kannada** (**Mathematics** section only), with the correct option marked as per the official answer key.

✓ Correct option (highlighted green)

**2 of these 1200 questions are shown in English.** RRB did not release them in Kannada to any candidate whose response sheet we could reach, so the official English version is printed instead and marked with an ENGLISH chip. Nothing here is machine translated.

### How to use

- Use the **Index** page to jump directly to any set (clickable).
- Questions are grouped by subtopic within each section, so similar questions sit together.
- Diagram and wide-table questions appear at the end of their section at full width.
- The correct answer is highlighted in green with a tick.

### More from QMaths

Check your marks, normalized score and zone-wise rank free at **rank.qmaths.in**. Master English vocabulary with the **Blackbook** app.





*Toppers' Choice, Blackbook of English Vocabulary, Now available in App format : DOWNLOAD NOW*

## Index — All Sets (click to open)


Set 1 03 Aug 2026 9:00 AM - 10:30 AM
Set 2 03 Aug 2026 12:45 PM - 2:15 PM
Set 3 03 Aug 2026 4:30 PM - 6:00 PM
Set 4 04 Aug 2026 9:00 AM - 10:30 AM
Set 5 04 Aug 2026 12:45 PM - 2:15 PM
Set 6 04 Aug 2026 4:30 PM - 6:00 PM
Set 7 05 Aug 2026 9:00 AM - 10:30 AM
Set 8 05 Aug 2026 12:45 PM - 2:15 PM
Set 9 05 Aug 2026 4:30 PM - 6:00 PM
Set 10 06 Aug 2026 9:00 AM - 10:30 AM
Set 11 06 Aug 2026 12:45 PM - 2:15 PM
Set 12 06 Aug 2026 4:30 PM - 6:00 PM
Set 13 09 Aug 2026 9:00 AM - 10:30 AM
Set 14 09 Aug 2026 12:45 PM - 2:15 PM
Set 15 09 Aug 2026 4:30 PM - 6:00 PM
Set 16 10 Aug 2026 9:00 AM - 10:30 AM
Set 17 10 Aug 2026 12:45 PM - 2:15 PM
Set 18 10 Aug 2026 4:30 PM - 6:00 PM
Set 19 11 Aug 2026 9:00 AM - 10:30 AM
Set 20 11 Aug 2026 12:45 PM - 2:15 PM
Set 21 11 Aug 2026 4:30 PM - 6:00 PM
Set 22 12 Aug 2026 9:00 AM - 10:30 AM
Set 23 12 Aug 2026 12:45 PM - 2:15 PM
Set 24 12 Aug 2026 4:30 PM - 6:00 PM
Set 25 13 Aug 2026 9:00 AM - 10:30 AM
Set 26 13 Aug 2026 12:45 PM - 2:15 PM
Set 27 13 Aug 2026 4:30 PM - 6:00 PM
Set 28 14 Aug 2026 9:00 AM - 10:30 AM
Set 29 14 Aug 2026 12:45 PM - 2:15 PM
Set 30 14 Aug 2026 4:30 PM - 6:00 PM
Set 31 17 Aug 2026 9:00 AM - 10:30 AM
Set 32 17 Aug 2026 12:45 PM - 2:15 PM
Set 33 17 Aug 2026 4:30 PM - 6:00 PM
Set 34 18 Aug 2026 9:00 AM - 10:30 AM

| | | |
|---|---|---|
| Set 35 | 18 Aug 2026 | 12:45 PM - 2:15 PM |
| Set 36 | 18 Aug 2026 | 4:30 PM - 6:00 PM |
| Set 37 | 19 Aug 2026 | 9:00 AM - 10:30 AM |
| Set 38 | 19 Aug 2026 | 12:45 PM - 2:15 PM |
| Set 39 | 19 Aug 2026 | 4:30 PM - 6:00 PM |
| Set 40 | 20 Aug 2026 | 9:00 AM - 10:30 AM |
| Set 41 | 20 Aug 2026 | 12:45 PM - 2:15 PM |
| Set 42 | 20 Aug 2026 | 4:30 PM - 6:00 PM |
| Set 43 | 21 Aug 2026 | 9:00 AM - 10:30 AM |
| Set 44 | 21 Aug 2026 | 12:45 PM - 2:15 PM |
| Set 45 | 21 Aug 2026 | 4:30 PM - 6:00 PM |
| Set 46 | 25 Aug 2026 | 9:00 AM - 10:30 AM |
| Set 47 | 25 Aug 2026 | 12:45 PM - 2:15 PM |
| Set 48 | 25 Aug 2026 | 4:30 PM - 6:00 PM |

## Mathematics

25 Questions • Answer Key

**Q1** Average Speed

ಒಂದು ಪ್ರವಾಸಿ ಬಸ್ 500 ಕಿಲೋಮೀಟರ್ ದೂರವನ್ನು ಕ್ರಮಿಸುತ್ತದೆ. ಅದು ಮೊದಲ 40% ದೂರವನ್ನು 80 km/h ವೇಗದಲ್ಲಿ ಚಲಿಸುತ್ತದೆ ಮತ್ತು ಉಳಿದ ದೂರವನ್ನು 75 km/h ವೇಗದಲ್ಲಿ ಚಲಿಸುತ್ತದೆ. ಪ್ರಯಾಣದ ಸಮಯದಲ್ಲಿ ಊಟಕ್ಕೆ 30 ನಿಮಿಷಗಳ ನಿಲುಗಡೆ ತೆಗೆದುಕೊಂಡರೆ, ಇಡೀ ಪ್ರವಾಸದ ಸರಾಸರಿ ವೇಗ ಎಷ್ಟು? (ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

- A. 71.43 km/hr ✓
- B. 75 km/hr
- C. 72.54 km/hr
- D. 76.92 km/hr

**Q2** Basic Percentage

ಒಂದು ಕುಟುಂಬವು ತಿಂಗಳಿಗೆ ₹50,000 ಗಳಿಸುತ್ತದೆ ಮತ್ತು ₹35,000 ಖರ್ಚು ಮಾಡುತ್ತದೆ. ಹಾಗಾದರೆ ಅವರ ಆದಾಯದ ಶೇಕಡಾ ಎಷ್ಟು ಭಾಗವನ್ನು ಉಳಿತಾಯ ಮಾಡಲಾಗಿದೆ?

- A. 20%
- B. 25%
- C. 15%
- D. 30% ✓

**Q3** Basic TSD

ಕೌಶಲ್ ಅವರು ಗಂಟೆಗೆ 90 km ವೇಗದಲ್ಲಿ 16 ಗಂಟೆ 20 ನಿಮಿಷ ಪ್ರಯಾಣ ಮಾಡಿದರು. ಹಾಗಾದರೆ, 14 ಗಂಟೆಗಳಲ್ಲಿ ಅದೇ ದೂರವನ್ನು ಕ್ರಮಿಸಲು ಅವರು ಯಾವ ವೇಗದಲ್ಲಿ (km/h ನಲ್ಲಿ) ಪ್ರಯಾಣ ಮಾಡಬೇಕು?

- A. 105 ✓
- B. 103
- C. 102
- D. 104

**Q4** CP-SP Relation

ಒಂದು ವಸ್ತುವನ್ನು 20% ಲಾಭಕ್ಕೆ ಮಾರಾಟ ಮಾಡಲಾಗುತ್ತದೆ. ಒಂದುವೇಳೆ ಮಾರಾಟದ ಬೆಲೆಯನ್ನು ₹100 ಹೆಚ್ಚಿಸಿದ್ದರೆ, ಶೇಕಡಾವಾರು ಲಾಭವು ದ್ವಿಗುಣಗೊಳ್ಳುತ್ತಿತ್ತು. ಹಾಗಾದರೆ ಆ ವಸ್ತುವಿನ ಅಸಲು ಬೆಲೆ ಎಷ್ಟು?

- A. ₹200
- B. ₹400
- C. ₹250
- D. ₹500 ✓

**Q5** Grouped Data Median

ಈ ದತ್ತಾಂಶದಿಂದ ಮಧ್ಯಾಂಕವನ್ನು ಕಂಡುಹಿಡಿಯಿರಿ

| ವರ್ಗಾಂತರ x | f |
|---|---|
| 20-40 | 4 |
| 40-60 | 6 |
| 60-80 | 10 |
| 80-100 | 12 |
| 100-120 | 8 |

- A. 82
- B. 75
- C. 80 ✓
- D. 78

**Q6** HCF/LCM Word Problems

ಪ್ರತಿ 6 ಸೆಕೆಂಡುಗಳಿಗೊಮ್ಮೆ ನೀಲಿ ದೀಪ ಮಿನುಗುತ್ತದೆ ಮತ್ತು ಪ್ರತಿ 9 ಸೆಕೆಂಡುಗಳಿಗೊಮ್ಮೆ ಕೆಂಪು ದೀಪ ಮಿನುಗುತ್ತದೆ. ಹಾಗಾದರೆ ಎಷ್ಟು ಸೆಕೆಂಡುಗಳ ನಂತರ ಎರಡೂ ದೀಪಗಳು ಮತ್ತೆ ಒಟ್ಟಿಗೆ ಮಿನುಗುತ್ತವೆ?

- A. 9 ಸೆಕೆಂಡುಗಳು
- B. 12 ಸೆಕೆಂಡುಗಳು
- C. 3 ಸೆಕೆಂಡುಗಳು
- D. 18 ಸೆಕೆಂಡುಗಳು ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q7** Half-Yearly Compounding

₹10,000 ಮೊತ್ತದ ಮೇಲೆ 1 ವರ್ಷದ ಅವಧಿಗೆ ವಾರ್ಷಿಕ 8% ದರದಲ್ಲಿ, ಅರ್ಧವರ್ಷಕ್ಕೊಮ್ಮೆ ಲೆಕ್ಕಹಾಕಿದಾಗ ಸಿಗುವ ಚಕ್ರಬಡ್ಡಿ ಮತ್ತು ವರ್ಷಕ್ಕೊಮ್ಮೆ ಲೆಕ್ಕಹಾಕಿದಾಗ ಸಿಗುವ ಚಕ್ರಬಡ್ಡಿ, ಇವುಗಳ ನಡುವಿನ ಅನುಪಾತ ಕಂಡುಹಿಡಿಯಿರಿ.

A. 62 : 49

B. 53 : 45

C. 51 : 50 ✓

D. 61 : 52

**Q8** Half-Yearly Compounding

ವಾರ್ಷಿಕ 20% ಬಡ್ಡಿದರದಲ್ಲಿ ₹10,000 ಮೊತ್ತವನ್ನು 2 ವರ್ಷಗಳ ಅವಧಿಗೆ ಹೂಡಿಕೆ (ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ) ಮಾಡಲಾಗುತ್ತದೆ. 2 ವರ್ಷಗಳ ಅವಧಿಯ ಕೊನೆಯಲ್ಲಿ ಗಳಿಸಿದ ಚಕ್ರಬಡ್ಡಿ ಎಷ್ಟು? (ಬಳಸಿಕೊಳ್ಳಿ $(1.10)^4 = 1.4641$)

A. ₹4,461

B. ₹4,641 ✓

C. ₹4,660

D. ₹4,440

**Q9** Laws of Indices

ಒಂದು ವೇಳೆ $113^{0.99} = x$, $113^{0.77} = y$ ಮತ್ತು $x^z = y^2$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

A. 3.04

B. 2.89

C. 1.56 ✓

D. 1.48

**Q10** Leak Based

ಒಂದು ಕೊಳವೆಯು ಒಂದು ತೊಟ್ಟಿಯನ್ನು 8 ಗಂಟೆಗಳಲ್ಲಿ ತುಂಬಿಸಬಲ್ಲದು. ತೊಟ್ಟಿಯ ಕೆಳಭಾಗದ ಸೋರಿಕೆಯಿಂದಾಗಿ, ಅದು 10 ಗಂಟೆಗಳಲ್ಲಿ ತುಂಬುತ್ತದೆ. ಹಾಗಾದರೆ ಬರೇ ಸೋರಿಕೆಯಿಂದ ಸಂಪೂರ್ಣ ತೊಟ್ಟಿಯನ್ನು ಎಷ್ಟು ಗಂಟೆಗಳಲ್ಲಿ ಖಾಲಿ ಮಾಡಬಹುದು?

A. 35 ಗಂಟೆಗಳು

B. 30 ಗಂಟೆಗಳು

C. 45 ಗಂಟೆಗಳು

D. 40 ಗಂಟೆಗಳು ✓

**Q11** MP with Discount and Profit

ಒಬ್ಬ ವ್ಯಾಪಾರಿಯು ಒಂದು ವಸ್ತುವಿನ ನಮೂದಿತ ಬೆಲೆಯಲ್ಲಿ 50% ಮತ್ತು 14% ಗಳ ಅನುಕ್ರಮ ಎರಡು ರಿಯಾಯಿತಿಗಳನ್ನು ನೀಡಿ ಅದನ್ನು ಮಾರಾಟ ಮಾಡುವ ಮೂಲಕ 72% ಲಾಭವನ್ನು ಪಡೆಯುತ್ತಾನೆ. ಒಂದುವೇಳೆ ವಸ್ತುವಿನ ಅಸಲು ಬೆಲೆಯನ್ನು 36% ಹೆಚ್ಚಿಸಿದರೆ, ಹಿಂದಿನಷ್ಟೇ ಶೇಕಡಾವಾರು ಲಾಭವನ್ನು ಪಡೆಯಲು ಅವನು ಈಗ ಅದೇ ನಮೂದಿತ ಬೆಲೆಯ ಮೇಲೆ ಎಷ್ಟು ಏಕ ರಿಯಾಯಿತಿಯನ್ನು ನೀಡಬೇಕು?

A. 47.46%

B. 41.52% ✓

C. 40.56%

D. 46.78%

**Q12** Mean Proportional

18 ಮತ್ತು 45 ರ ನಡುವಿನ ಸರಾಸರಿ ಸಮಾನುಪಾತದ ಮೌಲ್ಯ ಯಾವುದು?

A. $25\sqrt{5}$

B. $20\sqrt{7}$

C. $10\sqrt{17}$

D. $9\sqrt{10}$ ✓

**Q13** Melting & Recasting

72 cm ಎತ್ತರ ಮತ್ತು 16 cm ಪಾದದ ತ್ರಿಜ್ಯವನ್ನು ಹೊಂದಿರುವ ಒಂದು ಸಿಲಿಂಡರ್ ಅನ್ನು ಕರಗಿಸಿ ಒಂದು ಗೋಳವನ್ನು ರೂಪಿಸಲಾಗುತ್ತದೆ. ಹಾಗಾದರೆ ಆ ಗೋಳದ ತ್ರಿಜ್ಯವನ್ನು ಕಂಡುಹಿಡಿಯಿರಿ.

A. 22 cm

B. 24 cm ✓

C. 20 cm

D. 26 cm

**Q14** Mode

ಮಿತವಾದ ವಿಷಮ ದತ್ತಾಂಶ ವಿತರಣೆಯಲ್ಲಿ, ಸಮಾಂತರ ಮಾಧ್ಯ ಮತ್ತು ಮಧ್ಯಾಂಕಗಳ ನಡುವಿನ ಅನುಪಾತವು 4 : 5 ಆಗಿದೆ. ಒಂದುವೇಳೆ ಸರಾಸರಿ ಮತ್ತು ಮಧ್ಯಾಂಕಗಳ ಮೊತ್ತವು 90 ಆಗಿದ್ದರೆ, ಈ ವಿತರಣೆಯ ರೂಢಿಬೆಲೆ ಎಷ್ಟು?

A. 65

B. 75

C. 60

D. 70 ✓

Blackbook Vocabulary — Now in the App! ► Download Now on Google Play

generated by rank.qmaths.in

**Q15** Proportion

8.6, 10.75, ಮತ್ತು 6 ರ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

A. 7.25

B. 7.5 ✓

C. 7.2

D. 7

**Q16** Surface Area (TSA/LSA)

ಒಂದು ಘನದ ಒಂದು ಬಾಹುವಿನ ಉದ್ದವು (2x – 5) cm ಆಗಿದೆ. ಹಾಗಾದರೆ ಆ ಘನದ ಒಟ್ಟು ಮೇಲ್ಮೈ ವಿಸ್ತೀರ್ಣ ಎಷ್ಟು?

A. $6(4x^2 - 20x - 25)$

B. $6x^2 - 30x + 25$

C. $24x^2 - 120x + 150$ ✓

D. $4x^2 - 20x + 25$

**Q17** Two Items Mixing

ಒಂದುವೇಳೆ ಪ್ರತಿ kg ಗೆ ₹40 ಬೆಲೆಯ 4 kg ಅಕ್ಕಿಯನ್ನು ಪ್ರತಿ kg ಗೆ ₹50 ಬೆಲೆಯ 6 kg ಅಕ್ಕಿಯೊಂದಿಗೆ ಬೆರೆಸಿದರೆ, ಪ್ರತಿ kg ಮಿಶ್ರಣದ ಬೆಲೆ (₹ ಗಳಲ್ಲಿ) ಎಷ್ಟು?

A. 44

B. 48

C. 46 ✓

D. 50

**Q18** Two Successive Changes

ಒಂದು ಕಂಪನಿಯ ಆದಾಯವು ಒಂದು ತ್ರೈಮಾಸಿಕದಲ್ಲಿ 40% ಹೆಚ್ಚಾಗುತ್ತದೆ ಮತ್ತು ಮುಂದಿನ ತ್ರೈಮಾಸಿಕದಲ್ಲಿ 20% ಕಡಿಮೆಯಾಗುತ್ತದೆ. ಒಂದುವೇಳೆ ಆರಂಭಿಕ ಆದಾಯವು ₹1,00,000 ಆಗಿದ್ದರೆ, ಅಂತಿಮ ಆದಾಯ ಎಷ್ಟು?

A. ₹1,12,000 ✓

B. ₹1,08,000

C. ₹1,14,000

D. ₹1,20,000

**Q19** Value Decrease Over Time

ಒಂದು ಯಂತ್ರವನ್ನು ₹18,200 ಗೆ ಖರೀದಿಸಲಾಗುತ್ತದೆ ಮತ್ತು ಅದರ ಮೌಲ್ಯವು ಪ್ರತಿ ವರ್ಷ 10% ರಷ್ಟು ಅಪಮೌಲ್ಯನವಾಗುತ್ತದೆ. ಒಂದುವೇಳೆ ವರ್ಷಕ್ಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ರೀತಿಯಲ್ಲಿ ಯಂತ್ರವು ಅಪಮೌಲ್ಯ ಹೊಂದಿದರೆ, 2 ವರ್ಷಗಳ ನಂತರ ಯಂತ್ರದ ಮೌಲ್ಯ ಎಷ್ಟಾಗಬಹುದು?

A. ₹13,424

B. ₹14,742 ✓

C. ₹15,200

D. ₹16,480

**Q20** Volume

20 cm ಅಂಚಿನ ಒಂದು ಘನಾಕೃತಿಯನ್ನು ನೀರು ತುಂಬಿರುವ ಒಂದು ಆಯತಾಕಾರದ ಪಾತ್ರೆಯಲ್ಲಿ ಸಂಪೂರ್ಣವಾಗಿ ಮುಳುಗಿಸಲಾಗುತ್ತದೆ. ಪಾತ್ರೆಯ ಅಳತೆಗಳು 25 cm × 25 cm ಆಗಿದೆ. ಹಾಗಾದರೆ ನೀರಿನ ಮಟ್ಟದಲ್ಲಿ ಉಂಟಾದ ಏರಿಕೆಯನ್ನು (cm ಗಳಲ್ಲಿ) ಕಂಡುಹಿಡಿಯಿರಿ.

A. 16.5

B. 20

C. 12.8 ✓

D. 8

Blackbook Vocabulary — Now in the App! ▶ Download Now on Google Play

**Q21** Order of Operations

ಸರಳೀಕರಿಸಿ: $\dfrac{\frac{7}{2} \div \frac{3}{2} \times \frac{5}{2}}{8 \div \frac{5}{2} \text{ of } \frac{1}{2}} \div \dfrac{25}{8}$.

A. $\frac{5}{24}$

B. $\frac{13}{24}$

C. $\frac{7}{24}$ ✓

D. $\frac{11}{24}$

**Q22** Percentage Based

ಕೆಳಗಿನ ಪೈ ನಕಾಶೆಯಲ್ಲಿ, ವಿವಿಧ ಕೋರ್ಸ್‌ಗಳಲ್ಲಿನ ವಿದ್ಯಾರ್ಥಿಗಳ ಶೇಕಡಾವಾರು ವಿತರಣೆಯನ್ನು ತೋರಿಸಲಾಗಿದೆ. B.Ed, ಫಾರ್ಮಸಿ (Pharmacy) ಮತ್ತು MBBSಗಳಲ್ಲಿ ಇರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?
ಒಟ್ಟು ವಿದ್ಯಾರ್ಥಿಗಳ ಸಂಖ್ಯೆ = 6800




A. 2645

B. 2145

C. 2516 ✓

D. 2428

**Q23** Pythagorean Identities

$(\sin A + \operatorname{cosec} A)^2 + (\cos A + \sec A)^2 + (\operatorname{cosec}^2 A - \sec^2 A)$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. $7 + 2\cot^2 A$ ✓

B. $7 - 2\cot^2 A$

C. $-2\cot^2 A$

D. $2\cot^2 A$

Blackbook Vocabulary — Now in the App! ► Download Now on Google Play
generated by rank.qmaths.in

**Q24** Pythagorean Identities

ಸರಳೀಕರಿಸಿ: $(\sec A + \tan A) \times (1 - \sin A) \times \sec A$

A. 0

B. 2

C. 0.5

D. 1 ✓

**Q25** Sector Area & Arc Length

16 cm ವ್ಯಾಸ ಇರುವ ಒಂದು ವೃತ್ತದಲ್ಲಿ ತ್ರಿಜ್ಯಖಂಡದ ವಿಸ್ತೀರ್ಣವು $\frac{16\pi}{3}$ $cm^2$ ಆಗಿದೆ. ಹಾಗಾದರೆ ಆ ತ್ರಿಜ್ಯಖಂಡದ ಕೋನ ಎಷ್ಟು?

A. 15°

B. 60°

C. 45°

D. 30° ✓

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** 2-Year Difference

₹15,000 ಮೊತ್ತದ ಮೇಲೆ 2 ವರ್ಷಗಳ ಅವಧಿಯಲ್ಲಿ ವಾರ್ಷಿಕ 5% ದರದಲ್ಲಿ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಆಗುವ ಚಕ್ರಬಡ್ಡಿ ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸವನ್ನು ಕಂಡು ಹಿಡಿಯಿರಿ.

A. ₹33.60
B. ₹42.10
C. ₹37.50 ✓
D. ₹41.90

**Q2** Age in Ratio Form

B ಯು A ಗಿಂತ ಎಷ್ಟು ಕಿರಿಯನೋ, C ಗಿಂತ ಅಷ್ಟೇ ಹಿರಿಯನೂ ಆಗಿದ್ದಾನೆ. A ಮತ್ತು C ಅವರ ವಯಸ್ಸುಗಳ ನಡುವಿನ ಅನುಪಾತವು 9: 8 ಮತ್ತು ಅವರ ವಯಸ್ಸುಗಳ ಮೊತ್ತವು 68 ಆಗಿದೆ. ಹಾಗಾದರೆ A ಮತ್ತು B ಯ ವಯಸ್ಸುಗಳ ನಡುವಿನ ವ್ಯತ್ಯಾಸವೆಷ್ಟು?

A. 5
B. 4
C. 2 ✓
D. 6

**Q3** Angle of Elevation

ನೆಲದ ಮೇಲಿನ ಒಂದು ಬಿಂದುವಿನಿಂದ, ಒಂದು ಮರದ ತುದಿಗೆ ಇರುವ ಉನ್ನತ ಕೋನವು 45° ಆಗಿದೆ. ಒಂದುವೇಳೆ ಆ ಬಿಂದುವು ಪಾದದಿಂದ 20 m ದೂರದಲ್ಲಿದ್ದರೆ, ಆ ಮರದ ಎತ್ತರ ಎಷ್ಟು?

A. 15 m
B. 20 m ✓
C. 18 m
D. 22 m

**Q4** Basic TSD

ಸ್ಯಾಮ್ ಅವರು ಒಂದು ನಿರ್ದಿಷ್ಟ ದೂರವನ್ನು ಒಂದು ನಿರ್ದಿಷ್ಟ ವೇಗದಲ್ಲಿ ಕ್ರಮಿಸಿದರು. ಅವರು 4.5 kmph ವೇಗವಾಗಿ ಚಲಿಸಿದ್ದರೆ, ಅವರು 30 ನಿಮಿಷಗಳನ್ನು ಕಡಿಮೆ ತೆಗೆದುಕೊಳ್ಳುತ್ತಿದ್ದರು. ಒಂದುವೇಳೆ ಅವರು 4.5 kmph ನಿಧಾನವಾಗಿ ಚಲಿಸಿದ್ದರೆ, ಅವರು 35 ನಿಮಿಷಗಳನ್ನು ಹೆಚ್ಚು ತೆಗೆದುಕೊಳ್ಳುತ್ತಿದ್ದರು. ಹಾಗಾದರೆ ಅವರು ಕ್ರಮಿಸಿದ ದೂರವನ್ನು ಕಂಡುಹಿಡಿಯಿರಿ.

A. 411.5 km
B. 420 km
C. 429.5 km
D. 409.5 km ✓

**Q5** Chord Properties

5 cm ತ್ರಿಜ್ಯದ ಒಂದು ವೃತ್ತದಲ್ಲಿ, AB ಮತ್ತು AC ಗಳು ಎರಡು ಸಮಾನ ಜ್ಯಾಗಳಾಗಿದ್ದು, ಅಲ್ಲಿ AB = AC = 7 cm ಆಗಿವೆ. ಹಾಗಾದರೆ BC ಜ್ಯಾದ ಉದ್ದ ಎಷ್ಟು? (3 ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ.)

A. 9.990 cm
B. 9.992 cm
C. 9.996 cm
D. 9.998 cm ✓

**Q6** Curved & Total Surface Area

ಒಂದು ಶಂಕುವಿನ ವಕ್ರ ಮೇಲ್ಮೈ ವಿಸ್ತೀರ್ಣವು ಅದರ ಒಟ್ಟು ಮೇಲ್ಮೈ ವಿಸ್ತೀರ್ಣದ ಮೂರನೇ ಎರಡರಷ್ಟು ಇದೆ. ಹಾಗಾದರೆ ಅದರ ಓರೆ ಎತ್ತರದ ಮತ್ತು ಅದರ ತ್ರಿಜ್ಯದ ನಡುವಿನ ಅನುಪಾತ ಎಷ್ಟು?

A. 3 : 1
B. 1 : 2
C. 2 : 1 ✓
D. 1 : 1

**Q7** Curved & Total Surface Area

ಒಂದು ಶಂಕುವಿನ ಓರೆ ಎತ್ತರವು 25 cm ಮತ್ತು ಅದರ ಪಾದದ ತ್ರಿಜ್ಯವು 17 cm ಆಗಿದೆ. ಹಾಗಾದರೆ ಅದರ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ. (π = 22/7 ಬಳಸಿ.)

A. 2750 cm2
B. 1283 cm2
C. 2244 cm2 ✓
D. 3300 cm2

Blackbook Vocabulary — Now in the App! ► Download Now on Google Play

**Q8** Dividing Quantity in Ratio

ಒಂದು ಮೊತ್ತವನ್ನು P, Q ಮತ್ತು R ಎನ್ನುವವರ ನಡುವೆ 2:3:5 ಅನುಪಾತದಲ್ಲಿ ವಿಂಗಡಿಸಲಾಗಿದೆ. ಒಂದುವೇಳೆ R ಅವರು Q ಗಿಂತ ರೂ.290 ಹೆಚ್ಚು ಪಡೆದರೆ, ಒಟ್ಟು ಮೊತ್ತ ಎಷ್ಟು?

A. Rs. 1200
B. Rs. 1450 ✓
C. Rs. 1100
D. Rs. 900

**Q9** Find Time

ವಾರ್ಷಿಕ 6% ಸರಳಬಡ್ಡಿ ದರದಲ್ಲಿ ₹2,160 ಗಳಿಸಲು ₹12,000 ಮೊತ್ತವು ಎಷ್ಟು ಸಮಯ (ವರ್ಷಗಳಲ್ಲಿ) ತೆಗೆದುಕೊಳ್ಳುತ್ತದೆ?

A. 2 ವರ್ಷಗಳು
B. 3 ವರ್ಷಗಳು ✓
C. 3.5 ವರ್ಷಗಳು
D. 2.5 ವರ್ಷಗಳು

**Q10** HCF and LCM

ಎರಡು ಸಂಖ್ಯೆಗಳ HCF ಮತ್ತು LCM ಗಳ ಗುಣಲಬ್ಧ 1944 ಆಗಿದೆ. ಅವುಗಳಲ್ಲಿ ಮೊದಲ ಸಂಖ್ಯೆಯು 54 ಆಗಿದ್ದರೆ, ಎರಡನೆಯ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 42
B. 24
C. 48
D. 36 ✓

**Q11** Half-Yearly Compounding

ಅರ್ಧವರ್ಷಕ್ಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ₹10,000 ಮೊತ್ತವು ವಾರ್ಷಿಕ 8% ಚಕ್ರ ಬಡ್ಡಿಯ ದರದಲ್ಲಿ 1.5 ವರ್ಷಗಳ ಅವಧಿಯಲ್ಲಿ ಗಳಿಸುವ ಚಕ್ರಬಡ್ಡಿ (₹ ಗಳಲ್ಲಿ, ಸಮೀಪದ ಹತ್ತರ ಸ್ಥಾನದ ಪೂರ್ಣಾಂಕಕ್ಕೆ ತನ್ನಿ) ಎಷ್ಟು?

A. 1,150
B. 1,450
C. 1,350
D. 1,250 ✓

**Q12** Laws of Indices

ಒಂದು ವೇಳೆ $17^{0.3} = x$, $17^{0.5} = y$ ಮತ್ತು $x^z = y^5$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಗೆ ಸಮೀಪದಲ್ಲಿರುತ್ತದೆ.

A. 8.33 ✓
B. 7.67
C. 8.67
D. 10.33

**Q13** Percentage Increase/Decrease

ರಾಮನ್ ಅವರ ಆದಾಯವು ₹70,000 ಆಗಿದೆ. ಅವರು ತಮ್ಮ ಆದಾಯದ 26% ಅನ್ನು ಉಳಿಸುತ್ತಾರೆ. ಒಂದು ವೇಳೆ ಅವರ ಆದಾಯವು 32% ರಷ್ಟು ಹೆಚ್ಚಾದರೆ ಮತ್ತು ವೆಚ್ಚವು 45% ರಷ್ಟು ಹೆಚ್ಚಾದರೆ, ಅವರ ಉಳಿತಾಯದಲ್ಲಿ ಆದ ಬದಲಾವಣೆ ಏನು?

A. ₹910 ರಷ್ಟು ಕಡಿಮೆಯಾಗಿದೆ ✓
B. ₹908 ರಷ್ಟು ಕಡಿಮೆಯಾಗಿದೆ
C. ₹909 ರಷ್ಟು ಹೆಚ್ಚಳವಾಗಿದೆ
D. ₹913 ರಷ್ಟು ಹೆಚ್ಚಳವಾಗಿದೆ

**Q14** Profit/Loss Percentage

ರಾಜೇಶ್ ₹50,000 ದೊಂದಿಗೆ ವ್ಯವಹಾರವನ್ನು ಪ್ರಾರಂಭಿಸಿದರು. ಮೊದಲ ವರ್ಷದಲ್ಲಿ, ಅವರು 20% ಲಾಭ ಗಳಿಸಿದರು. ಎರಡನೇ ವರ್ಷದಲ್ಲಿ ಅವರು ಎಲ್ಲಾ ಹಣವನ್ನು (ಅಸಲು + ಲಾಭ) ಮರುಹೂಡಿಕೆ ಮಾಡಿದರು. ಎರಡನೇ ವರ್ಷದಲ್ಲಿ, ಅವರು 15% ನಷ್ಟವನ್ನು ಅನುಭವಿಸಿದರು. ಎರಡನೇ ವರ್ಷದ ಕೊನೆಯಲ್ಲಿ, ಅವರು ತಮ್ಮ ಉಳಿದ ವ್ಯವಹಾರ ಸ್ವತ್ತುಗಳನ್ನು ಮಾರಿ ಹೆಚ್ಚುವರಿ ₹8,000 ಅನ್ನು ಗುಡ್ ವಿಲ್ ಆಗಿ ಪಡೆದರು. ಅವರ ಮೂಲ ಹೂಡಿಕೆಯ ಮೇಲೆ ಅವರ ಒಟ್ಟಾರೆ ಶೇಕಡಾವಾರು ಲಾಭ ಅಥವಾ ನಷ್ಟ ಎಷ್ಟು?

A. 20% ಲಾಭ
B. 12% ನಷ್ಟ
C. 18% ಲಾಭ ✓
D. 15% ನಷ್ಟ

**Q15** Single Change

ಒಂದು ಕಾರ್ಖಾನೆಯ ಉತ್ಪಾದನೆಯು 1,200 ಯೂನಿಟ್‌ಗಳಿಂದ 1,500 ಯೂನಿಟ್‌ಗಳಿಗೆ ಹೆಚ್ಚಾಗಿದೆ. ಹಾಗಾದರೆ ಉತ್ಪಾದನೆಯಲ್ಲಿ ಉಂಟಾದ ಶೇಕಡಾವಾರು ಹೆಚ್ಚಳವನ್ನು ಕಂಡುಹಿಡಿಯಿರಿ.

A. 22%
B. 25% ✓
C. 30%
D. 20%

Blackbook Vocabulary — Now in the App! ▶ Download Now on Google Play

**Q16** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ I ನೇ ಅಂಗಡಿಯು 46% ಮತ್ತು 13% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 55% ಮತ್ತು 69% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 47% ಮತ್ತು 68% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 91%, 98% ಮತ್ತು 18% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ.
ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- **A. IV** ✓
- B. II
- C. I
- D. III

**Q17** Time-based Partnership

ಅಮಿತ್ ಮತ್ತು ಭರತ್ ಅವರುಗಳು ಕ್ರಮವಾಗಿ ₹40,000 ಮತ್ತು ₹55,000 ಹೂಡಿಕೆಗಳೊಂದಿಗೆ ಒಂದು ವ್ಯವಹಾರವನ್ನು ಪ್ರಾರಂಭಿಸಿದರು. 6 ತಿಂಗಳ ನಂತರ, ಚೇತನ್ ಅವರು ₹60,000 ಹೂಡಿಕೆಯೊಂದಿಗೆ ಬಂದು ಅವರೊಟ್ಟಿಗೆ ಸೇರಿಕೊಂಡರು. ಒಂದುವೇಳೆ ಗಳಿಸಿದ ವಾರ್ಷಿಕ ಲಾಭವು ₹47,400 ಆಗಿದ್ದರೆ, ಅದರಲ್ಲಿ ಭರತ್ ಅವರ ಪಾಲು ಎಷ್ಟು?

- A. ₹20,756
- **B. ₹20,856** ✓
- C. ₹20,716
- D. ₹20,886

**Q18** Two Items Mixing

ಒಂದುವೇಳೆ ಪ್ರತಿ ಲೀಟರ್‌ಗೆ ₹30 ಬೆಲೆಯ 2 ಲೀಟರ್ ಜ್ಯೂಸ್ ಅನ್ನು ಪ್ರತಿ ಲೀಟರ್‌ಗೆ ₹50 ಬೆಲೆಯ 8 ಲೀಟರ್ ಜ್ಯೂಸ್‌ನೊಂದಿಗೆ ಬೆರೆಸಿದರೆ, ಪ್ರತಿ ಲೀಟರ್ ಜ್ಯೂಸ್ ಮಿಶ್ರಣದ ಬೆಲೆ (₹ ಗಳಲ್ಲಿ) ಎಷ್ಟು?

- A. 48
- B. 44
- C. 50
- **D. 46** ✓

**Q19** Two Trains Crossing

60 km/h ವೇಗದಲ್ಲಿ ಚಲಿಸುತ್ತಿರುವ 150 m ಉದ್ದದ ಒಂದು ರೈಲು, ಈ ರೈಲಿನ ಎರಡು ಪಟ್ಟು ವೇಗದಲ್ಲಿ ಮತ್ತು ಸಮಾನಾಂತರ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಮತ್ತೊಂದು ರೈಲನ್ನು 8 ಸೆಕೆಂಡುಗಳಲ್ಲಿ ಹಾದುಹೋಗುತ್ತದೆ. ಹಾಗಾದರೆ ಎರಡನೇ ರೈಲಿನ ಉದ್ದವನ್ನು (m ಗಳಲ್ಲಿ) ಕಂಡುಹಿಡಿಯಿರಿ.

- A. 280
- B. 320
- C. 300
- **D. 250** ✓

**Q20** Two Triangle Problems

ಸಮುದ್ರ ಮಟ್ಟದಿಂದ 150 m ಎತ್ತರದ ಒಂದು ಲೈಟ್ ಹೌಸ್ ನ ಮೇಲ್ಭಾಗದಿಂದ ಎರಡು ಹಡಗುಗಳನ್ನು ನೋಡಿದಾಗ ಕಂಡುಬಂದ ಅವನತ ಕೋನಗಳು ಕ್ರಮವಾಗಿ 30° ಮತ್ತು 60° ಆಗಿವೆ. ಒಂದು ಹಡಗು ದೀಪಸ್ತಂಭದ ಒಂದೇ ಕಡೆಯಲ್ಲಿ ನೇರವಾಗಿ ಮತ್ತೊಂದರ ಹಿಂದೆ ಇದ್ದರೆ, ದೀಪಸ್ತಂಭದ ಪಾದದಿಂದ ಆ ಎರಡು ಹಡಗುಗಳವರೆಗೆ ಇರುವ ಸಮತಲ ದೂರಗಳ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ. ($\sqrt{3}$ = 1.7 ಎಂದು ಬಳಸಿ)

- A. 183 m
- **B. 170 m** ✓
- C. 168 m
- D. 178 m

Blackbook Vocabulary — Now in the App! ▸ Download Now on Google Play
generated by rank.qmaths.in

**Q21** Combined Work Rate

ರಿಯಾ ಒಂದು ಕೆಲಸವನ್ನು 15 ದಿನಗಳಲ್ಲಿ ಪೂರ್ಣಗೊಳಿಸಬಲ್ಲಳು, ಆದರೆ ನೇಹಾ ಅದೇ ಕೆಲಸವನ್ನು 20 ದಿನಗಳಲ್ಲಿ ಪೂರ್ಣಗೊಳಿಸಬಲ್ಲಳು. ಇಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ, ಆ ಕೆಲಸವನ್ನು ಪೂರ್ಣಗೊಳಿಸಲು ಅವರಿಗೆ ಎಷ್ಟು ದಿನಗಳು ಬೇಕಾಗುತ್ತದೆ?

A. $\frac{35}{4}$ ದಿನಗಳು

B. $\frac{60}{7}$ ದಿನಗಳು ✔

C. $\frac{75}{8}$ ದಿನಗಳು

D. $\frac{29}{3}$ ದಿನಗಳು

**Q22** Index Simplification

ಸರಳೀಕರಿಸಿ:

$$(7^7 \times 7^{-5} \div 7^{-4}) \div \left(7^0 \times 7^{-2} \text{ of } \left(\frac{1}{7}\right)^{-5}\right)$$

A. 343 ✔

B. 7

C. 1

D. 49

**Q23** Mean of Grouped Data

ನೀಡಿರುವ ವಿತರಣೆಯ ಸರಾಸರಿಯನ್ನು ಕಂಡುಹಿಡಿಯಿರಿ.

| ಅಂಕಗಳು | 14 | 28 | 55 | 75 | 93 |
|---|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 33 | 81 | 73 | 44 | 35 |

A. 46

B. 42

C. 50 ✔

D. 39

**Q24** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 56 ಆಗಿದ್ದರೆ, (8x + 2y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 3 | 12 | x | 5 | y | 70 |

A. 292

B. 298 ✔

C. 302

D. 294

Blackbook Vocabulary — Now in the App! ▶ Download Now on Google Play

generated by rank.qmaths.in

**Q25** Single Parameter

ಕೆಳಗಿನ ಸ್ತಂಭ ನಕ್ಷೆಯು 2018 ರಿಂದ 2023 ರವರೆಗಿನ ಸೆಲ್ಯುಲರ್ ಫೋನ್‌ಗಳ ಮಾರಾಟವನ್ನು (ಸಾವಿರಗಳಲ್ಲಿ) ತೋರಿಸುತ್ತದೆ. ನಕ್ಷೆಯನ್ನುಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ.
2021 ರಿಂದ 2023 ರವರೆಗಿನ ಸೆಲ್ಯುಲಾರ್ ಫೋನ್‌ಗಳ ಸರಾಸರಿ ಮಾರಾಟವನ್ನು (ಸಾವಿರಗಳಲ್ಲಿ) ಕಂಡುಹಿಡಿಯಿರಿ.




(sales of cellular phones over the years = ನೀಡಲಾದ ವರ್ಷಗಳಲ್ಲಿ ಸೆಲ್ಯುಲಾರ್ ಫೋನ್‌ಗಳ ಮಾರಾಟ)

A. 27 ✓

B. 26

C. 25

D. 28

Blackbook Vocabulary — Now in the App! ▶ Download Now on Google Play
generated by rank.qmaths.in

## Mathematics

25 Questions • Answer Key

**Q1** Annual Compounding

ಒಂದು ಸಸ್ಯವು ವಾರ್ಷಿಕವಾಗಿ 12.5% ರಷ್ಟು ಬೆಳೆಯುತ್ತದೆ. ಪ್ರಸ್ತುತ ಅದರ ಎತ್ತರವು 64 cm ಆಗಿದೆ. ಒಂದುವೇಳೆ ಈ ಸಸ್ಯವು ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕ ಹಾಕುವ ರೀತಿಯಲ್ಲಿ ಬೆಳೆದರೆ, 2 ವರ್ಷಗಳ ನಂತರ ಅದರ ಎತ್ತರ ಎಷ್ಟಿರುತ್ತದೆ?

- A. 81 cm ✓
- B. 88 cm
- C. 80 cm
- D. 85 cm

**Q2** Area/Volume Error

ಒಂದು ಸಿಲಿಂಡರ್‌ನ ತ್ರಿಜ್ಯವು 20% ರಷ್ಟು ಹೆಚ್ಚಾಗುತ್ತದೆ ಮತ್ತು ಅದರ ಎತ್ತರವು 10% ರಷ್ಟು ಕಡಿಮೆಯಾಗುತ್ತದೆ. ಹಾಗಾದರೆ ಅದರ ಘನಫಲದಲ್ಲಿ ಉಂಟಾದ ಶೇಕಡಾವಾರು ಬದಲಾವಣೆಯನ್ನು ಕಂಡುಹಿಡಿಯಿರಿ.

- A. 26.9% ಹೆಚ್ಚಾಗುತ್ತದೆ
- B. 29.6% ಕಡಿಮೆಯಾಗುತ್ತದೆ
- C. 26.9% ಕಡಿಮೆಯಾಗುತ್ತದೆ
- D. 29.6% ಹೆಚ್ಚಾಗುತ್ತದೆ ✓

**Q3** Average Speed

ಒಬ್ಬ ವಿದ್ಯಾರ್ಥಿಯು 10 km/hr ಸರಾಸರಿ ವೇಗದಲ್ಲಿ 12 km ಸೈಕಲ್ ಸವಾರಿ ಮಾಡುತ್ತಾನೆ. ಇಡೀ ಪ್ರಯಾಣದಲ್ಲಿ 11 km/hr ಸರಾಸರಿ ವೇಗವನ್ನು ಹೊಂದಲು ಅವನು ಮುಂದಿನ 10 km ಅನ್ನು ಎಷ್ಟು ವೇಗದಲ್ಲಿ ಕ್ರಮಿಸಬೇಕು?

- A. 15 km/hr
- B. 11 km/hr
- C. 12.5 km/hr ✓
- D. 10.8 km/hr

**Q4** Basic Time & Work

12 ಜನರು ಒಂದು ಕೆಲಸವನ್ನು 20 ದಿನಗಳಲ್ಲಿ ಮುಗಿಸಬಲ್ಲರು. ಅದೇ ಕೆಲಸವನ್ನು 30 ಜನರು ಎಷ್ಟು ದಿನಗಳಲ್ಲಿ ಮುಗಿಸುತ್ತಾರೆ?

- A. 8 ದಿನಗಳು ✓
- B. 12 ದಿನಗಳು
- C. 9 ದಿನಗಳು
- D. 11 ದಿನಗಳು

**Q5** Equal Installments

ಒಬ್ಬ ವ್ಯಕ್ತಿಯು ವಾರ್ಷಿಕ 7% ಸರಳ ಬಡ್ಡಿದರದಲ್ಲಿ 5 ವರ್ಷಗಳ ಅವಧಿಗೆ ₹15 ಲಕ್ಷ ಮೊತ್ತವನ್ನು ಸಾಲವಾಗಿ ಪಡೆದಿದ್ದಾನೆ. ಅವನು ಒಟ್ಟು ಮೊತ್ತವನ್ನು ಸಮಾನ ಮಾಸಿಕ ಕಂತುಗಳಲ್ಲಿ ಪಾವತಿಸಲು ಬಯಸಿದರೆ, ಮಾಸಿಕ ಕಂತನ್ನು ಕಂಡುಹಿಡಿಯಿರಿ.

- A. ₹33,750 ✓
- B. ₹44,000
- C. ₹32,600
- D. ₹41,640

**Q6** Half-Yearly Compounding

ಅರ್ಧ-ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕ ಹಾಕುವಂತೆ, ಒಂದು ನಿರ್ದಿಷ್ಟ ಅಸಲು ಮೊತ್ತವು 3 ವರ್ಷಗಳ ನಂತರ ₹1,600 ಆಗುತ್ತದೆ ಮತ್ತು 6 ವರ್ಷಗಳ ನಂತರ ₹6,400 ಆಗುತ್ತದೆ. ಹಾಗಾದರೆ ಅಸಲು ಮೊತ್ತ ಎಷ್ಟು?

- A. ₹400 ✓
- B. ₹410
- C. ₹440
- D. ₹375

**Q7** Laws of Indices

ಒಂದು ವೇಳೆ $102^{0.77} = x$, $102^{0.44} = y$ ಮತ್ತು $x^z = y^8$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

- A. 4.57 ✓
- B. 6.05
- C. 3.44
- D. 5.23

**Q8** MP with Discount and Profit

ಒಬ್ಬ ಅಂಗಡಿಯವನು ಒಂದು ವಸ್ತುವಿನ ಬೆಲೆಯನ್ನು ಅದರ ಅಸಲು ಬೆಲೆಗಿಂತ 44% ಹೆಚ್ಚು ನಮೂದಿಸುತ್ತಾನೆ ಮತ್ತು ನಂತರ ತಲಾ 39% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತಾನೆ. ಹಾಗಾದರೆ ಅವನಿಗಾದ ಶೇಕಡಾವಾರು ನಷ್ಟ ಎಷ್ಟು? (ಸಮೀಪದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ)

- A. 46% ✓
- B. 45%
- C. 47%
- D. 48%

Blackbook Vocabulary — Now in the App! ▶ Download Now on Google Play

**Q9** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 4 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 8 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 8 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತದೆ?

A. 4
B. 1 ✓
C. 2
D. 3

**Q10** Percentage Increase/Decrease

ರಾಮನ್ ಅವರ ಆದಾಯವು ₹34,000 ಆಗಿದೆ. ಅವರು ತಮ್ಮ ಆದಾಯದ 5.5% ಅನ್ನು ಉಳಿಸುತ್ತಾರೆ. ಒಂದು ವೇಳೆ ಅವರ ಆದಾಯವು 17% ರಷ್ಟು ಹೆಚ್ಚಾದರೆ ಮತ್ತು ವೆಚ್ಚವು 10% ರಷ್ಟು ಹೆಚ್ಚಾದರೆ, ಅವರ ಉಳಿತಾಯದಲ್ಲಿ ಆದ ಬದಲಾವಣೆ ಎಷ್ಟು?

A. ₹10,284 ಹೆಚ್ಚಾಗುತ್ತದೆ
B. ₹10,285 ಕಡಿಮೆ ಆಗುತ್ತದೆ
C. ₹2,657 ಕಡಿಮೆ ಆಗುತ್ತದೆ
D. ₹2,567 ಹೆಚ್ಚಾಗುತ್ತದೆ ✓

**Q11** Rules for 2,3,4,5,6

58A4 ಅನ್ನು 4 ರಿಂದ ನಿಶ್ಶೇಷವಾಗಿ ಭಾಗಿಸಲು, A ಯ ಸ್ಥಾನದಲ್ಲಿ ಬರಬೇಕಾದ ಅತಿ ಚಿಕ್ಕ ಅಂಕಿಯ ಮೌಲ್ಯವನ್ನು ಕಂಡುಹಿಡಿಯಿರಿ.

A. 2
B. 6
C. 0 ✓
D. 4

**Q12** Simple Mean

4, 8 ಮತ್ತು 12 ಈ ಸಂಖ್ಯೆಗಳ ಸರಾಸರಿ ಎಷ್ಟು?

A. 8 ✓
B. 12
C. 10
D. 6

**Q13** Still Water Speed

ಒಬ್ಬ ಅಂಬಿಗನು ನದಿಯಲ್ಲಿ ದೋಣಿ ನಡೆಸುತ್ತಿದ್ದಾನೆ. ಅವನು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಚಲಿಸಲು 4 ಗಂಟೆಗಳನ್ನು ತೆಗೆದುಕೊಳ್ಳುತ್ತಾನೆ ಮತ್ತು ಪ್ರವಾಹದ ದಿಕ್ಕಿನಲ್ಲಿ ಚಲಿಸಲು 2.5 ಗಂಟೆಗಳನ್ನು ತೆಗೆದುಕೊಳ್ಳುತ್ತಾನೆ. ಒಂದುವೇಳೆ ನದಿಯ ಪ್ರವಾಹದ ವೇಗ 3 km/h ಆಗಿದ್ದರೆ, ನಿಶ್ಚಲ ನೀರಿನಲ್ಲಿ ದೋಣಿಯ ವೇಗ ಎಷ್ಟು?

A. 14 km/h
B. 11 km/h
C. 13 km/h ✓
D. 12 km/h

**Q14** Two Successive Changes

ಒಂದು ಲ್ಯಾಪ್‌ಟಾಪ್‌ನ ಬೆಲೆ ಮೊದಲ ವರ್ಷದಲ್ಲಿ 20% ಹೆಚ್ಚಾಯಿತು ಮತ್ತು ಎರಡನೇ ವರ್ಷದಲ್ಲಿ ಮತ್ತೆ 10% ಹೆಚ್ಚಾಯಿತು. ಒಂದುವೇಳೆ ಅದರ ಮೂಲ ಬೆಲೆ ₹50,000 ಆಗಿದ್ದರೆ, ಎರಡು ವರ್ಷಗಳ ನಂತರದ ಅದರ ಅಂತಿಮ ಬೆಲೆಯನ್ನು ಕಂಡುಹಿಡಿಯಿರಿ.

A. ₹68,000
B. ₹67,000
C. ₹66,000 ✓
D. ₹65,000

**Q15** Two Triangle Problems

ಒಂದು ಸರೋವರದ ಮಟ್ಟದಿಂದ 60 m ಮೇಲಿರುವ ಒಂದು ಬಿಂದುವಿಂದ ಒಂದು ಮೋಡದವರೆಗೆ ಮೂಡಿದ ಉನ್ನತ ಕೋನವು $30^\circ$ ಆಗಿದೆ, ಮತ್ತು ಅದರ ಪ್ರತಿಫಲನದ ಪತನ ಕೋನವು $60^\circ$ ಆಗಿದೆ. ಹಾಗಾದರೆ ಮೋಡದ ಎತ್ತರವನ್ನು ಕಂಡುಹಿಡಿಯಿರಿ.

A. 100 m
B. 120 m ✓
C. 60 m
D. 80 m

**Q16** Weighted Average

1, 3 ಮತ್ತು 14 ಸಂಖ್ಯೆಗಳಿಗೆ ಕ್ರಮವಾಗಿ 3, 1 ಮತ್ತು 1 ತೂಕಗಳನ್ನು ನಿಗದಿಪಡಿಸಲಾಗಿದೆ. ಅವುಗಳ ತೂಕಿತ ಸಮಾಂತರ ಮಾಧ್ಯವನ್ನು (weighted arithmetic mean) ಕಂಡುಹಿಡಿಯಿರಿ.

A. 3
B. 6
C. 4 ✓
D. 8

Blackbook Vocabulary — Now in the App! ▸ Download Now on Google Play

**Q17** (a+b)^2, (a-b)^2

ಈ ಕೆಳಗಿನ ಗಣಿತೋಕ್ತಿಯನ್ನು ಸರಳೀಕರಿಸಿ.

$$(2x + 3y)^2 - (2x - 3y)^2 + 12xy$$

A. 36xy ✓

B. 24xy

C. 60xy

D. 48xy

**Q18** Building/Tower Problems

ಒಂದು ಗೋಪುರದ ತುದಿಯಿಂದ ನೆಲದ ಮೇಲಿನ A ಬಿಂದುವಿಗೆ ಇರುವ ಅವನತ ಕೋನವು $30^\circ$ ಆಗಿದೆ. ಗೋಪುರದ ಮೇಲಿನ ಅದೇ ಬಿಂದುವಿನಿಂದ A ಬಿಂದುವಿನ ಮೇಲಿರುವ ಬಲೂನಿಗೆ ಲಂಬವಾಗಿ ಇರುವ ಉನ್ನತ ಕೋನವು $60^\circ$ ಆಗಿದೆ. ಒಂದುವೇಳೆ ಗೋಪುರ ಮತ್ತು A ಬಿಂದುವಿನ ನಡುವಿನ ಸಮತಲ ದೂರವು 40 ಮೀಟರ್ ಆಗಿದ್ದರೆ, A ಬಿಂದುವಿನ ಮೇಲಿರುವ ಬಲೂನಿನ ಎತ್ತರ (ಮೀಟರ್‌ಗಳಲ್ಲಿ) ಎಷ್ಟು?

A. $\frac{80}{\sqrt{3}}$ ✓

B. $\frac{40}{\sqrt{3}}$

C. $\frac{120}{\sqrt{3}}$

D. $\frac{160}{\sqrt{3}}$

**Q19** False Weight

ಒಬ್ಬ ಅಪ್ರಾಮಾಣಿಕ ಅಂಗಡಿಯವನು ತನ್ನ ಸರಕುಗಳನ್ನು ಅಸಲು ಬೆಲೆಗೆ ಮಾರಾಟ ಮಾಡುವುದಾಗಿ ಭರವಸೆ ನೀಡುತ್ತಾನೆ. ಆದರೆ, ಅವನು ವಾಸ್ತವವಾಗಿ ಅದರ ಮೇಲೆ ಬರೆದಿರುವುದಕ್ಕಿಂತ 20% ಕಡಿಮೆ ತೂಕವಿರುವ ಬಟ್ಟನ್ನು ಬಳಸುತ್ತಾನೆ. ಹಾಗಾದರೆ ಅವನ ಲಾಭದ ಶೇಕಡಾವಾರು ಪ್ರಮಾಣವನ್ನು ಕಂಡುಹಿಡಿಯಿರಿ.

A. $26.02\%$

B. $24.6\%$

C. $25\%$ ✓

D. $23.62\%$

**Q20** Grouped Data Median

ಕೊಟ್ಟಿರುವ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ.

| ವರ್ಗಾಂತರ | 0-5 | 5-10 | 10-15 | 15-20 | 20-25 | 25-30 |
|---|---|---|---|---|---|---|
| ಆವರ್ತನ | 3 | 7 | 5 | 4 | 8 | 6 |

A. 15.28

B. 12.62

C. 18.54

D. 16.875 ✓

Blackbook Vocabulary — Now in the App! ► Download Now on Google Play

**Q21** Laws of Indices

x ಅನ್ನು ಕಂಡುಹಿಡಿಯಿರಿ.

$$[\{(\frac{3}{4})^2\}^4]^{x+3} = [\{(\frac{9}{16})^{1/2}\}^{x-2}]^2$$

A. $-2\frac{1}{4}$

B. $-4\frac{2}{3}$ ✓

C. $3\frac{1}{2}$

D. $1\frac{3}{4}$

**Q22** Mean Proportional

6.5 ಮತ್ತು 24 ರ ಸರಾಸರಿ ಸಮಾನುಪಾತವನ್ನು ಕಂಡುಹಿಡಿಯಿರಿ.

A. $\sqrt{39}$

B. $4\sqrt{39}$

C. $2\sqrt{39}$ ✓

D. $3\sqrt{39}$

**Q23** SSS, SAS, ASA, AAS, RHS

ΔXYZ ಮತ್ತು ΔPQR ನಲ್ಲಿ, ಒಂದು ವೇಳೆ XY = PQ ಮತ್ತು YZ = QR ಆಗಿದ್ದರೆ, _________ ಆಗಿರುವಾಗ, ΔXYZ≅ ΔPQR ಆಗಿರುತ್ತದೆ ಎಂದು ನಿರ್ಣಯಿಸಬಹುದು.

A. $\angle YXZ = \angle QPR$

B. $\angle XYZ = \angle PQR$ ✓

C. $\angle XZY = \angle PRQ$

D. $\angle XZY = \angle QPR$

**Q24** Sector Area & Arc Length

ಒಂದು ವೃತ್ತಾಕಾರದ ಪಥದ ತ್ರಿಜ್ಯವು 28 m ಆಗಿದೆ. 90° ಅನ್ನು ರೂಪಿಸುವ ಒಂದು ತ್ರಿಜ್ಯಾಂತರ ಖಂಡದ (ಎರಡು ತ್ರಿಜ್ಯಗಳಿಂದ ಆವೃತವಾಗಿರುವ ಪೈ-ಆಕಾರದ ಪ್ರದೇಶ ಮತ್ತು ಅವುಗಳ ಅಂತಿಮ ಬಿಂದುಗಳನ್ನು ಸಂಪರ್ಕಿಸುವ ಚಾಪ) ಸುತ್ತಲೂ ಅದರ ಗಡಿಯ ಉದ್ದಕ್ಕೂ ಮೂರು ಬಾರಿ ಬೇಲಿಯನ್ನು ಹಾಕಲು ಪ್ರತಿ ಮೀಟರ್‌ಗೆ ₹15 ರ ದರದಂತೆ ಒಟ್ಟು ಎಷ್ಟು ಖರ್ಚಾಗುತ್ತದೆ? ($\pi = \frac{22}{7}$ ಬಳಸಿ)

A. ₹5,400

B. ₹1,800

C. ₹4,500 ✓

D. ₹1,500

Blackbook Vocabulary — Now in the App! ► Download Now on Google Play

**Q25** Year-on-Year Comparison

2024 ಮತ್ತು 2025 ರಲ್ಲಿ ಒಂದು ಕಂಪನಿಯ ವೆಚ್ಚದ ವಿತರಣೆಯನ್ನು, ಕೆಳಗೆ ನೀಡಿರುವ ಪೈ ಚಾರ್ಟ್‌ಗಳು ತೋರಿಸುತ್ತವೆ. 2024 ರಲ್ಲಿ ಒಟ್ಟು ಖರ್ಚು ₹18,00,000 ಮತ್ತು 2025 ರಲ್ಲಿ ಒಟ್ಟು ಖರ್ಚು ₹24,00,000 ಆಗಿತ್ತು. 2024 ರಿಂದ 2025 ರವರೆಗಿನ ಸಂಶೋಧನೆಯ ಮೇಲಿನ ವೆಚ್ಚದಲ್ಲಿ (₹ ಗಳಲ್ಲಿ) ಆಗಿರುವ ಹೆಚ್ಚಳವನ್ನು ಕಂಡುಹಿಡಿಯಿರಿ.







Salaries : ಸಂಬಳ
Marketing : ಮಾರ್ಕೆಟಿಂಗ್
Research : ಸಂಶೋಧನೆ
Transport : ಸಾರಿಗೆ
Miscellaneous : ಇತರೆ

A. 2,70,000

B. 2,10,000 ✓

C. 2,40,000

D. 1,80,000

Blackbook Vocabulary — Now in the App! ► Download Now on Google Play
generated by rank.qmaths.in

## Mathematics

25 Questions • Answer Key

**Q1** Annual Compounding

ಚಕ್ರಬಡ್ಡಿ ದರದಲ್ಲಿ ಒಂದು ಮೊತ್ತವು 4 ವರ್ಷಗಳ ನಂತರ ₹1,200 ಆಗುತ್ತದೆ ಮತ್ತು 8 ವರ್ಷಗಳ ನಂತರ ₹2,400 ಆಗುತ್ತದೆ. ಹಾಗಾದರೆ ಅಸಲು ಮೊತ್ತ ಎಷ್ಟು?

A. ₹575
B. ₹600 ✓
C. ₹598
D. ₹640

**Q2** Annual Compounding

ಅರುಣ್ ಅವರ ಬಳಿ ₹1,681 ಇತ್ತು. ಅವರು ಈ ಮೊತ್ತವನ್ನು ತಮ್ಮಿಬ್ಬರು ಪುತ್ರರಾದ ಮಹೇಶ್ ಮತ್ತು ವಿಜಯ್ ನಡುವೆ ಹಂಚುತ್ತಾ ಅವರವರ ಪಾಲುಗಳನ್ನು ವರ್ಷಕ್ಕೊಮ್ಮೆ ಚಕ್ರ ಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, ವಾರ್ಷಿಕ 5% ಚಕ್ರ ಬಡ್ಡಿಯ ದರದಲ್ಲಿ ಹೂಡಿಕೆ ಮಾಡುವಂತೆ ಹೇಳಿದರು. ಮಹೇಶ್ ಅವರ 14 ವರ್ಷಗಳ ಹೂಡಿಕೆಯ ಫಲದ ಮೌಲ್ಯವು ವಿಜಯ್ ಅವರ 15 ವರ್ಷಗಳ ಹೂಡಿಕೆಯ ಫಲದ ಮೌಲ್ಯಕ್ಕೆ ಸಮನಾಗಿರುವುದು ಕಂಡುಬಂತು. ಹಾಗಾದರೆ ಅರುಣ್ ಅವರು ಮಹೇಶ್ ಅವರಿಗೆ ಎಷ್ಟು ಹಣವನ್ನು (₹ ಗಳಲ್ಲಿ) ನೀಡಿದ್ದರು?

A. 920
B. 820
C. 711
D. 861 ✓

**Q3** Basic Profit & Loss

ಒಬ್ಬ ಅಂಗಡಿಯವನು ತಲಾ ₹1,200 ಕ್ಕೆ ಎರಡು ಕೈಗಡಿಯಾರಗಳನ್ನು ಖರೀದಿಸುತ್ತಾನೆ. ಅವನು ಮೊದಲನೇ ಕೈಗಡಿಯಾರವನ್ನು 15% ಲಾಭಕ್ಕೆ ಮತ್ತು ಎರಡನೇ ಕೈಗಡಿಯಾರವನ್ನು 10% ನಷ್ಟಕ್ಕೆ ಮಾರಾಟ ಮಾಡುತ್ತಾನೆ. ನಂತರ ಅವನು ಮೊದಲನೇ ಕೈಗಡಿಯಾರವನ್ನು ಖರೀದಿಸಿದ ಖರೀದಿದಾರನಿಗೆ ₹100 ಕ್ಯಾಶ್‌ಬ್ಯಾಕ್ ನೀಡುತ್ತಾನೆ. ಹಾಗಾದರೆ ಅಂಗಡಿಯವನಿಗೆ ಅಗುವ ಒಟ್ಟಾರೆ ಲಾಭ ಅಥವಾ ನಷ್ಟ ಎಷ್ಟು?

A. ₹60 ಲಾಭ
B. ₹30 ನಷ್ಟ
C. ₹15 ಲಾಭ
D. ₹40 ನಷ್ಟ ✓

**Q4** Basic TSD

ಕೌಶಲ್ ಅವರು ಗಂಟೆಗೆ 24 km ವೇಗದಲ್ಲಿ 2 ಗಂಟೆ 55 ನಿಮಿಷ ಪ್ರಯಾಣ ಮಾಡಿದರು. ಹಾಗಾದರೆ, 5 ಗಂಟೆಗಳಲ್ಲಿ ಅದೇ ದೂರವನ್ನು ಕ್ರಮಿಸಲು ಅವರು ಯಾವ ವೇಗದಲ್ಲಿ (km/h ಯಲ್ಲಿ) ಪ್ರಯಾಣ ಮಾಡಬೇಕು?

A. 11
B. 13
C. 12
D. 14 ✓

**Q5** Curved & Total Surface Area

ಒಂದು ಶಂಕುವಿನ ಓರೆ ಎತ್ತರ 15 cm ಮತ್ತು ಅದರ ಪಾದದ ತ್ರಿಜ್ಯ 9 cm ಆಗಿದೆ. ಈ ಶಂಕುವನ್ನು ಮಾಡಲು 15 cm ತ್ರಿಜ್ಯ ಮತ್ತು 120° ಕೇಂದ್ರ ಕೋನ ಹೊಂದಿರುವ ಒಂದು ವೃತ್ತದ ತ್ರಿಜ್ಯಖಂಡವನ್ನು ಬಳಸಲಾಗುತ್ತದೆ. ಹಾಗಾದರೆ ಶಂಕುವಿನ ಒಟ್ಟು ಮೇಲ್ಮೈ ವಿಸ್ತೀರ್ಣ ಎಷ್ಟು?

A. 261π cm2
B. 226π cm2
C. 312π cm2
D. 216π cm2 ✓

**Q6** Dividing Quantity in Ratio

ಒಂದು ಮೊತ್ತವನ್ನು A, B, C ಮತ್ತು D ಅವರ ನಡುವೆ 3 : 7 : 9 : 13 ರ ಅನುಪಾತದಲ್ಲಿ ಹಂಚಲಾಗಿದೆ. ಒಂದು ವೇಳೆ D ಅವರ ಪಾಲು ₹6,890 ಆಗಿದ್ದರೆ, A ಅವರ ಪಾಲು (₹ ಗಳಲ್ಲಿ) ಎಷ್ಟು?

A. 1,560
B. 1,590 ✓
C. 1,530
D. 1,500

**Q7** Find Principal

ಒಂದು ವೇಳೆ ಒಂದು ಮೊತ್ತದ ಮೇಲೆ ವಾರ್ಷಿಕ 5% ಬಡ್ಡಿ ದರದಲ್ಲಿ 3 ವರ್ಷಗಳ ಅವಧಿಗೆ ಗಳಿಸಿರುವ ಸರಳ ಬಡ್ಡಿಯು ₹1,500 ಆಗಿದ್ದರೆ, ಆ ಮೊತ್ತವನ್ನು ಕಂಡು ಹಿಡಿಯಿರಿ.

A. ₹8,000
B. ₹9,000
C. ₹10,000 ✓
D. ₹7,000

Blackbook Vocabulary — Now in the App! ▶ Download Now on Google Play

**Q8** HCF and LCM

ಎರಡು ಸಂಖ್ಯೆಗಳು 12 ಮತ್ತು 18 ಆಗಿವೆ. ಅವುಗಳ **ಮ.ಸಾ.ಅ.** ಮತ್ತು **ಲ.ಸಾ.ಅ.** ಗಳ ಗುಣಲಬ್ಧವೇನು?

- A. 324
- B. 432
- C. 216 ✓
- D. 108

**Q9** HCF/LCM Word Problems

ಎರಡು ಸಂಖ್ಯೆಗಳ ಮ.ಸಾ.ಅ. ಮತ್ತು ಲ.ಸಾ.ಅ. ಕ್ರಮವಾಗಿ 4 ಮತ್ತು 288 ಆಗಿದೆ. ಅದರಲ್ಲಿ ಒಂದು ಸಂಖ್ಯೆಯು 32 ಆಗಿದ್ದರೆ, ಇನ್ನೊಂದು ಸಂಖ್ಯೆ ಯಾವುದು?

- A. 36 ✓
- B. 24
- C. 48
- D. 18

**Q10** Leaving Midway

ಅಂಶು ಅವರು ಒಂದು ಕೆಲಸವನ್ನು 24 ದಿನಗಳಲ್ಲಿ ಮಾಡಬಲ್ಲರು ಮತ್ತು ಕಾಜಲ್ ಆ ಕೆಲಸವನ್ನು 28 ದಿನಗಳಲ್ಲಿ ಮಾಡಬಲ್ಲರು. ಅವರಿಬ್ಬರೂ 6 ದಿನಗಳ ಕಾಲ ಒಟ್ಟಿಗೆ ಕೆಲಸ ಮಾಡುತ್ತಾರೆ, ನಂತರ ಅಂಶು ಕೆಲಸವನ್ನು ಬಿಡುತ್ತಾಳೆ. ಉಳಿದ ಕೆಲಸವನ್ನು ಕಾಜಲ್ ಒಬ್ಬಳೇ ಪೂರ್ಣಗೊಳಿಸುತ್ತಾಳೆ. ಹಾಗಾದರೆ ಎಷ್ಟು ದಿನಗಳಲ್ಲಿ ಇಡೀ ಕೆಲಸ ಪೂರ್ಣಗೊಳ್ಳುತ್ತದೆ?

- A. 24 ದಿನಗಳು
- B. 18 ದಿನಗಳು
- C. 28 ದಿನಗಳು
- D. 21 ದಿನಗಳು ✓

**Q11** Mean Proportional

ಒಂದು ವೇಳೆ 7 ಮತ್ತು 20 ಎರಡು ಸಂಖ್ಯೆಗಳಾಗಿದ್ದರೆ, ಅವುಗಳ ಸರಾಸರಿ ಸಮಾನುಪಾತ ಎಷ್ಟು?

- A. $2\sqrt{35}$ ✓
- B. $14\sqrt{10}$
- C. $10\sqrt{15}$
- D. $16\sqrt{5}$

**Q12** Median

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆ ಕ್ರಮವಾಗಿ 46.6 ಮತ್ತು 45.1 ಆಗಿರುತ್ತದೆ. ಪ್ರಾಯೋಗಿಕ ಸೂತ್ರವನ್ನು ಬಳಸಿ ಆ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ.

- A. 46.7
- B. 46.1 ✓
- C. 47.9
- D. 46.8

**Q13** Price and Consumption

ಪೆಟ್ರೋಲ್‌ನ ಬೆಲೆ 10% ಹೆಚ್ಚಾಗುತ್ತದೆ. ಪೆಟ್ರೋಲ್ ಮೇಲಿನ ಒಟ್ಟು ವೆಚ್ಚವು ಕೇವಲ 5% ಹೆಚ್ಚಾಗಬೇಕಾದರೆ ಒಬ್ಬ ವ್ಯಕ್ತಿಯು ತನ್ನ ಬಳಕೆಯನ್ನು ಎಷ್ಟು ಶೇಕಡಾವಾರು ಕಡಿಮೆ ಮಾಡಬೇಕು? (ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

- A. 4.55% ✓
- B. 4.45%
- C. 4.15%
- D. 4.35%

**Q14** Rectangle & Square

ಒಂದು ಆಯತದ ವಿಸ್ತೀರ್ಣವು 12 $cm^2$ ಮತ್ತು ಅದರ ಕರ್ಣವು 5 cm ಆಗಿದ್ದರೆ, ಆಯತದ ಸುತ್ತಳತೆಯನ್ನು ಕಂಡುಹಿಡಿಯಿರಿ.

- A. 14 cm ✓
- B. 16 cm
- C. 15 cm
- D. 13 cm

**Q15** Round Trip

ಒಬ್ಬ ಮನುಷ್ಯನು ನಿಶ್ಚಲ ನೀರಿನಲ್ಲಿ 9 km/h ವೇಗದಲ್ಲಿ ದೋಣಿ ನಡೆಸಬಲ್ಲನು. ನದಿಯು 5 km/h ವೇಗದಲ್ಲಿ ಹರಿಯುವಾಗ, ಅವನು ಒಂದು ನಿರ್ದಿಷ್ಟ ಸ್ಥಳಕ್ಕೆ ದೋಣಿ ನಡೆಸಿ ಮತ್ತು ಹಿಂತಿರುಗಲು 2.4 ಗಂಟೆಗಳನ್ನು ತೆಗೆದುಕೊಳ್ಳುತ್ತಾನೆ. ಆ ಸ್ಥಳವು ಎಷ್ಟು ದೂರದಲ್ಲಿದೆ? (2 ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

- A. 8.18 km
- B. 7.47 km ✓
- C. 6.42 km
- D. 9.54 km

Blackbook Vocabulary — Now in the App! ► Download Now on Google Play

**Q16** Rules for 2,3,4,5,6

ಒಂದು ವೇಳೆ 91056A4 ಎಂಬ 7-ಅಂಕಿ ಸಂಖ್ಯೆಯನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದಾದರೆ, A ಯ ಕನಿಷ್ಠ ಮೌಲ್ಯ ಎಷ್ಟು?

A. 10

B. 2 ✓

C. 5

D. 1

**Q17** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
I ನೇ ಅಂಗಡಿಯು 78% ಮತ್ತು 25% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 83% ಮತ್ತು 29% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 33% ಮತ್ತು 81% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 84%, 83% ಮತ್ತು 82% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. III

B. II

C. I

D. IV ✓

**Q18** Two Successive Changes

ಒಬ್ಬ ಅಧಿಕಾರಿಯ ಪ್ರಸ್ತುತ ಸಂಬಳವು ₹15,000 ಆಗಿದೆ. ಮೊದಲ ವರ್ಷದಲ್ಲಿ ಅದನ್ನು 10% ರಷ್ಟು ಹೆಚ್ಚಿಸಲಾಯಿತು ಮತ್ತು ಎರಡನೇ ವರ್ಷದಲ್ಲಿ ಅದನ್ನು 20% ರಷ್ಟು ಕಡಿಮೆ ಮಾಡಲಾಯಿತು. ಹಾಗಾದರೆ ಎರಡನೇ ವರ್ಷದ ಕೊನೆಯಲ್ಲಿ ಅವರ ಸಂಬಳ ಎಷ್ಟು?

A. ₹13,800

B. ₹13,600

C. ₹13,200 ✓

D. ₹13,400

**Q19** Weighted Average

ಒಂದು ಕಾರ್ಖಾನೆಯಲ್ಲಿ 90 ಕಾರ್ಮಿಕರ ಸರಾಸರಿ ದಿನಗೂಲಿ ₹140 ಆಗಿದೆ. ಮತ್ತು ಮಹಿಳಾ ಕಾರ್ಮಿಕರ ಸರಾಸರಿ ದಿನಗೂಲಿ ₹130. ಒಂದುವೇಳೆ ಮೂರನೇ ಒಂದು ಭಾಗದಷ್ಟು ಕಾರ್ಮಿಕರು ಪುರುಷರಾಗಿದ್ದರೆ, ಪುರುಷ ಕಾರ್ಮಿಕರ ಸರಾಸರಿ ದಿನಗೂಲಿ ಎಷ್ಟು?

A. ₹156

B. ₹164

C. ₹152

D. ₹160 ✓

**Q20** Weighted Average

ಒಬ್ಬ ವಿದ್ಯಾರ್ಥಿಯು 2 ಮತ್ತು 3 ತೂಕಗಳಿರುವ ಎರಡು ಪರೀಕ್ಷೆಗಳಲ್ಲಿ ಕ್ರಮವಾಗಿ 60 ಮತ್ತು 80 ಸ್ಕೋರ್ ಮಾಡಿದ್ದಾನೆ. ಹಾಗಾದರೆ ತೂಕಿತ ಸರಾಸರಿ ಸ್ಕೋರ್ ಎಷ್ಟು?

A. 75

B. 72 ✓

C. 73

D. 70

**Q21** (a+b)^2, (a-b)^2

x $m^2$ ವಿಸ್ತೀರ್ಣ ಹೊಂದಿರುವ ಒಂದು ಚೌಕಾಕಾರದ ವಿಸ್ತೀರ್ಣಕ್ಕೆ, $\frac{1}{4}\sqrt{x}\ m^2$ ವಿಸ್ತೀರ್ಣ ಹೊಂದಿರುವ ಒಂದು ಭಾಗ ಮತ್ತು $a^2$ $m^2$ ವಿಸ್ತೀರ್ಣ ಹೊಂದಿರುವ ಒಂದು ಸಣ್ಣ ಜಾಗವನ್ನು ಕೂಡಿಸಲಾಗುತ್ತದೆ. ಒಂದುವೇಳೆ x ಮತ್ತು ಸ್ಥಿರಾಂಕಗಳ ಘಾತಗಳನ್ನು ಬಳಸಿಕೊಂಡು ಒಟ್ಟು ವಿಸ್ತೀರ್ಣವನ್ನು ಪೂರ್ಣ ವರ್ಗದ ರೂಪದಲ್ಲಿ ನಿರೂಪಿಸಬಹುದಾದರೆ, a ನ ಧನಾತ್ಮಕ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{1}{16}$

B. $\frac{1}{4}$

C. $\frac{1}{8}$ ✓

D. $\frac{1}{2}$

Blackbook Vocabulary — Now in the App! ▶ Download Now on Google Play

**Q22** Basic Trigonometric Ratios

ಒಂದು ವೇಳೆ θ ಎಂಬುದು ಒಂದು ಲಘು ಕೋನವಾಗಿದ್ದರೆ ಮತ್ತು 9sinθ = 5 ಆಗಿದ್ದರೆ, $\frac{2}{3}\sqrt{5\cot^2\theta - 14\tan^2\theta}$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{5}{\sqrt{11}}$

B. $\frac{11}{\sqrt{5}}$

C. $\sqrt{\frac{11}{5}}$ ✓

D. $\sqrt{\frac{5}{11}}$

**Q23** Double Pie Chart

ನೀಡಿರುವ ಎರಡು ಪೈ ನಕ್ಷೆಗಳನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ. ಮೊದಲನೇ ಪೈ ನಕ್ಷೆಯು 2024 ರಲ್ಲಿ ಆರು ಹಳ್ಳಿಗಳಲ್ಲಿದ್ದ ಒಟ್ಟು ಜನಸಂಖ್ಯೆಯ ಶೇಕಡಾವಾರು ಹಂಚಿಕೆಯನ್ನು ತೋರಿಸುತ್ತದೆ ಮತ್ತು ಎರಡನೇ ಪೈ ನಕ್ಷೆಯು 2024 ರಲ್ಲಿ ಈ ಆರು ಹಳ್ಳಿಗಳಲ್ಲಿದ್ದ ಮಹಿಳೆಯರ ಜನಸಂಖ್ಯೆಯ ಶೇಕಡಾವಾರು ಹಂಚಿಕೆಯನ್ನು ತೋರಿಸುತ್ತದೆ.




T ಮತ್ತು P ಗ್ರಾಮಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಒಟ್ಟು ಪುರುಷರ ಸಂಖ್ಯೆ ಎಷ್ಟಾಗುತ್ತದೆ?

A. 60,000

B. 37,500

C. 30,000 ✓

D. 75,000

**Q24** Parallel Lines & Transversal

ಎರಡು ಸಮಾಂತರ ರೇಖೆಗಳನ್ನು ಒಂದು ಛೇದಕರೇಖೆಯು ಛೇದಿಸುತ್ತದೆ. ಒಂದು ವೇಳೆ ಒಂದು ಆಂತರಿಕ ಕೋನಗಳು 70° ಅಳತೆಯನ್ನು ಹೊಂದಿದ್ದರೆ, ಛೇದಕರೇಖೆಯ ಒಂದೇ ಬದಿಯಲ್ಲಿನ ಅನುಕ್ರಮ ಆಂತರಿಕ ಕೋನದ ಅಳತೆಯನ್ನು ಕಂಡುಹಿಡಿಯಿರಿ.

A. $35^\circ$

B. $140^\circ$

C. $70^\circ$

D. $110^\circ$ ✓

Blackbook Vocabulary — Now in the App! ► Download Now on Google Play

generated by rank.qmaths.in

**Q25** Trigonometric Identities

ಇದನ್ನು ಸರಳೀಕರಿಸಿ;

$$\frac{\sin A - \sin B}{\cos A + \cos B} + \frac{\cos A - \cos B}{\sin A + \sin B} + \frac{2(1 + \cos A)(1 - \sin A)}{(1 - \sin A + \cos A)^2}$$

A. sinA

B. 0

C. 1 ✓

D. secA

Blackbook Vocabulary — Now in the App! ▶ Download Now on Google Play

## Mathematics

25 Questions • Answer Key

**Q1** Arithmetic Mean

ಈ ಕೆಳಗಿನ ಸಂಖ್ಯೆಗಳ ಸರಾಸರಿಯನ್ನು ಲೆಕ್ಕಹಾಕಿ: 283, 261, 253, 175, 186 ಮತ್ತು 192

A. 220
B. 225 ✓
C. 230
D. 235

**Q2** Direct Proportion

ಒಂದು ಡಜನ್ ನೋಟ್‌ಬುಕ್‌ಗಳ ಬೆಲೆ ₹360 ಆಗಿದ್ದರೆ, ಅಂತಹ 5 ನೋಟ್‌ಬುಕ್‌ಗಳ ಬೆಲೆ ಎಷ್ಟು?

A. ₹150 ✓
B. ₹120
C. ₹180
D. ₹160

**Q3** Equal Installments

ಮಿಸ್ಟರ್. X ಅವರು 40 ತಿಂಗಳಿಗೆ ₹50,000 ಸಾಲ ಪಡೆಯುತ್ತಾರೆ. ಒಂದು ವೇಳೆ ಅವರು ಮಾಸಿಕ ಕಂತಾಗಿ ₹1,625 ಮರುಪಾವತಿಸಿದ್ದರೆ, ಸರಳ ಬಡ್ಡಿದರವನ್ನು ಕಂಡುಹಿಡಿಯಿರಿ.

A. 8%
B. 7.5%
C. 6.8%
D. 9% ✓

**Q4** Family Age Problems

ಒಬ್ಬ ತಾಯಿ ಮತ್ತು ಆಕೆಯ ಮಗಳ ಪ್ರಸ್ತುತ ವಯಸ್ಸುಗಳ ಮೊತ್ತವು 50 ವರ್ಷಗಳು. ಐದು ವರ್ಷಗಳ ಹಿಂದೆ, ತಾಯಿಯ ವಯಸ್ಸು ತನ್ನ ಮಗಳ ವಯಸ್ಸಿನ ಏಳು ಪಟ್ಟು ಆಗಿತ್ತು. ಹಾಗಾದರೆ ಮಗಳ ಪ್ರಸ್ತುತ ವಯಸ್ಸು ಎಷ್ಟು?

A. 10 ವರ್ಷಗಳು ✓
B. 11 ವರ್ಷಗಳು
C. 14 ವರ್ಷಗಳು
D. 12 ವರ್ಷಗಳು

**Q5** Find Principal

ಒಂದು ನಿರ್ದಿಷ್ಟ ಹಣವನ್ನು ವಾರ್ಷಿಕ 3% ಸರಳ ಬಡ್ಡಿಯ ದರದಲ್ಲಿ 3 ವರ್ಷಗಳವರೆಗೆ ಹೂಡಿಕೆ ಮಾಡಲಾಗುತ್ತದೆ. ಇದರಿಂದ ಬಂದ ಸರಳ ಬಡ್ಡಿಯು, ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ವರ್ಷಕ್ಕೆ 6% ರಂತೆ 2 ವರ್ಷಗಳವರೆಗೆ ಹೂಡಿಕೆ ಮಾಡಿದ ₹6,000 ಮೊತ್ತದ ಮೇಲಿನ ಚಕ್ರಬಡ್ಡಿಯ ಅರ್ಧದಷ್ಟಿರುತ್ತದೆ. ಹಾಗಾದರೆ ಸರಳ ಬಡ್ಡಿಯಲ್ಲಿ ಹೂಡಿಕೆ ಮಾಡಿದ ಅಸಲು ಮೊತ್ತವನ್ನು ಕಂಡುಹಿಡಿಯಿರಿ.

A. ₹3,650
B. ₹4,120 ✓
C. ₹3,890
D. ₹4,350

**Q6** Finding Value from Percentage

ಒಂದು ಚುನಾವಣೆಯಲ್ಲಿ, ಒಟ್ಟು 8,000 ಮತಗಳು ಚಲಾವಣೆಯಾದವು. ಒಟ್ಟು ಮತಗಳಲ್ಲಿ X ಅಭ್ಯರ್ಥಿಯು 55 % ಮತಗಳನ್ನು ಪಡೆದರು. ಹಾಗಾದರೆ X ಅಭ್ಯರ್ಥಿಯು ಪಡೆದ ಮತಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 4,000
B. 4,600
C. 4,200
D. 4,400 ✓

**Q7** Half-Yearly Compounding

ಅರ್ಧವರ್ಷಕ್ಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ₹12,000 ಮೊತ್ತವು ವಾರ್ಷಿಕ 10% ಚಕ್ರ ಬಡ್ಡಿಯ ದರದಲ್ಲಿ 1.5 ವರ್ಷಗಳ ಅವಧಿಗೆ ಗಳಿಸುವ ಚಕ್ರಬಡ್ಡಿ (₹ ಗಳಲ್ಲಿ, ಸಮೀಪದ ಹತ್ತಿರ ಸ್ಥಾನದ ಪೂರ್ಣಾಂಕಕ್ಕೆ ತನ್ನಿ) ಎಷ್ಟು?

A. 1,890 ✓
B. 1,980
C. 1,870
D. 1,970

Blackbook Vocabulary — Now in the App! ► Download Now on Google Play

**Q8** Interior/Exterior Angle Formulas

A ಎಂಬುದು ಒಂದು ಸಮಬಾಹು ಬಹುಭುಜಾಕೃತಿಯಾಗಿದೆ, A ಯ ಪ್ರತಿಯೊಂದು ಆಂತರಿಕ ಕೋನವು ಅದರ ಬಾಹ್ಯ ಕೋನಕ್ಕಿಂತ 120° ಹೆಚ್ಚಾಗಿರುತ್ತದೆ. ಹಾಗಾದರೆ A ಯು ಹೊಂದಿರುವ ಬಾಹುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 18

B. 15

C. 10

D. 12 ✓

**Q9** MP with Discount and Profit

ಒಬ್ಬ ವ್ಯಾಪಾರಿಯು ಒಂದು ವಸ್ತುವಿನ ನಮೂದಿತ ಬೆಲೆಯ ಮೇಲೆ 25% ಮತ್ತು 80% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡಿ ಅದನ್ನು ಮಾರಾಟ ಮಾಡುವ ಮೂಲಕ 50% ಲಾಭವನ್ನು ಗಳಿಸುತ್ತಾನೆ. ಒಂದು ವೇಳೆ ವಸ್ತುವಿನ ಅಸಲು ಬೆಲೆಯನ್ನು 74% ಹೆಚ್ಚಿಸಿದರೆ, ಹಿಂದಿನಷ್ಟೇ ಶೇಕಡಾವಾರು ಲಾಭವನ್ನು ಪಡೆಯಲು ಅವನು ಈಗ ಅದೇ ನಮೂದಿತ ಬೆಲೆಯ ಮೇಲೆ ಯಾವ ಏಕ ರಿಯಾಯಿತಿಯನ್ನು ನೀಡಬೇಕು?

A. 72.62%

B. 69.5%

C. 73.9% ✓

D. 66.56%

**Q10** Proportion

25, 35, 45.2, ಮತ್ತು x ಸಂಖ್ಯೆಗಳು ಅನುಪಾತದಲ್ಲಿದ್ದರೆ, x ನ ಮೌಲ್ಯವನ್ನು ಕಂಡುಹಿಡಿಯಿರಿ.

A. 56.23

B. 70.78

C. 63.28 ✓

D. 52.56

**Q11** Proportion

2.5, 4 ಮತ್ತು 10 ರ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

A. 18

B. 12

C. 16 ✓

D. 14

**Q12** Relative Speed

ಒಂದು ರೈಲು ಬೆಳಿಗ್ಗೆ 7:00 ಕ್ಕೆ A ನಿಲ್ದಾಣದಿಂದ B ನಿಲ್ದಾಣದ ಕಡೆ ಹೊರಟು 80 km/h ವೇಗದಲ್ಲಿ ಚಲಿಸುತ್ತದೆ. ಇನ್ನೊಂದು ರೈಲು ಬೆಳಿಗ್ಗೆ 8:30 ಕ್ಕೆ B ನಿಲ್ದಾಣದಿಂದ ಹೊರಟು A ನಿಲ್ದಾಣದ ಕಡೆಗೆ ಅದೇ ಹಳಿಯಲ್ಲಿ 100 km/h ವೇಗದಲ್ಲಿ ಚಲಿಸುತ್ತದೆ. ಒಂದುವೇಳೆ ಎರಡು ನಿಲ್ದಾಣಗಳ ನಡುವಿನ ಅಂತರ 550 km ಆಗಿದ್ದರೆ, ಎರಡು ರೈಲುಗಳು ಯಾವ ಸಮಯದಲ್ಲಿ ಪರಸ್ಪರ ಸಂಧಿಸುತ್ತವೆ?

A. ಬೆಳಿಗ್ಗೆ 10:53:21

B. ಬೆಳಿಗ್ಗೆ 10:35:20

C. ಬೆಳಿಗ್ಗೆ 10:53:20 ✓

D. ಬೆಳಿಗ್ಗೆ 10:52:20

**Q13** Rules for 2,3,4,5,6

ಒಂದು ವೇಳೆ 87321A6 ಎಂಬ 7-ಅಂಕಿಯ ಸಂಖ್ಯೆಯನ್ನು 6 ರಿಂದ ನಿಶ್ಶೇಷವಾಗಿ ಭಾಗಿಸಬಹುದಾದರೆ, A ಯ ಕನಿಷ್ಠ ಮೌಲ್ಯ ಎಷ್ಟು?

A. 3

B. 1

C. 2

D. 0 ✓

**Q14** Simple Mean

2, 4, 6 ಮತ್ತು 8 ರ ಸರಾಸರಿ ಎಷ್ಟು?

A. 5 ✓

B. 6

C. 7

D. 4

**Q15** Simultaneous Fill & Empty

ಒಂದು ನೀರಿನ ತೊಟ್ಟಿಯಲ್ಲಿ A ಮತ್ತು B ಎಂಬ ಎರಡು ಒಳಹರಿವಿನ ಕೊಳವೆಗಳು ಮತ್ತು C ಎಂಬ ಒಂದು ಹೊರಹರಿವಿನ ಕೊಳವೆ ಇರುತ್ತವೆ. A ಕೊಳವೆ ಮಾತ್ರವೇ ಅದನ್ನು 12 ಗಂಟೆಗಳಲ್ಲಿ ತೊಟ್ಟಿಯನ್ನು ತುಂಬಬಹುದು, B ಕೊಳವೆ ಮಾತ್ರವೇ ಬಳಸಿದರೆ 18 ಗಂಟೆಗಳಲ್ಲಿ ತೊಟ್ಟಿಯನ್ನು ತುಂಬಬಹುದು ಮತ್ತು C ಕೊಳವೆ ಮಾತ್ರವೇ 24 ಗಂಟೆಗಳಲ್ಲಿ ಪೂರ್ತಿ ತುಂಬಿದ ತೊಟ್ಟಿಯನ್ನು ಖಾಲಿ ಮಾಡಬಹುದು. ಎಲ್ಲಾ ಮೂರು ಕೊಳವೆಗಳನ್ನು ಒಟ್ಟಿಗೆ ತೆರೆದರೆ, ಆ ತೊಟ್ಟಿಯು ಎಷ್ಟು ಸಮಯದಲ್ಲಿ ತುಂಬುತ್ತದೆ? (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

A. 9.5 ಗಂಟೆಗಳು

B. 11.2 ಗಂಟೆಗಳು

C. 10.3 ಗಂಟೆಗಳು ✓

D. 12.5 ಗಂಟೆಗಳು

Blackbook Vocabulary — Now in the App! ▶ Download Now on Google Play

**Q16** Two Successive Changes

ಒಬ್ಬ ವ್ಯಾಪಾರಿಯು ಪ್ರತಿ ಬ್ಯಾರೆಲ್‌ಗೆ ₹500 ರಂತೆ ತೈಲವನ್ನು ಖರೀದಿಸುತ್ತಾನೆ. ಅವನು ಮೊದಲು ಬೆಲೆಯನ್ನು 20% ಹೆಚ್ಚಿಸುತ್ತಾನೆ ಮತ್ತು ನಂತರ ಹೆಚ್ಚಿಸಿದ ಬೆಲೆಯನ್ನು 10% ರಷ್ಟು ಕಡಿಮೆ ಮಾಡುತ್ತಾನೆ. ಹಾಗಾದರೆ ಪ್ರತಿ ಬ್ಯಾರೆಲ್‌ಗೆ ಅಂತಿಮ ಬೆಲೆ ಎಷ್ಟು?

- A. ₹550
- B. ₹500
- C. ₹540 ✓
- D. ₹560

**Q17** Two Trains Crossing

500 m ಉದ್ದದ ಮತ್ತು 72 km/h ವೇಗದಲ್ಲಿ ಚಲಿಸುವ ರೈಲು, ವಿರುದ್ಧ ದಿಕ್ಕಿನಲ್ಲಿ 54 km/h ವೇಗದಲ್ಲಿ ಚಲಿಸುವ 410 m ಉದ್ದದ ಮತ್ತೊಂದು ರೈಲನ್ನು ದಾಟುತ್ತದೆ. ರೈಲುಗಳು ಪರಸ್ಪರ ಸಂಪೂರ್ಣವಾಗಿ ದಾಟಲು ಎಷ್ಟು ಸಮಯ ತೆಗೆದುಕೊಳ್ಳುತ್ತವೆ?

- A. 18 ಸೆಕೆಂಡುಗಳು
- B. 26 ಸೆಕೆಂಡುಗಳು ✓
- C. 32 ಸೆಕೆಂಡುಗಳು
- D. 40 ಸೆಕೆಂಡುಗಳು

**Q18** Volume

ಒಂದು ಸಿಲಿಂಡರ್‌ನ ಘನಫಲ ಮತ್ತು ಎತ್ತರವು ಕ್ರಮವಾಗಿ 1232 $cm^3$ ಮತ್ತು 24.5 cm ಆಗಿರುತ್ತದೆ. ಸಿಲಿಂಡರ್‌ನ ತ್ರಿಜ್ಯವನ್ನು (cm ಗಳಲ್ಲಿ) ಕಂಡುಹಿಡಿಯಿರಿ. (π = 22/7 ಬಳಸಿ)

- A. 4 ✓
- B. 5
- C. 10
- D. 11

**Q19** Area of Regular Polygons

ಒಂದು ಸಮಬಾಹು ಷಡ್ಭುಜಾಕೃತಿಯ ಉದ್ಯಾನದ ಪ್ರತಿ ಬಾಹುವು 21 m ಅಳತೆ ಹೊಂದಿದೆ. ಅದರ ಮಧ್ಯದಲ್ಲಿ 7 m ತ್ರಿಜ್ಯದ ವೃತ್ತಾಕಾರದ ಒಂದು ಕಾರಂಜಿ ನಿರ್ಮಿಸಲಾಗಿದೆ. ಹಾಗಾದರೆ ಉದ್ಯಾನದ ಉಳಿದ ಭಾಗದ ವಿಸ್ತೀರ್ಣವನ್ನು (ಒಂದು ದಶಮಾಂಶ ಸ್ಥಾನದ ಪೂರ್ಣಾಂಕಕ್ಕೆ ತನ್ನಿ) ಕಂಡುಹಿಡಿಯಿರಿ.
( $\pi = \frac{22}{7}$ ಬಳಸಿ ಮತ್ತು $\sqrt{3} = 1.73$ ಆಗಿದೆ)

- A. 990.4 m2 ✓
- B. 986.4 m2
- C. 981.4 m2
- D. 996.4 m2

Blackbook Vocabulary — Now in the App! ▶ Download Now on Google Play

generated by rank.qmaths.in

**Q20** Double Pie Chart

ಕೆಳಗಿನ ಪೈ ನಕ್ಷೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಮತ್ತು ಕೆಳಗೆ ನೀಡಲಾದ ಪ್ರಶ್ನೆಗೆ ಉತ್ತರಿಸಿ.
ಶಾಲೆಯು ವಿವಿಧ ಮೂಲಗಳಿಂದ ಪಡೆಯುವ ಸಂಪೂರ್ಣ ನಿಧಿಯು ₹700 ಲಕ್ಷಕ್ಕೆ ಸಮಾನವಾಗಿದೆ.
ಒಂದು ವೇಳೆ ಶಾಲೆಯು ಸರ್ಕಾರಿ ಸಂಸ್ಥೆಗಳ (government agencies) ನಿಧಿಯಿಂದ ಮಾತ್ರ ಶಾಲಾ ನಿರ್ವಹಣೆಯನ್ನು (school maintenance) ನಿರ್ವಹಿಸಿದರೆ, ಸರ್ಕಾರಿ ಸಂಸ್ಥೆಗಳಿಂದ ಬಂದಿರುವ ಎಷ್ಟು ನಿಧಿಯು (₹ ಗಳಲ್ಲಿ) ಇನ್ನೂ ಇತರ ಬಳಕೆಗಳಿಗೆ ಉಳಿಯುತ್ತದೆ?







(sources of fund in schools = ಶಾಲೆಗಳಲ್ಲಿ ನಿಧಿಯ ಮೂಲಗಳು, uses of funds by school=ಶಾಲೆಯಿಂದ ನಿಧಿಯ ಬಳಕೆ)
(payment =ಪಾವತಿ, Internal sources = ಆಂತರಿಕ ಮೂಲಗಳು, Reserved = ಮೀಸಲು, Scholarship =ವಿದ್ಯಾರ್ಥಿವೇತನ, Donations = ದಾನ)

A. 165 ಲಕ್ಷ

B. 175 ಲಕ್ಷ ✓

C. 185 ಲಕ್ಷ

D. 155 ಲಕ್ಷ

**Q21** MP with Discount and Profit

ಒಬ್ಬ ವ್ಯಾಪಾರಿಯು ಒಂದು ವಸ್ತುವನ್ನು ಅದರ ನಮೂದಿತ ಬೆಲೆಯ ಮೇಲೆ 25% ರಿಯಾಯಿತಿಯಲ್ಲಿ ಖರೀದಿಸಿ, ಅದಕ್ಕೆ ನಮೂದಿತ ಬೆಲೆಗಿಂತ 35% ಹೆಚ್ಚು ಬೆಲೆಯನ್ನು ನಮೂದಿಸುತ್ತಾನೆ. ಈಗ ಅವನು ಹೊಸದಾಗಿ ನಮೂದಿಸಿದ ಬೆಲೆಯ ಮೇಲೆ 20% ರಿಯಾಯಿತಿಯನ್ನು ನೀಡಿದರೆ, ಅವನ ಶೇಕಡಾವಾರು ಲಾಭ ಎಷ್ಟು?

A. $34\%$

B. $42\%$

C. $44\%$ ✓

D. $36\%$

**Q22** Mean of Grouped Data

ಈ ಕೆಳಗಿನ ದತ್ತಾಂಶದ ಸರಾಸರಿಯು 49 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 20-30 | 30-40 | 40-50 | 50-60 | 60-70 |
|---|---|---|---|---|---|
| ಆವರ್ತನ | 24 | 34 | 15 | 36 | x |

A. 56 ✓

B. 84

C. 61

D. 77

Blackbook Vocabulary — Now in the App! ► Download Now on Google Play

**Q23** Pythagorean Identities

ಒಂದು ವೇಳೆ $\cos\theta + \cos^2\theta = \sec^2\theta - \tan^2\theta$ ಆಗಿದ್ದರೆ, $\sin^2\theta + \sin^4\theta$ ದ ಮೌಲ್ಯ ಎಷ್ಟು?

A. $\mathrm{cosec}\theta$

B. $1$ ✓

C. $0$

D. $\cos^2\theta$

**Q24** a^2 - b^2

ಸರಳೀಕರಿಸಿ: $\sqrt{(272)^2 - (128)^2}$.

A. 256

B. 240 ✓

C. 200

D. 144

**Q25** sin^2 + cos^2 = 1

ಒಂದುವೇಳೆ θ ವು ಒಂದು ಲಘು ಕೋನವಾಗಿದ್ದರೆ, $\sin\theta + \cos\theta = \sqrt{2}$ ಆಗಿದ್ದರೆ, $\sin^4\theta + \cos^4\theta$ ದ ಮೌಲ್ಯವನ್ನು ಕಂಡುಹಿಡಿಯಿರಿ.

A. $1$

B. $\frac{1}{4}$

C. $\frac{1}{2}$ ✓

D. $\frac{1}{\sqrt{2}}$

Blackbook Vocabulary — Now in the App! ▶ Download Now on Google Play

## Mathematics

25 Questions • Answer Key

**Q1** 2-Year Difference

ಒಂದು ಮೊತ್ತದ ಮೇಲೆ, ಎರಡು ವರ್ಷಗಳ ಅವಧಿಗೆ ಸಿಗುವ ಚಕ್ರಬಡ್ಡಿ ₹1,560 ಆಗಿದೆ ಮತ್ತು ಅದಕ್ಕೆ ಅನುಗುಣವಾದ ಸರಳ ಬಡ್ಡಿ ₹1,500 ಆಗಿದೆ. ಮೂರು ವರ್ಷಗಳ ಅವಧಿಗೆ ಅದೇ ಬಡ್ಡಿದರದಲ್ಲಿ ಅದೇ ಮೊತ್ತದ ಮೇಲೆ ಸಿಗುವ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ.

A. ₹2,345.30

B. ₹2,245.60

C. ₹2,434.80 ✓

D. ₹2,466.50

**Q2** Angle of Elevation

ಒಬ್ಬ ಹುಡುಗನು ಒಂದು ಮರದಿಂದ 20 m ದೂರದಲ್ಲಿ ನಿಂತಿದ್ದಾನೆ. ಅವನ ಕಣ್ಣುಗಳಿಂದ ಮರದ ತುದಿಗೆ ಇರುವ ಉನ್ನತ ಕೋನವು 45° ಆಗಿದೆ. ಹಾಗಾದರೆ ಮರದ ಎತ್ತರವನ್ನು ಕಂಡುಹಿಡಿಯಿರಿ. (ಹುಡುಗನ ಎತ್ತರವನ್ನು ನಿರ್ಲಕ್ಷಿಸಿ.)

A. 40 m

B. 20 m ✓

C. 15 m

D. 10 m

**Q3** Annual Compounding

ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ, ₹60,000 ಮೊತ್ತವು 3 ವರ್ಷಗಳ ನಂತರ ₹71,460.96 ಆಗುತ್ತದೆ. ಹಾಗಾದರೆ ವಾರ್ಷಿಕ ಬಡ್ಡಿ ದರವನ್ನು ಕಂಡುಹಿಡಿಯಿರಿ.

A. 5 %

B. 6 % ✓

C. 7 %

D. 8 %

**Q4** Average Speed

ಒಂದು ಕಾರು ಮೊದಲ 120 km ಅನ್ನು ಗಂಟೆಗೆ 40 km/hr ವೇಗದಲ್ಲಿ ಕ್ರಮಿಸುತ್ತದೆ, ಮುಂದಿನ 180 km ಅನ್ನು ಅದು 60 km/hr ವೇಗದಲ್ಲಿ ಕ್ರಮಿಸುತ್ತದೆ ಮತ್ತು ಕೊನೆಯ 100 km ದೂರವನ್ನು 50 km/hr ವೇಗದಲ್ಲಿ ಕ್ರಮಿಸುತ್ತದೆ. ಹಾಗಾದರೆ ಇಡೀ ಪ್ರಯಾಣದಲ್ಲಿ ಕಾರಿನ ಸರಾಸರಿ ವೇಗವನ್ನು ಕಂಡುಹಿಡಿಯಿರಿ.

A. 51 km/hr

B. 55 km/hr

C. 53 km/hr

D. 50 km/hr ✓

**Q5** Basic Ratio

ಎರಡು ಸಂಖ್ಯೆಗಳ ನಡುವಿನ ಅನುಪಾತವು 2:3 ಆಗಿದೆ. ಒಂದುವೇಳೆ ಪ್ರತಿ ಸಂಖ್ಯೆಯಿಂದ 8 ಅನ್ನು ಕಳೆದರೆ, ದೊರೆಯುವ ಅನುಪಾತವು 1:2 ಆಗುತ್ತದೆ. ಹಾಗಾದರೆ ಮೂಲ ದೊಡ್ಡ ಸಂಖ್ಯೆ ಯಾವುದು?

A. 18

B. 12

C. 16

D. 24 ✓

**Q6** Building/Tower Problems

ಒಂದು ಗೋಪುರದ ಮೇಲಿನ ತುದಿಯ ಉನ್ನತ ಕೋನಗಳು, ಗೋಪುರದ ಒಂದೇ ಬದಿಯಲ್ಲಿ ಮತ್ತು ಒಂದೇ ಸರಳ ರೇಖೆಯಲ್ಲಿರುವ ಎರಡು ಬಿಂದುಗಳಿಂದ 30° ಮತ್ತು 60° ಆಗಿವೆ. ಆ ಎರಡು ಬಿಂದುಗಳ ನಡುವಿನ ದೂರವು 20 ಮೀಟರ್ ಆಗಿದ್ದರೆ, ಗೋಪುರದ ಎತ್ತರವನ್ನು ಕಂಡುಹಿಡಿಯಿರಿ.

A. $8\sqrt{3}$ m

B. 8 m

C. 12 m

D. $10\sqrt{3}$ m ✓

**Q7** CP-SP Relation

ಒಬ್ಬ ವ್ಯಾಪಾರಿಯು ಒಂದು ವಸ್ತುವನ್ನು 25% ಲಾಭಕ್ಕೆ ಮಾರುತ್ತಾನೆ. ನಂತರ ಖರೀದಿದಾರನು ಅದನ್ನು 10% ನಷ್ಟಕ್ಕೆ ಮಾರುತ್ತಾನೆ. ಒಂದು ವೇಳೆ ಆ ವಸ್ತುವಿನ ಮೂಲ ಅಸಲು ಬೆಲೆಯು ₹1,200 ಆಗಿದ್ದರೆ, ಅಂತಿಮ ಮಾರಾಟ ಬೆಲೆಯ 40%ವು ಎಷ್ಟಕ್ಕೆ ಸಮ?

A. ₹480

B. ₹600

C. ₹540 ✓

D. ₹630

**Q8** Decimal Operations

ಸರಳೀಕರಿಸಿ : 0.65 ÷ 0.13 + 3.5 − 2.825

A. 5.675 ✓

B. 5.175

C. 5.375

D. 5.875

Blackbook Vocabulary — Now in the App! ► Download Now on Google Play

**Q9** Find Time

₹2,500 ಮೊತ್ತವು ವಾರ್ಷಿಕ 5% ದರದಲ್ಲಿ ₹500 ಸರಳ ಬಡ್ಡಿಯನ್ನು ಗಳಿಸಿದರೆ, ಹಣವನ್ನು ಎಷ್ಟು ಅವಧಿಗೆ ಹೂಡಿಕೆ ಮಾಡಲಾಯಿತು?

A. 3 ವರ್ಷಗಳು
B. 4 ವರ್ಷಗಳು ✓
C. 6 ವರ್ಷಗಳು
D. 5 ವರ್ಷಗಳು

**Q10** Finding Present Age

6 ವರ್ಷಗಳ ಹಿಂದೆ A ಅವರ ವಯಸ್ಸು, ಇಂದಿನಿಂದ 6 ವರ್ಷಗಳ ನಂತರದ A ಅವರ ವಯಸ್ಸಿನ ಅರ್ಧದಷ್ಟು ಇತ್ತು . ಹಾಗಾದರೆ A ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

A. 18 ✓
B. 12
C. 24
D. 30

**Q11** Finding Value from Percentage

ರವಿ ಅವರು ತಮ್ಮ ಮಾಸಿಕ ಆದಾಯದಲ್ಲಿ 80 % ಖರ್ಚು ಮಾಡುತ್ತಾರೆ. ಒಂದುವೇಳೆ ಅವರ ಮಾಸಿಕ ಆದಾಯವು ₹25,000 ಆಗಿದ್ದರೆ, ಅವರ ಮಾಸಿಕ ಉಳಿತಾಯವನ್ನು ಕಂಡುಹಿಡಿಯಿರಿ.

A. ₹7,000
B. ₹6,000
C. ₹4,000
D. ₹5,000 ✓

**Q12** Laws of Indices

ಒಂದು ವೇಳೆ $69^{0.96} = x$, $69^{0.75} = y$ ಮತ್ತು $x^z = y^2$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

A. 1.56 ✓
B. 0.85
C. 3.48
D. 2.93

**Q13** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 4 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 6 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 12 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತದೆ?

A. 1 ✓
B. 2
C. 4
D. 3

**Q14** Percentage Increase/Decrease

ರಾಮನ್ ಅವರ ಆದಾಯವು ₹61,500 ಆಗಿದೆ. ಅವರು ತಮ್ಮ ಆದಾಯದ 17% ಅನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಆದಾಯವು 38% ರಷ್ಟು ಹೆಚ್ಚಾದರೆ ಮತ್ತು ವೆಚ್ಚವು 20% ರಷ್ಟು ಹೆಚ್ಚಾದರೆ, ಅವರ ಉಳಿತಾಯದಲ್ಲಿ ಆದ ಬದಲಾವಣೆ ಏನು?

A. ₹13,159 ರಷ್ಟು ಕಡಿಮೆ ಆಗುತ್ತದೆ
B. ₹13,165 ರಷ್ಟು ಕಡಿಮೆ ಆಗುತ್ತದೆ
C. ₹13,161 ರಷ್ಟು ಹೆಚ್ಚಾಗುತ್ತದೆ ✓
D. ₹13,156 ರಷ್ಟು ಹೆಚ್ಚಾಗುತ್ತದೆ

**Q15** Proportion

8, 32 ಮತ್ತು 17 ಸಂಖ್ಯೆಗಳಿಗೆ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

A. 68 ✓
B. 46
C. 58
D. 56

**Q16** Relative Speed

A ಮತ್ತು B ನಗರಗಳ ನಡುವೆ 250 km ಅಂತರವಿದೆ. ಒಬ್ಬ ಮೋಟಾರ್ ಸೈಕಲ್ ಸವಾರನು A ಯಿಂದ B ಕಡೆಗೆ ಬೆಳಿಗ್ಗೆ 6:30 ಕ್ಕೆ 40 km/hr ವೇಗದಲ್ಲಿ ಚಲಿಸಲು ಪ್ರಾರಂಭಿಸುತ್ತಾನೆ. ಇನ್ನೊಬ್ಬ ಮೋಟಾರ್ ಸೈಕಲ್ ಸವಾರನು B ಯಿಂದ A ಕಡೆಗೆ ಬೆಳಿಗ್ಗೆ 8:30 ಕ್ಕೆ 50 km/hr ವೇಗದಲ್ಲಿ ಚಲಿಸಲು ಪ್ರಾರಂಭಿಸುತ್ತಾನೆ. ಹಾಗಾದರೆ ಅವರಿಬ್ಬರು ಯಾವ ಸಮಯದಲ್ಲಿ ಪರಸ್ಪರ ದಾಟಿ ಹೋಗುತ್ತಾರೆ?

A. ಬೆಳಿಗ್ಗೆ 10:23:20 ✓
B. ಮಧ್ಯಾಹ್ನ 2:25:24
C. ಬೆಳಿಗ್ಗೆ 11:33:51
D. ಮಧ್ಯಾಹ್ನ 1:27:48

Blackbook Vocabulary — Now in the App! ► Download Now on Google Play

**Q17** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
I ನೇ ಅಂಗಡಿಯು 46% ಮತ್ತು 62% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 16% ಮತ್ತು 77% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 74% ಮತ್ತು 54% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 12%, 98% ಮತ್ತು 86% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- **A.** II
- **B.** IV ✓
- **C.** I
- **D.** III

**Q18** Tangent from External Point

ವೃತ್ತದ ಕೇಂದ್ರದಿಂದ 13 cm ದೂರದಲ್ಲಿರುವ ಒಂದು ಬಿಂದುವಿನಿಂದ 12 cm ತ್ರಿಜ್ಯದ ಒಂದು ವೃತ್ತಕ್ಕೆ ಸ್ಪರ್ಶಕವನ್ನು ಎಳೆಯಲಾಗಿದೆ. ಹಾಗಾದರೆ ಆ ಸ್ಪರ್ಶಕದ ಉದ್ದ ಎಷ್ಟಿರುತ್ತದೆ?

- **A.** 8 cm
- **B.** 12 cm
- **C.** 5 cm ✓
- **D.** 6 cm

**Q19** Two Items Mixing

430 ಗ್ರಾಂ ನಷ್ಟು ಸಕ್ಕರೆಯ ದ್ರಾವಣದಲ್ಲಿ 20% ಸಕ್ಕರೆ ಇದೆ. ಆ ದ್ರಾವಣದಲ್ಲಿನ ಸಕ್ಕರೆಯ ಪ್ರಮಾಣವನ್ನು 50% ಮಾಡಬೇಕಾದರೆ, ಆ ದ್ರಾವಣಕ್ಕೆ ಎಷ್ಟು ಗ್ರಾಂ ಸಕ್ಕರೆಯನ್ನು ಸೇರಿಸಬೇಕು?

- **A.** 278 ಗ್ರಾಂ
- **B.** 248 ಗ್ರಾಂ
- **C.** 268 ಗ್ರಾಂ
- **D.** 258 ಗ್ರಾಂ ✓

**Q20** Volume

2 ಮೀಟರ್ ತ್ರಿಜ್ಯವನ್ನು ಹೊಂದಿರುವ ಒಂದು ಗೋಳಾಕಾರದ ತೊಟ್ಟಿಯು ಅದರ ಘನಫಲದ ನಾಲ್ಕನೇ-ಮೂರು ಭಾಗದಷ್ಟು ನೀರಿನಿಂದ ತುಂಬಿರುತ್ತದೆ. ಹಾಗಾದರೆ ಅದು ಎಷ್ಟು ಕ್ಯೂಬಿಕ್ ಮೀಟರ್ ನೀರನ್ನು ಹೊಂದಿರುತ್ತದೆ? (π = 3.14 ಬಳಸಿ)

- **A.** 33.36
- **B.** 25.12 ✓
- **C.** 36.84
- **D.** 29.24

**Q21** 3D Mensuration

3.5 m ತ್ರಿಜ್ಯ ಮತ್ತು 10 m ಎತ್ತರವಿರುವ ಒಂದು ಸಿಲಿಂಡರಾಕಾರದ ಟ್ಯಾಂಕ್ ಅನ್ನು ನೀರಿನಿಂದ ತುಂಬಿಸಲಾಗಿದೆ. ಆ ನೀರನ್ನು 7 m ಉದ್ದ ಮತ್ತು 5 m ಅಗಲವಿರುವ ಘನಾಕಾರದ ಟ್ಯಾಂಕ್‌ಗೆ ಸುರಿಯಬೇಕು. ಸಿಲಿಂಡರ್‌ನಿಂದ ಸಂಪೂರ್ಣ ನೀರನ್ನು ಘನಾಕಾರದ ಟ್ಯಾಂಕ್‌ನಲ್ಲಿ ಸುರಿದ ನಂತರ ಘನಾಕಾರದ ಟ್ಯಾಂಕ್‌ನಲ್ಲಿರುವ ನೀರಿನ ಎತ್ತರವನ್ನು ಕಂಡುಹಿಡಿಯಿರಿ. (π = $\frac{22}{7}$ ಬಳಸಿ)

- **A.** 12 m
- **B.** 11 m ✓
- **C.** 10 m
- **D.** 13 m

Blackbook Vocabulary — Now in the App! ▶ Download Now on Google Play

**Q22** Bracket Simplification

ಸರಳೀಕರಿಸಿ: $6 \div \left[(9-6) \div \left\{(5-3) \div \left(2+\frac{8}{13}\right)\right\}\right]$

A. $\frac{26}{17}$ ✓

B. $\frac{13}{17}$

C. $\frac{34}{13}$

D. $\frac{7}{17}$

**Q23** Grouped Data Mode

ಕೊಟ್ಟಿರುವ ದತ್ತಾಂಶದ ರೂಢಿಬೆಲೆ ಕಂಡುಹಿಡಿಯಿರಿ.

| ವರ್ಗಾಂತರ | 0-5 | 5-10 | 10-15 | 15-20 | 20-25 |
|---|---|---|---|---|---|
| ರಾಜ್ಯಗಳ ಸಂಖ್ಯೆ | 15 | 10 | 6 | 7 | 2 |

A. 0.25

B. 2.65

C. 1.45

D. 3.75 ✓

**Q24** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 42 ಆಗಿದ್ದರೆ, (2x + 4y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 8 | 20 | x | 2 | y | 70 |

A. 75

B. 86 ✓

C. 68

D. 100

Blackbook Vocabulary — Now in the App! ► Download Now on Google Play

generated by rank.qmaths.in

**Q25** Percentage Based

ಒಂದು ಕಂಪನಿಯು ತನ್ನ ವಾರ್ಷಿಕ ಬಜೆಟ್ ಅನ್ನು ಈ ಕೆಳಗಿನ ವಲಯಗಳಲ್ಲಿ ಖರ್ಚು ಮಾಡುತ್ತದೆ. ಒಂದುವೇಳೆ ಒಟ್ಟು ಬಜೆಟ್ ₹20,00,000 ಆಗಿದ್ದರೆ, ಸಂಶೋಧನೆ ಮತ್ತು ಸಾರಿಗೆಗೆ ಒಟ್ಟಿಗೆ ಎಷ್ಟು ಮೊತ್ತ (₹ ಗಳಲ್ಲಿ) ಖರ್ಚು ಮಾಡಲಾಗುತ್ತದೆ?




Salaries : ಸಂಬಳ
ಮಾರ್ಕೆಟಿಂಗ್ : ಮಾರ್ಕೆಟಿಂಗ್
Research : ಸಂಶೋಧನೆ
Transport : ಸಾರಿಗೆ
miscellaneous : ಇತರೆ

A. 5,00,000

B. 5,50,000

C. 6,00,000 ✓

D. 6,50,000

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** (a+b)^2, (a-b)^2

ಸರಳೀಕರಿಸಿ :

$(2a + 3b)^2 - (2a - 3b)^2$

A. 18ab

B. 24ab ✓

C. 20ab

D. 25ab

**Q2** Annual Compounding

ಒಂದು ಮೊತ್ತವು ವಾರ್ಷಿಕ ಚಕ್ರಬಡ್ಡಿ ಲೆಕ್ಕದಲ್ಲಿ, 15% ಚಕ್ರ ಬಡ್ಡಿಯ ದರದಲ್ಲಿ 2 ವರ್ಷಗಳ ಅವಧಿಯಲ್ಲಿ ₹4,837.50 ಚಕ್ರಬಡ್ಡಿಯನ್ನು ನೀಡುತ್ತದೆ. ಹಾಗಾದರೆ ಅಸಲು ಮೊತ್ತವನ್ನು ಕಂಡುಹಿಡಿಯಿರಿ.

A. ₹15,000 ✓

B. ₹13,000

C. ₹14,000

D. ₹12,000

**Q3** Annual Compounding

ರಿಷಿ ಬಳಿ ₹1,681 ಇದ್ದು, ಅದನ್ನು ಅವರು ತಮ್ಮ ಇಬ್ಬರು ಪುತ್ರರಾದ ಶಾನ್ ಮತ್ತು ಪಿಯೂಷ್ ಅವರ ನಡುವೆ ಹಂಚುತ್ತಾರೆ. ಅವರವರ ಪಾಲುಗಳನ್ನು ವರ್ಷಕ್ಕೊಮ್ಮೆ ಚಕ್ರ ಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, ವಾರ್ಷಿಕ 5% ಚಕ್ರ ಬಡ್ಡಿಯ ದರದಲ್ಲಿ ಹೂಡಿಕೆ ಮಾಡುವಂತೆ ಹೇಳಿದರು. 13 ವರ್ಷಗಳ ನಂತರ ಶಾನ್ ಅವರ ಹೂಡಿಕೆಯ ಮೊತ್ತದ ಮೌಲ್ಯವು, 14 ವರ್ಷಗಳ ನಂತರ ಪಿಯೂಷ್ ಅವರ ಹೂಡಿಕೆಯ ಮೊತ್ತದ ಮೌಲ್ಯವು ಎಷ್ಟಾಗುತ್ತದೆಯೋ ಅದೇ ಮೌಲ್ಯಕ್ಕೆ ಸಮನಾಗಿರುತ್ತದೆ. ಹಾಗಾದರೆ ರಿಷಿ ಅವರು ಶಾನ್ ಅವರಿಗೆ ಎಷ್ಟು ಹಣ (₹ ಗಳಲ್ಲಿ) ನೀಡಿದ್ದರು?

A. 861 ✓

B. 920

C. 711

D. 820

**Q4** Average Speed

ಒಂದು ಪ್ರಯಾಣದ ಮೂರನೇ-ಒಂದು ಭಾಗವನ್ನು 56 km/hr ವೇಗದಲ್ಲಿ ಕ್ರಮಿಸಲಾಗುತ್ತದೆ, ಮುಂದಿನ ಮೂರನೇ-ಒಂದು ಭಾಗವನ್ನು 7 km/hr ವೇಗದಲ್ಲಿ ಕ್ರಮಿಸಲಾಗುತ್ತದೆ ಮತ್ತು ಉಳಿದ ಪ್ರಯಾಣವನ್ನು 14 km/hr ವೇಗದಲ್ಲಿ ಕ್ರಮಿಸಲಾಗುತ್ತದೆ. ಹಾಗಾದರೆ ಇಡೀ ಪ್ರಯಾಣದ ಸರಾಸರಿ ವೇಗ (km/hr ಗಳಲ್ಲಿ, 1 ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ) ಎಷ್ಟು?

A. 18.1

B. 12.9 ✓

C. 7.9

D. 13.6

**Q5** Basic Time & Work

15 ಕಾರ್ಮಿಕರು 22 ದಿನಗಳಲ್ಲಿ ಒಂದು ಗೋಡೆಯನ್ನು ಕಟ್ಟಬಲ್ಲರು. ಅದೇ ಗೋಡೆಯನ್ನು ಕಟ್ಟಲು 12 ಕಾರ್ಮಿಕರು ಎಷ್ಟು ದಿನಗಳನ್ನು ತೆಗೆದುಕೊಳ್ಳುತ್ತಾರೆ (ಅದೇ ದಕ್ಷತೆಯನ್ನು ಊಹಿಸಿಕೊಳ್ಳಿ).

A. 28.5 ದಿನಗಳು

B. 30 ದಿನಗಳು

C. 27.5 ದಿನಗಳು ✓

D. 25 ದಿನಗಳು

**Q6** Composite 3D Shapes

ಒಂದು ಘನವಾದ ಸಿಲಿಂಡರಿನ ಪಾದದ ತ್ರಿಜ್ಯ 7 cm ಆಗಿದೆ ಮತ್ತು ಅದರ ಎತ್ತರ 12 cm ಆಗಿದೆ ಮತ್ತು ಈ ಸಿಲಿಂಡರಿನ ಒಳಗೆ ಒಂದು ಶಂಕುವನ್ನು ಕೊರೆಯಲಾಗಿದೆ, ಈ ಕೊರೆದಿರುವ ಶಂಕುವಿನ ಪಾದದ ತ್ರಿಜ್ಯವು ಸಿಲಿಂಡರಿನ ಪಾದದ ತ್ರಿಜ್ಯದ ಅಳತೆಯಷ್ಟೇ ಇದೆ, ಮತ್ತು ಕೊರೆದಿರುವ ಶಂಕುವಿನ ಎತ್ತರ 8 cm ಇದೆ. ಹೀಗೆ ಶಂಕುವನ್ನು ಕೊರೆದ ನಂತರ ಉಳಿದಿರುವ ಘನಭಾಗದ ಘನಫಲವನ್ನು ಕಂಡುಹಿಡಿಯಿರಿ. ($\pi$ = 22/7 ಮತ್ತು ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕದಲ್ಲಿ ಉತ್ತರಿಸಿ)

A. 1417.33 $cm^3$

B. 1452.33 $cm^3$

C. 1437.33 $cm^3$ ✓

D. 1402.33 $cm^3$

Blackbook Vocabulary — Now in the App! ▸ Download Now on Google Play

**Q7** Find SI

₹10,000 ಮೊತ್ತದ ಮೇಲೆ 2 ವರ್ಷಗಳ ಅವಧಿಗೆ ವಾರ್ಷಿಕ 5% ದರದಲ್ಲಿ ದೊರಕುವ ಸರಳ ಬಡ್ಡಿ ಎಷ್ಟು?

A. ₹1,000 ✓

B. ₹800

C. ₹1,500

D. ₹1,200

**Q8** Finding HCF

252, 396, ಮತ್ತು 524 ಸಂಖ್ಯೆಗಳ ಮ.ಸಾ.ಅ. ಕಂಡುಹಿಡಿಯಿರಿ.

A. 9

B. 12

C. 4 ✓

D. 36

**Q9** Median

ಒಂದು ಮಧ್ಯಮ ಅಸಮ್ಮಿತಿಯ ಆವರ್ತನ ವಿತರಣೆಯಲ್ಲಿ, ಸರಾಸರಿ ಮತ್ತು ರೂಢಿಬೆಲೆಗಳ ಮೌಲ್ಯಗಳು ಕ್ರಮವಾಗಿ 54.3 ಮತ್ತು 62.1 ಆಗಿವೆ. ಹಾಗಾದರೆ ಮಧ್ಯಾಂಕದ ಮೌಲ್ಯವನ್ನು ಕಂಡುಹಿಡಿಯಿರಿ.

A. 57.9

B. 55.7

C. 56.9 ✓

D. 57.2

**Q10** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 4 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 5 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 20 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತವೆ?

A. 1 ✓

B. 2

C. 3

D. 4

**Q11** Population Based Problems

ಒಂದು ಪಟ್ಟಣದ ಜನಸಂಖ್ಯೆಯು 80,000 ದಿಂದ 72,000 ಕ್ಕೆ ಇಳಿಯಿತು. ಹಾಗಾದರೆ ಜನಸಂಖ್ಯೆಯ ಶೇಕಡಾವಾರು ಇಳಿಕೆಯನ್ನು ಕಂಡುಹಿಡಿಯಿರಿ.

A. 10% ✓

B. 8%

C. 12%

D. 15%

**Q12** Profit/Loss Percentage

ಒಂದು ವಸ್ತುವಿನ ಅಸಲು ಬೆಲೆ ₹500 ಆಗಿತ್ತು ಮತ್ತು ಅದನ್ನು ₹400 ಕ್ಕೆ ಮಾರಾಟ ಮಾಡಲಾಯಿತು. ಹಾಗಾದರೆ ಉಂಟಾದ ಶೇಕಡಾವಾರು ನಷ್ಟವನ್ನು ಕಂಡುಹಿಡಿಯಿರಿ.

A. 25%

B. 100%

C. 20% ✓

D. 80%

**Q13** Ratio Comparison

ಈ ಕೆಳಗಿನ ಅನುಪಾತಗಳನ್ನು ಇಳಿಕೆ ಕ್ರಮದಲ್ಲಿ ಜೋಡಿಸಿ.
2: 5, 3: 8, 5: 6, 4: 7

A. 5 : 6 > 4 : 7 > 3 : 8 > 2 : 5

B. 5 : 6 > 3:8 > 4 : 7 > 2 : 5

C. 5: 6 > 3:8 > 2: 5 > 4:7

D. 5 : 6 > 4 : 7 > 2 : 5 > 3:8 ✓

**Q14** Relative Speed

ಎರಡು ರೈಲುಗಳು ಒಂದೇ ನಿಲ್ದಾಣದಿಂದ ಹೊರಡುತ್ತವೆ ಮತ್ತು ಒಂದೇ ದಿಕ್ಕಿನಲ್ಲಿ ಚಲಿಸುತ್ತವೆ. ಒಂದುವೇಳೆ ವೇಗವಾಗಿ ಚಲಿಸುವ ರೈಲು 54 km/h ವೇಗದಲ್ಲಿ ಚಲಿಸಿದರೆ ಮತ್ತು ಅವುಗಳ ನಡುವಿನ ಅಂತರವು 6 ಗಂಟೆಗಳ ನಂತರ 42 km ಆಗಿದ್ದರೆ, ನಿಧಾನವಾಗಿ ಚಲಿಸುವ ರೈಲಿನ ವೇಗ ಎಷ್ಟು?

A. 48 km/h

B. 50 km/h

C. 45 km/h

D. 47 km/h ✓

Blackbook Vocabulary — Now in the App! ► Download Now on Google Play

**Q15** Rules for 7,8,9,11

ಒಂದು ವೇಳೆ 7-ಅಂಕಿಯ ಸಂಖ್ಯೆ 65873A8 ಅನ್ನು 22 ರಿಂದ ನಿಶ್ಶೇಷವಾಗಿ ಭಾಗಿಸಬಹುದಾದರೆ, A ಯ ಮೌಲ್ಯ ಎಷ್ಟು?

- A. 3
- B. 2 ✓
- C. 1
- D. 7

**Q16** Simple Mean

453, 397, 332 ಮತ್ತು 84 ರ ಸರಾಸರಿಯನ್ನು ಕಂಡುಹಿಡಿಯಿರಿ.

- A. 326.5
- B. 316.5 ✓
- C. 306.5
- D. 336.5

**Q17** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
**Q17** Ungrouped Data Mode

ಈ ದತ್ತಾಂಶದ ರೂಢಿಬೆಲೆ ಕಂಡುಹಿಡಿಯಿರಿ.

2, 4, 4, 6, 7, 8, 4, 6, 7, 4, 4, 5, 6

A. 4 ✓

B. 6

C. 7

D. 2

**Q18** Weighted Average

ಒಂದು ತರಗತಿಯಲ್ಲಿರುವ 90 ವಿದ್ಯಾರ್ಥಿಗಳ ಸರಾಸರಿ ವಯಸ್ಸು 21 ವರ್ಷಗಳು. ಅವರಲ್ಲಿ 30 ವಿದ್ಯಾರ್ಥಿಗಳ ಸರಾಸರಿ ವಯಸ್ಸು 23 ವರ್ಷಗಳು ಮತ್ತು ಇನ್ನೂ 30 ವಿದ್ಯಾರ್ಥಿಗಳ ಸರಾಸರಿ ವಯಸ್ಸು 25 ವರ್ಷಗಳು. ಹಾಗಾದರೆ ಉಳಿದ ವಿದ್ಯಾರ್ಥಿಗಳ ಸರಾಸರಿ ವಯಸ್ಸು ಎಷ್ಟು?

A. 14 ವರ್ಷಗಳು

B. 17 ವರ್ಷಗಳು

C. 18 ವರ್ಷಗಳು

D. 15 ವರ್ಷಗಳು ✓

**Q19** a^2 - b^2

ಸರಳೀಕರಿಸಿ: (2x + 3y)(2x − 3y)

A. 4×2+ 9y2

B. 4×2− 6xy − 9y2

C. 4×2+ 6xy − 9y2

D. 4×2− 9y2 ✓

**Q20** Basic Ratio

ಎರಡು ಸಂಖ್ಯೆಗಳ ನಡುವಿನ ಅನುಪಾತವು 4:7 ಆಗಿದೆ. ಒಂದು ವೇಳೆ ದೊಡ್ಡ ಸಂಖ್ಯೆಯಿಂದ 10 ಅನ್ನು ಕಳೆದರೆ ಮತ್ತು ಸಣ್ಣ ಸಂಖ್ಯೆಗೆ 10 ಅನ್ನು ಕೂಡಿಸಿದರೆ, ಆ ಸಂಖ್ಯೆಗಳು ಸಮಾನವಾಗುತ್ತವೆ. ಹಾಗಾದರೆ ಮೂಲ ದೊಡ್ಡ ಸಂಖ್ಯೆ ಯಾವುದು?

A. $48\frac{3}{5}$

B. $42\frac{1}{3}$

C. $44\frac{2}{5}$

D. $46\frac{2}{3}$ ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q21** Building/Tower Problems

ಸಮತಟ್ಟಾದ ನೆಲದ ಮೇಲಿನ ಒಂದು ಬಿಂದುವಿನಲ್ಲಿ ನಿಂತಿರುವ ವ್ಯಕ್ತಿಯೊಬ್ಬರು ಲಂಬವಾಗಿರುವ ಗೋಪುರದ ತುದಿಯನ್ನು 30° ಉನ್ನತ ಕೋನದಲ್ಲಿ ವೀಕ್ಷಿಸುತ್ತಾರೆ. ನಂತರ ಅವರು ನೇರವಾಗಿ ಗೋಪುರದ ಕಡೆಗೆ ನಡೆದು ಹೋದಾಗ ಗೋಪುರದ ತುದಿಯ ಉನ್ನತ ಕೋನವು 60° ಆಗುತ್ತದೆ. ಗೋಪುರದ ಎತ್ತರವು 45 ಮೀಟರ್ ಆಗಿದ್ದರೆ, ಆ ವ್ಯಕ್ತಿ ನಡೆದ ದೂರವನ್ನು ಕಂಡುಹಿಡಿಯಿರಿ.

A. $60\sqrt{3}$ m

B. 60 m

C. $30\sqrt{3}$ m ✓

D. 30 m

**Q22** Congruence & Similarity

$\Delta ABC \sim \Delta PQR$ ಮತ್ತು $AB:PQ = 7:9$ ಆಗಿದ್ದರೆ, $\Delta ABC$ ಮತ್ತು $\Delta PQR$ ವಿಸ್ತೀರ್ಣಗಳ ನಡುವಿನ ಅನುಪಾತ ಎಷ್ಟು?

A. 49:81 ✓

B. 45:18

C. 49:27

D. 49:18

**Q23** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 54 ಆಗಿದ್ದರೆ, (6x + 9y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 2 | 18 | x | 6 | y | 70 |

A. 301

B. 313

C. 311

D. 309 ✓

Blackbook Vocabulary — Now in the App! ► Download Now on Google Play

**Q24** Year-on-Year Comparison

ನೀಡಿರುವ ಪೈ-ನಕ್ಷೆಗಳು 2021 ಮತ್ತು 2022 ರಲ್ಲಿನ A, B, C ಮತ್ತು D ಎಂಬ ನಾಲ್ಕು ಗ್ರಾಮಗಳ ಜನಸಂಖ್ಯೆಯನ್ನು ಶೇಕಡಾವಾರು ರೂಪದಲ್ಲಿ ತೋರಿಸುತ್ತವೆ. 2021 ಮತ್ತು 2022 ರಲ್ಲಿನ ಒಟ್ಟು ಜನಸಂಖ್ಯೆಯು ಕ್ರಮವಾಗಿ 2,80,000 ಮತ್ತು 2,75,000 ಆಗಿವೆ.







2021 ರಲ್ಲಿ B & C ಗ್ರಾಮಗಳ ಒಟ್ಟುಗೂಡಿಸಿದ ಜನಸಂಖ್ಯೆ ಹಾಗೂ 2022 ರಲ್ಲಿನ C & D ಗ್ರಾಮಗಳ ಒಟ್ಟುಗೂಡಿಸಿದ ಜನಸಂಖ್ಯೆಗಳ ನಡುವಿನ ಅನುಪಾತವನ್ನು ಕಂಡುಹಿಡಿಯಿರಿ.

- A. 11:9
- B. 43:41
- C. 56:55 ✓
- D. 27:23

**Q25** sin^2 + cos^2 = 1

ಒಂದು ವೇಳೆ $\sin A = \frac{3}{5}$ ಆಗಿದ್ದು A ಒಂದು ಲಘುಕೋನವಾಗಿದ್ದರೆ, $\cos A$ ನ ಮೌಲ್ಯವನ್ನು ಕಂಡುಹಿಡಿಯಿರಿ.

- A. $\frac{2}{5}$
- B. $\frac{1}{5}$
- C. $\frac{4}{5}$ ✓
- D. $1$

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** Annual Compounding

ಪ್ರವೀಣ್ ಅವರ ಬಳಿ ₹1,701 ಇದ್ದು, ಅದನ್ನು ಅವನು ತನ್ನ ಇಬ್ಬರು ಪುತ್ರರಾದ ರಿಷಿ ಮತ್ತು ಶಾನ್ ನಡುವೆ ಹಂಚುತ್ತಾರೆ. ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ 10% ಚಕ್ರಬಡ್ಡಿದರದಲ್ಲಿ ಅವರು ತಮ್ಮ ತಮ್ಮ ಪಾಲುಗಳನ್ನು ಹೂಡಿಕೆ ಮಾಡಲು ಹೇಳುತ್ತಾರೆ. 18 ವರ್ಷಗಳ ನಂತರ ರಿಷಿಯ ಹೂಡಿಕೆಯು 19 ವರ್ಷಗಳ ನಂತರ ಶಾನ್ ಅವರ ಹೂಡಿಕೆಗೆ ಸಮನಾಗಿರುತ್ತದೆ ಎಂಬುದನ್ನು ಗಮನಿಸಲಾಗಿದೆ. ಹಾಗಾದರೆ ಪ್ರವೀಣ್ ಅವರು ರಿಷಿಗೆ ನೀಡಿದ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 891 ✓
- B. 741
- C. 910
- D. 810

**Q2** Annual Compounding

ಒಂದು ಮೊತ್ತದ ಮೇಲೆ ವಾರ್ಷಿಕ 8% ದರದಲ್ಲಿ (ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕಹಾಕುವಂತೆ) 2 ವರ್ಷಗಳ ಅವಧಿಗೆ ಸಿಗುವ ಚಕ್ರ ಬಡ್ಡಿಯು ₹166.40 ಆಗಿದೆ. ಹಾಗಾದರೆ ಅಸಲು ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 1,000 ✓
- B. 1,500
- C. 1,100
- D. 1,200

**Q3** CP-SP Relation

ರಮೇಶ್ ಅವರು ಒಂದೇ ರೀತಿಯ ಎರಡು ವಾಷಿಂಗ್ ಮಶೀನ್ ಖರೀದಿಸಿದರು. ಒಂದನ್ನು 20% ಲಾಭಕ್ಕೆ ಮತ್ತು ಇನ್ನೊಂದನ್ನು 10% ನಷ್ಟಕ್ಕೆ ಮಾರಿದರು. ಎರಡೂ ವಾಷಿಂಗ್ ಮಶೀನ್ ಗಳ ಒಟ್ಟು ಮಾರಾಟ ಬೆಲೆಯು ₹33,600 ಆಗಿದ್ದರೆ, ಪ್ರತಿ ವಾಷಿಂಗ್ ಮಶೀನ್ ನ ಅಸಲು ಬೆಲೆ ಎಷ್ಟು?

- A. ₹16,000 ✓
- B. ₹18,000
- C. ₹16,800
- D. ₹15,800

**Q4** Dividing Quantity in Ratio

A, B, ಮತ್ತು C ಎಂಬ ಮೂವರು ಸ್ನೇಹಿತರ ವೆಚ್ಚಗಳು 2 : 3 : 5 ಅನುಪಾತದಲ್ಲಿವೆ. ಒಟ್ಟು ವೆಚ್ಚ ₹2,000 ಆಗಿದ್ದರೆ, B ಅವರ ಪಾಲನ್ನು ಕಂಡುಹಿಡಿಯಿರಿ.

- A. ₹500
- B. ₹700
- C. ₹550
- D. ₹600 ✓

**Q5** Find SI

ವಾರ್ಷಿಕ 8% ದರದಲ್ಲಿ ₹500 ಮೊತ್ತವನ್ನು 3.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 240
- B. 140 ✓
- C. 120
- D. 190

**Q6** Laws of Indices

ಒಂದು ವೇಳೆ $43^{0.92} = x$, $43^{0.69} = y$ ಮತ್ತು $x^z = y^6$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

- A. 6.5
- B. 3.5
- C. 4.5 ✓
- D. 5.5

**Q7** Measures of Central Tendency

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆಯು ಕ್ರಮವಾಗಿ 40.3 ಮತ್ತು 74.9 ಆಗಿವೆ. ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ. (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

- A. 51.2
- B. 52.8
- C. 52.9
- D. 51.8 ✓

Blackbook Vocabulary — Now in the App! ▶ Download Now on Google Play
generated by rank.qmaths.in

**Q8** Measures of Central Tendency

ಒಂದು ದತ್ತಾಂಶದ ಸರಾಸರಿ ಮತ್ತು ಮಧ್ಯಾಂಕವು 9:8 ರ ಅನುಪಾತದಲ್ಲಿದೆ. ಮಧ್ಯಸ್ಥವಾಗಿ ವಿಷಮ ವಿತರಣೆಗಳಿಗೆ (moderately skewed distributions) ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ಮಧ್ಯಾಂಕ ಮತ್ತು ರೂಢಿಬೆಲೆಯ ನಡುವಿನ ಅನುಪಾತವನ್ನು ಕಂಡುಹಿಡಿಯಿರಿ.

A. 1 : 3
B. 3 : 2
C. 2 : 3
D. 4 : 3 ✓

**Q9** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 3 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 12 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 12 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಮೂರೂ ಕೊಳವೆಗಳನ್ನು ಒಟ್ಟಿಗೆ ತೆರೆದರೆ, ಅದೇ ತೊಟ್ಟಿಯ ಅರ್ಧ ಭಾಗವನ್ನು ತುಂಬಲು ಅವು ತೆಗೆದುಕೊಳ್ಳುವ ಸಮಯ (ಗಂಟೆಗಳಲ್ಲಿ) ಎಷ್ಟು?

A. 3
B. 1 ✓
C. 2
D. 4

**Q10** Percentage Increase/Decrease

ರಾಮನ್ ಅವರ ಆದಾಯವು ₹83,000 ಆಗಿದೆ. ಅವರು ತಮ್ಮ ಆದಾಯದ 16% ಅನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಆದಾಯವು 22% ಹೆಚ್ಚಾದರೆ ಮತ್ತು ಖರ್ಚು 25% ಹೆಚ್ಚಾದರೆ, ಅವರ ಉಳಿತಾಯವು _____ ಆಗುತ್ತದೆ.

A. ₹833 ರಷ್ಟು ಇಳಿಕೆ
B. ₹830 ರಷ್ಟು ಹೆಚ್ಚಳ ✓
C. ₹827 ರಷ್ಟು ಹೆಚ್ಚಳ
D. ₹828 ರಷ್ಟು ಇಳಿಕೆ

**Q11** Prime & Composite Numbers

ಈ ಕೆಳಗಿನ ಯಾವ ಹೇಳಿಕೆಯು ಯಾವಾಗಲೂ ಸರಿಯಾಗಿರುತ್ತದೆ?

A. ಎರಡು ಅವಿಭಾಜ್ಯ ಸಂಖ್ಯೆಗಳು ಎಂದಿಗೂ ಸಹ-ಅವಿಭಾಜ್ಯವಾಗಿರುವುದಿಲ್ಲ
B. ಒಂದೇ ಸಂಖ್ಯೆಯ ಅಪವರ್ತ್ಯಗಳು ಯಾವಾಗಲೂ ಸಹ-ಅವಿಭಾಜ್ಯವಾಗಿರುತ್ತವೆ
C. ಎರಡು ಸಮ ಸಂಖ್ಯೆಗಳು ಯಾವಾಗಲೂ ಸಹ-ಅವಿಭಾಜ್ಯವಾಗಿರುತ್ತವೆ
D. ಎರಡು ಅನುಕ್ರಮ ಪೂರ್ಣಾಂಕಗಳು ಯಾವಾಗಲೂ ಸಹ-ಅವಿಭಾಜ್ಯವಾಗಿರುತ್ತವೆ ✓

**Q12** Proportion

ಒಂದು ವೇಳೆ 12.8, 6.4, x ಮತ್ತು 1.6 ಇವುಗಳು ಸಮಾನುಪಾತದಲ್ಲಿ ಇದ್ದರೆ, x ನ ಮೌಲ್ಯ ಎಷ್ಟು?

A. 2.4
B. 3.2 ✓
C. 3.6
D. 2.8

**Q13** Round Trip

ಒಂದು ದೋಣಿಯು ಪ್ರವಾಹದ ದಿಕ್ಕಿನಲ್ಲಿ 3 ಗಂಟೆಗಳಲ್ಲಿ 48 km ಕ್ರಮಿಸುತ್ತದೆ ಮತ್ತು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಅಷ್ಟೇ ದೂರಕ್ಕೆ ಹಿಂದಿರುಗಿ ಬರಲು 4 ಗಂಟೆಗಳ ಸಮಯ ತೆಗೆದುಕೊಳ್ಳುತ್ತದೆ. ಈ ವೇಗಗಳಲ್ಲಿ ದೋಣಿಯು 15 km ಪ್ರವಾಹದ ದಿಕ್ಕಿನಲ್ಲಿ ಚಲಿಸಿ, ನಂತರ 30 ನಿಮಿಷಗಳ ಕಾಲ ನಿಶ್ಚಲ ಸ್ಥಿತಿಯಲ್ಲಿರುತ್ತದೆ ಮತ್ತು 15 km ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಹಿಂದಿರುಗಿ ಬರುತ್ತದೆ. ಹಾಗಾದರೆ ಈ ಸುತ್ತು ಪ್ರಯಾಣವನ್ನು ಪೂರ್ಣಗೊಳಿಸಲು ದೋಣಿಯು ತೆಗೆದುಕೊಂಡ ಒಟ್ಟು ಸಮಯವನ್ನು (ನಿಶ್ಚಲ ಸ್ಥಿತಿಯ ಸಮಯವನ್ನೂ ಸೇರಿದಂತೆ) ಕಂಡುಹಿಡಿಯಿರಿ.

A. 3 ಗಂಟೆ 11 ನಿಮಿಷ 15 ಸೆಕೆಂಡುಗಳು
B. 2 ಗಂಟೆ 41 ನಿಮಿಷ 15 ಸೆಕೆಂಡುಗಳು ✓
C. 2 ಗಂಟೆ 56 ನಿಮಿಷ 15 ಸೆಕೆಂಡುಗಳು
D. 2 ಗಂಟೆ 11 ನಿಮಿಷ 15 ಸೆಕೆಂಡುಗಳು

**Q14** Rules for 2,3,4,5,6

7-ಅಂಕಿಯ ಸಂಖ್ಯೆಯಾದ 22A675B ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

A. 7
B. 6
C. 2 ✓
D. 4

**Q15** Single Right Triangle

ಸಮತಟ್ಟಾಗಿರುವ ಮೈದಾನದಲ್ಲಿ ನಿಂತಿರುವ ಮರವು ಬಿರುಗಾಳಿಯಿಂದ ಮುರಿದುಹೋಗುತ್ತದೆ. ಮುರಿದ ಭಾಗವು ಬಾಗಿ ನೆಲವನ್ನು ಸ್ಪರ್ಶಿಸುತ್ತದೆ ಮತ್ತು ನೆಲದೊಂದಿಗೆ 30° ಕೋನವನ್ನು ಉಂಟು ಮಾಡುತ್ತದೆ. ಮರದ ಬುಡಕ್ಕೂ ಮತ್ತು ಮರದ ತುದಿಯು ನೆಲವನ್ನು ಮುಟ್ಟುವ ಬಿಂದುವಿಗೂ ನಡುವಿನ ಅಂತರವು 12 ಮೀಟರ್ ಆಗಿದೆ. ಹಾಗಾದರೆ ಮರದ ಮೂಲ ಎತ್ತರವನ್ನು ಕಂಡುಹಿಡಿಯಿರಿ.

A. $18\sqrt{2}$ m
B. $18\sqrt{3}$ m
C. $12\sqrt{2}$ m
D. $12\sqrt{3}$ m ✓

Blackbook Vocabulary — Now in the App! ▶ Download Now on Google Play

**Q16** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 19% ಮತ್ತು 59% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 11% ಮತ್ತು 94% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 25% ಮತ್ತು 70% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 96%, 44% ಮತ್ತು 25% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. I

B. IV ✓

C. III

D. II

**Q17** Successive Percentage Change

ಇಂಧನದ ಬೆಲೆಯು ಸತತ ಮೂರು ತಿಂಗಳುಗಳಲ್ಲಿ 10%, 20% ಮತ್ತು 15% ಕಡಿಮೆಯಾಗುತ್ತದೆ. ನಾಲ್ಕನೇ ತಿಂಗಳಲ್ಲಿ, ಬೆಲೆಯು 40% ಹೆಚ್ಚಾಗುತ್ತದೆ. ನಾಲ್ಕನೇ ತಿಂಗಳ ಕೊನೆಯಲ್ಲಿ ಇಂಧನದ ಬೆಲೆಯಲ್ಲಿ ಅದರ ಮೂಲ ಬೆಲೆಗೆ ಹೋಲಿಸಿದರೆ ಆಗುವ ಒಟ್ಟಾರೆ ಶೇಕಡಾವಾರು ಇಳಿಕೆಯನ್ನು ಕಂಡುಹಿಡಿಯಿರಿ.

A. 14.32% ✓

B. 13.42%

C. 12.65%

D. 15.33%

**Q18** Two Trains Crossing

ಕ್ರಮವಾಗಿ 240 m ಮತ್ತು 280 m ಉದ್ದದ ಎರಡು ರೈಲುಗಳು ಸಮಾಂತರ ಹಳಿಗಳ ಮೇಲೆ ಚಲಿಸುತ್ತಾ ಪರಸ್ಪರ ಹತ್ತಿರಕ್ಕೆ ಬರುತ್ತಿವೆ, ಒಂದು ರೈಲು 70 km/hr ವೇಗದಲ್ಲಿ ಚಲಿಸುತ್ತಿದೆ ಮತ್ತು ಇನ್ನೊಂದು ರೈಲು 74 km/hr ವೇಗದಲ್ಲಿ ಚಲಿಸುತ್ತವೆ. ಹಾಗಾದರೆ ಅವು ಪರಸ್ಪರ ದಾಟಲು ತೆಗೆದುಕೊಳ್ಳುವ ಸಮಯವನ್ನು (ಸೆಕೆಂಡುಗಳಲ್ಲಿ) ಕಂಡುಹಿಡಿಯಿರಿ.

A. 14

B. 13 ✓

C. 16

D. 12

**Q19** Weighted Average

A, B, C, D, ಮತ್ತು E ಅವರ ಸರಾಸರಿ ವಯಸ್ಸು 55 ವರ್ಷಗಳು. A ಮತ್ತು B ಅವರ ಸರಾಸರಿ ವಯಸ್ಸು 45 ವರ್ಷಗಳು. C ಮತ್ತು D ಅವರ ಸರಾಸರಿ ವಯಸ್ಸು 57 ವರ್ಷಗಳು. ಹಾಗಾದರೆ E ಅವರ ವಯಸ್ಸು ಎಷ್ಟು?

A. 66 ವರ್ಷಗಳು

B. 76 ವರ್ಷಗಳು

C. 71 ವರ್ಷಗಳು ✓

D. 68 ವರ್ಷಗಳು

**Q20** a^3 + b^3, a^3 - b^3

ಒಂದು ವೇಳೆ $a - b = 9$ ಮತ್ತು $ab = 13$ ಆಗಿದ್ದರೆ, $a^3 - b^3$ ಯ ಮೌಲ್ಯ ಎಷ್ಟು?

A. 1,040

B. 1,080 ✓

C. 1,060

D. 1,020

**Q21** Basic Circle Properties

AB ಎಂಬುದು O ಮಧ್ಯಬಿಂದುವನ್ನು ಹೊಂದಿರುವ ವೃತ್ತದ ವ್ಯಾಸವಾಗಿದೆ. ಅದರ ಪರಿಧಿಯ ಮೇಲಿನ X ಬಿಂದುವಿನಿಂದ, AB ಮೇಲೆ ಲಂಬವಾದ XY ರೇಖೆಯನ್ನು ಎಳೆಯಲಾಗುತ್ತದೆ. ಇದರಿಂದ ಅದು AB ಅನ್ನು Y ನಲ್ಲಿ ಛೇದಿಸುತ್ತದೆ. ಒಂದು ವೇಳೆ BY = 5 cm ಮತ್ತು XY = 7 cm ಆಗಿದ್ದರೆ, ವೃತ್ತದ ಪರಿಧಿ (cm ನಲ್ಲಿ) ಎಷ್ಟು?

A. $\frac{67}{7}\pi$

B. $\frac{74}{5}\pi$ ✓

C. $\frac{47}{8}\pi$

D. $\frac{37}{5}\pi$

Blackbook Vocabulary — Now in the App! ▶ Download Now on Google Play

generated by rank.qmaths.in

**Q22** Cylinder

ಮುಚ್ಚಿದ ಸಿಲಿಂಡರ್‌ನ ವಕ್ರ ಮೇಲ್ಮೈ ವಿಸ್ತೀರ್ಣವು 440 $cm^2$ ಆಗಿದೆ ಮತ್ತು ಅದರ ಒಟ್ಟು ಮೇಲ್ಮೈ ವಿಸ್ತೀರ್ಣವು 748 $cm^2$ ಆಗಿದೆ. ಹಾಗಾದರೆ ಸಿಲಿಂಡರ್‌ನ ಎತ್ತರವನ್ನು ಕಂಡುಹಿಡಿಯಿರಿ.

$\left(\pi = \frac{22}{7}\right)$ ಬಳಸಿ.

A. 5 cm

B. 10 cm ✓

C. 8 cm

D. 12 cm

**Q23** Percentage Based

ಒಂದು ಕುಟುಂಬಕ್ಕೆ ₹48,000 ಮಾಸಿಕ ಬಜೆಟ್ ಅನ್ನು ಈ ಕೆಳಗಿನಂತೆ ವಿತರಿಸಲಾಗಿದೆ: ಆಹಾರ, ಬಾಡಿಗೆ, ಶಿಕ್ಷಣ, ಉಳಿತಾಯ ಮತ್ತು ಇತರೆ. ಒಂದುವೇಳೆ ಒಟ್ಟು ಬಜೆಟ್ ಅನ್ನು ಬದಲಾಯಿಸದೆ ಮುಂದಿನ ತಿಂಗಳು ಅವರು ತಮ್ಮ ಉಳಿತಾಯವನ್ನು 20% ಗೆ ಹೆಚ್ಚಿಸಲು ಬಯಸಿದರೆ, ಪ್ರಸ್ತುತ ತಿಂಗಳಿಗೆ ಹೋಲಿಸಿದರೆ ಮುಂದಿನ ತಿಂಗಳಲ್ಲಿ ಅಗತ್ಯವಿರುವ ಹೆಚ್ಚುವರಿ ಉಳಿತಾಯದ ಮೊತ್ತ ಎಷ್ಟು? (Food=ಆಹಾರ, Rent= ಬಾಡಿಗೆ, Education= ಶಿಕ್ಷಣ, Savings=ಉಳಿತಾಯ, Others = ಇತರೆ, Monthly Budget= ಮಾಸಿಕ ಬಜೆಟ್)




A. ₹2,400 ✓

B. ₹3,000

C. ₹2,800

D. ₹2,000

**Q24** Standard Angle Values

ಒಂದು ವೇಳೆ $\cot^2(2\eta) = 3$, ಮತ್ತು $2\eta$ ಒಂದು ಲಘುಕೋನವಾಗಿದ್ದರೆ, $5\eta$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. $30°$

B. $50°$

C. $75°$ ✓

D. $15°$

Blackbook Vocabulary — Now in the App! ► Download Now on Google Play

**Q25** Volume

6 cm ತ್ರಿಜ್ಯ ಮತ್ತು 14 cm ಎತ್ತರವಿರುವ ಒಂದು ಶಂಕುವಿನಾಕಾರದ ಲೋಟದಲ್ಲಿ ಅಂಚಿನವರೆಗೆ ನೀರನ್ನು ತುಂಬಿಸಲಾಗುತ್ತದೆ. 3 cm ತ್ರಿಜ್ಯ ಮತ್ತು 7 cm ಎತ್ತರವಿರುವ ಸಣ್ಣ ಶಂಕುವಿನಾಕಾರದ ಒಂದು ಕಲ್ಲನ್ನು ಲೋಟದ ಒಳಗೆ ಬೀಳಿಸಲಾಗುತ್ತದೆ, ಇದರಿಂದಾಗಿ ಸ್ವಲ್ಪ ನೀರು ಉಕ್ಕಿ ಹರಿಯುತ್ತದೆ. ಹಾಗಾದರೆ ಗಾಜಿನಲ್ಲಿ ಉಳಿದಿರುವ ನೀರಿನ ಪ್ರಮಾಣ ಎಷ್ಟು?

$\left(\pi = \frac{22}{7}\right)$ ಬಳಸಿ.

A. 0.653 ಲೀಟರ್‌ಗಳು

B. 0.512 ಲೀಟರ್‌ಗಳು

C. 0.462 ಲೀಟರ್‌ಗಳು ✓

D. 0.708 ಲೀಟರ್‌ಗಳು

Blackbook Vocabulary — Now in the App! ▶ Download Now on Google Play

generated by rank.qmaths.in

## Mathematics

25 Questions • Answer Key

**Q1** 2-Year Difference

₹20,000 ಅಸಲು ಮೊತ್ತದ ಮೇಲೆ ವಾರ್ಷಿಕ R% ದರದಲ್ಲಿ 2 ವರ್ಷಗಳ ಅವಧಿಗೆ ಸಿಗುವ ಚಕ್ರಬಡ್ಡಿ (ಚಕ್ರಬಡ್ಡಿಯನ್ನು ವರ್ಷಕ್ಕೊಮ್ಮೆ ಲೆಕ್ಕ ಹಾಕುವಂತೆ) ಮತ್ತು ಸರಳ ಬಡ್ಡಿಗಳ ನಡುವಿನ ವ್ಯತ್ಯಾಸ ₹162 ಆಗಿದೆ. ಹಾಗಾದರೆ R ನ ಮೌಲ್ಯ ಎಷ್ಟು?

A. 6
B. 7
C. 9 ✓
D. 8

**Q2** Average Speed

42 km ದೂರದ ಒಂದು ಮ್ಯಾರಥಾನ್ ಸ್ಪರ್ಧೆಯಲ್ಲಿ ಒಬ್ಬ ಓಟಗಾರನು ದೂರದ ಮೂರನೇ-ಒಂದು ಭಾಗದಷ್ಟನ್ನು 12 km/h ವೇಗದಲ್ಲಿ ಕ್ರಮಿಸುತ್ತಾನೆ ಮತ್ತು ಉಳಿದ ದೂರದ ಮೂರನೇ-ಎರಡರಷ್ಟು ಭಾಗವನ್ನು 10.5 km/h ವೇಗದಲ್ಲಿ ಕ್ರಮಿಸುತ್ತಾನೆ. ಹಾಗಾದರೆ ಇಡೀ ಓಟದಲ್ಲಿ ಓಟಗಾರನ ಸರಾಸರಿ ವೇಗ ಎಷ್ಟು? (ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ತನ್ನಿ.)

A. 10.96 km/h ✓
B. 11.96 km/h
C. 10.86 km/h
D. 11.86 km/h

**Q3** Basic Ratio

ಎರಡು ಸಂಖ್ಯೆಗಳ ನಡುವಿನ ಅನುಪಾತವು 2 : 9 ಆಗಿದೆ. ಒಂದು ವೇಳೆ ಚಿಕ್ಕ ಸಂಖ್ಯೆಗೆ 4 ಅನ್ನು ಕೂಡಿಸಿದರೆ ಮತ್ತು ದೊಡ್ಡ ಸಂಖ್ಯೆಗೆ 3 ಅನ್ನು ಕೂಡಿಸಿದರೆ, ಆಗ ಅನುಪಾತವು 1 : 4 ಆಗುತ್ತದೆ. ಹಾಗಾದರೆ ಮೊದಲು ಇದ್ದ ದೊಡ್ಡ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 115
B. 127
C. 117 ✓
D. 120

**Q4** Common Tangents

5 cm ಮತ್ತು 25 cm ತ್ರಿಜ್ಯಗಳನ್ನು ಹೊಂದಿರುವ ಎರಡು ವೃತ್ತಗಳ ಕೇಂದ್ರಗಳ ನಡುವಿನ ದೂರವು 29 cm ಆಗಿದೆ. ಹಾಗಾದರೆ ನೇರ ಸಾಮಾನ್ಯ ಸ್ಪರ್ಶಕದ ಉದ್ದವನ್ನು (cm ಗಳಲ್ಲಿ) ಕಂಡುಹಿಡಿಯಿರಿ.

A. 21 ✓
B. 13
C. 27
D. 28

**Q5** Dividing Quantity in Ratio

ಒಬ್ಬ ರಸಾಯನಶಾಸ್ತ್ರಜ್ಞನು ಎರಡು ದ್ರವಗಳನ್ನು 5 : 3 ರ ಅನುಪಾತದಲ್ಲಿ ಮಿಶ್ರಣ ಮಾಡಿ 250 ml ದ್ರಾವಣವನ್ನು ತಯಾರಿಸಬೇಕಾಗಿದೆ. ಹಾಗಾದರೆ ಎರಡನೇ ದ್ರವವನ್ನು ಎಷ್ಟು (ml ಗಳಲ್ಲಿ) ಬಳಸಬೇಕು?

A. 156.25
B. 93.75 ✓
C. 125.25
D. 62.25

**Q6** Divisibility Rules

8-ಅಂಕಿಯ ಸಂಖ್ಯೆಯಾದ 753A3228 ಅನ್ನು 18 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಮೌಲ್ಯ ಎಷ್ಟು?

A. 9
B. 6 ✓
C. 2
D. 5

**Q7** Find Principal

ಎಷ್ಟು ಮೊತ್ತವು (₹ ಗಳಲ್ಲಿ) ವಾರ್ಷಿಕ 12% ಬಡ್ಡಿ ದರದಲ್ಲಿ 4 ವರ್ಷಗಳ ಅವಧಿಯಲ್ಲಿ ₹960 ಸರಳ ಬಡ್ಡಿಯನ್ನು ಗಳಿಸುತ್ತದೆ?

A. 2000 ✓
B. 1000
C. 6000
D. 4000

Blackbook Vocabulary — Now in the App! ▶ Download Now on Google Play

**Q8** Finding Present Age

X ಅವರ ವಯಸ್ಸು Y ಅವರ ವಯಸ್ಸುಗಿಂತ 20% ಹೆಚ್ಚು ಇದೆ. ಒಂದು ವೇಳೆ ಅವರುಗಳ ವಯಸ್ಸುಗಳ ಮೊತ್ತವು ಅವರ ವಯಸ್ಸುಗಳ ನಡುವಿನ ವ್ಯತ್ಯಾಸಕ್ಕಿಂತ 20 ಹೆಚ್ಚು ಇದ್ದರೆ, ಅವರುಗಳ ಅನುಕ್ರಮ ವಯಸ್ಸುಗಳನ್ನು (ವರ್ಷಗಳಲ್ಲಿ) ಕಂಡುಹಿಡಿಯಿರಿ.

A. 10, 14
B. 12, 10 ✓
C. 12, 14
D. 10, 13

**Q9** Half-Yearly Compounding

ವಾರ್ಷಿಕ 20% ದರದಲ್ಲಿ ₹1,50,000 ಮೊತ್ತವು 2 ವರ್ಷಗಳ ಅವಧಿಗೆ ಗಳಿಸುವ (ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಚಕ್ರಬಡ್ಡಿ (₹ ಗಳಲ್ಲಿ) ಎಷ್ಟು?

A. 69651
B. 66951
C. 66915
D. 69615 ✓

**Q10** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 3 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು10 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು15 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತವೆ?

A. 3
B. 1 ✓
C. 4
D. 2

**Q11** Profit/Loss Percentage

ಒಬ್ಬ ಅಂಗಡಿಯವನು ಕೆಲವು ಪೆನ್ಸಿಲ್‌ಗಳನ್ನು ₹35 ಕ್ಕೆ 6 ಪೆನ್ಸಿಲ್‌ಗಳಂತೆ ಖರೀದಿಸುತ್ತಾನೆ ಮತ್ತು ಅವುಗಳನ್ನು ₹65 ಕ್ಕೆ 10 ಪೆನ್ಸಿಲ್‌ಗಳಂತೆ ಮಾರಾಟ ಮಾಡುತ್ತಾನೆ. ಅವನ ಶೇಕಡಾವಾರು ಲಾಭವು ________ % ಆಗಿರುತ್ತದೆ. (2 ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

A. 11.43 ✓
B. 13.14
C. 13.41
D. 11.34

**Q12** Replacement of Mixture

ಒಂದು ಪಾತ್ರೆಯಲ್ಲಿ 5 : 3 ಅನುಪಾತದಲ್ಲಿ A ಮತ್ತು B ದ್ರವಗಳಿವೆ. 16 ಲೀಟರ್ ಮಿಶ್ರಣವನ್ನು ತೆಗೆದು ಅದೇ ಪ್ರಮಾಣದ ದ್ರವ B ಅನ್ನು ಸೇರಿಸಿದರೆ, ಅನುಪಾತವು 3 : 5 ಆಗುತ್ತದೆ. ಹಾಗಾದರೆ ಪಾತ್ರೆಯಲ್ಲಿ ಇರುವ ಪ್ರಮಾಣ ಎಷ್ಟು?

A. 47 ಲೀಟರ್
B. 44 ಲೀಟರ್
C. 33 ಲೀಡರ್
D. 40 ಲೀಟರ್ ✓

**Q13** Single Change

ಒಬ್ಬ ವ್ಯಕ್ತಿಯ ಮಾಸಿಕ ಆದಾಯವು ₹9,770 ಆಗಿದೆ. ಒಂದುವೇಳೆ ಆತನ ಆದಾಯವನ್ನು 27% ಹೆಚ್ಚಿಸಿದರೆ, ಆತನ ಹೊಸ ಮಾಸಿಕ ಆದಾಯ ಎಷ್ಟಾಗುತ್ತದೆ?

A. ₹12,307.50
B. ₹12,407.90 ✓
C. ₹12,207.90
D. ₹12,507.50

**Q14** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 58% ಮತ್ತು 36% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 73% ಮತ್ತು 91% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 76% ಮತ್ತು 88% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 79%, 68% ಮತ್ತು 96% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. II
B. IV ✓
C. I
D. III

**Q15** Surface Area (TSA/LSA)

ಎರಡು ಘನಾಕೃತಿಗಳ ಘನಫಲಗಳು 27 : 64 ಅನುಪಾತದಲ್ಲಿದ್ದರೆ, ಅವುಗಳ ಒಟ್ಟು ಮೇಲ್ಮೈ ವಿಸ್ತೀರ್ಣದ ಅನುಪಾತವೆಷ್ಟು?

A. 9 : 16 ✓
B. 4 : 9
C. 4 : 25
D. 9 : 25

Blackbook Vocabulary — Now in the App! ▶ Download Now on Google Play

**Q16** Two Successive Changes

ಒಂದು ವಸ್ತುವಿನ ಬೆಲೆಯನ್ನು 30% ಹೆಚ್ಚಿಸಲಾಗಿದೆ ಮತ್ತು ನಂತರ 30% ಕಡಿಮೆ ಮಾಡಲಾಗಿದೆ, ಆ ವಸ್ತುವಿನ ಬೆಲೆಯಲ್ಲಿ ಉಂಟಾದ ಒಟ್ಟಾರೆ ಶೇಕಡಾವಾರು ಬದಲಾವಣೆ ಎಷ್ಟು?

A. ಹೆಚ್ಚಾಗುವುದೂ ಇಲ್ಲ ಅಥವಾ ಕಡಿಮೆಯಾಗುವುದೂ ಇಲ್ಲ

B. 9% ಇಳಿಕೆ ✓

C. 18% ಇಳಿಕೆ

D. 9% ಹೆಚ್ಚಳ

**Q17** Two Trains Crossing

310 m ಮತ್ತು 320 m ಉದ್ದದ ಎರಡು ರೈಲುಗಳು ವಿರುದ್ಧ ದಿಕ್ಕಿನಲ್ಲಿ ಸಮಾನಾಂತರ ಹಳಿಗಳ ಮೇಲೆ ಚಲಿಸುತ್ತಿವೆ. ಮೊದಲನೆಯದು 67 km/h ವೇಗದಲ್ಲಿ ಚಲಿಸುತ್ತವೆ ಮತ್ತು ಎರಡನೆಯದು 59 km/h ವೇಗದಲ್ಲಿ ಚಲಿಸುತ್ತವೆ. ಹಾಗಾದರೆ ಅವು ಪರಸ್ಪರ ದಾಟಲು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತವೆ?

A. 18 ಸೆಕೆಂಡುಗಳು ✓

B. 14 ಸೆಕೆಂಡುಗಳು

C. 16 ಸೆಕೆಂಡುಗಳು

D. 12 ಸೆಕೆಂಡುಗಳು

**Q18** Bracket Simplification

ಈ ಮುಂದಿನ ಗಣಿತೋಕ್ತಿಯನ್ನು ಸರಳೀಕರಿಸಿ: $[18-\{6+(4\times 2)\}+3^2]\div 3$

A. $3\frac{1}{4}$

B. $2\frac{1}{3}$

C. $4\frac{2}{3}$

D. $4\frac{1}{3}$ ✓

**Q19** Curved & Total Surface Area

ಒಂದು ಶಂಕುವಿನ ಆಕಾರದ ಡೇರೆಯ ಎತ್ತರ 84 m ಮತ್ತು ಆದರ ಪಾದದ ತ್ರಿಜ್ಯ 13 m ಆಗಿದೆ. ಒಂದುವೇಳೆ ಡೇರೆಯ ಬಟ್ಟೆಯ ಬೆಲೆ ಪ್ರತಿ ಚದರ ಮೀಟರ್‌ಗೆ ₹40 ಆಗಿದ್ದರೆ ಮತ್ತು ಡೇರೆಗೆ ಬಳಸಿದ ಬಟ್ಟೆಯ ಒಟ್ಟು ಬೆಲೆ ₹E ಆಗಿದ್ದರೆ, $\sqrt{\frac{E}{2041}-4}$ ಮೌಲ್ಯವನ್ನು ಕಂಡುಹಿಡಿಯಿರಿ. ($\pi = 3.14$ ಬಳಸಿ)

A. 6

B. 4

C. 8 ✓

D. 2

**Q20** Laws of Indices

ಸರಳೀಕರಿಸಿ: $(5^2)^3 \times (5)^{-2}$

A. 25

B. 125

C. 3125

D. 625 ✓

Blackbook Vocabulary — Now in the App! ▸ Download Now on Google Play

**Q21** Mean of Grouped Data

ಈ ಕೆಳಗಿನ ದತ್ತಾಂಶಗಳ ಸಮಾಂತರ ಮಾಧ್ಯ (arithmetic mean) ಕಂಡುಹಿಡಿಯಿರಿ (ದಶಮಾಂಶದ ಎರಡು ಸ್ಥಾನಗಳಿಗೆ ಸೀಮಿತಗೊಳಿಸಿ).

| ವರ್ಗಾಂತರ | 0-12 | 12-24 | 24-36 | 36-48 | 48-60 |
|---|---|---|---|---|---|
| ಆವೃತ್ತಿ | 6 | 8 | 10 | 9 | 12 |

A. 34.48

B. 33.47 ✓

C. 31.48

D. 32.46

**Q22** Mean of Grouped Data

ಈ ಕೆಳಗಿನ ದತ್ತಾಂಶದ ಸರಾಸರಿಯು 50 ಆಗಿದ್ದರೆ, x ನ ಮೌಲ್ಯ ಎಷ್ಟು?

| **ವರ್ಗ** | 10-20 | 20-30 | 30-40 | 40-50 | 50-60 |
|---|---|---|---|---|---|
| **ಆವರ್ತನ** | 17 | 33 | 25 | 43 | x |

A. 425

B. 391

C. 402 ✓

D. 411

**Q23** Pythagorean Identities

ಸರಳೀಕರಿಸಿ: $\frac{\sin A}{1+\cos A} + \frac{1+\cos A}{\sin A}$

A. 2cosecA ✓

B. 1

C. 2secA

D. tanA

**Q24** Pythagorean Identities

ಇದರ ಮೌಲ್ಯ ನಿರ್ಣಯಿಸಿ: $\frac{2\sin A}{(1+\cos A+\sin A)} \times \frac{(1+\sin A)}{(1-\cos A+\sin A)}$

A. 0

B. 2

C. 3

D. 1 ✓

Blackbook Vocabulary — Now in the App! ► Download Now on Google Play

**Q25** Single Line Graph

ಒಬ್ಬ ಅಂಗಡಿಯವನು ಹೀಟರ್ ರಾಡ್‌ಗಳನ್ನು ಮಾರಾಟ ಮಾಡುತ್ತಾನೆ, ಪ್ರತಿಯೊಂದರ ಅಸಲು ಬೆಲೆ ₹3,760 ಆಗಿದೆ. ಕೊಟ್ಟಿರುವ ರೇಖಾನಕ್ಷೆಯಲ್ಲಿ ತೋರಿಸಿರುವಂತೆ ಲಾಭಾಂಶವು ಬೇಡಿಕೆಯನ್ನು ಅವಲಂಬಿಸಿ ಬದಲಾಗುತ್ತದೆ. ಅಕ್ಟೋಬರ್‌ನಿಂದ ಮಾರ್ಚ್ ಅಂತ್ಯದವರೆಗೆ ಪ್ರತಿ ತಿಂಗಳು ಒಂದೊಂದು ರಾಡ್‌ನ ಮಾರಾಟದಿಂದ ಬರುವ ಒಟ್ಟು ಆದಾಯವು ₹24,966.40 ಆಗಿದ್ದರೆ, ಮಾರ್ಚ್ ತಿಂಗಳಲ್ಲಿ ಗಳಿಸಿದ ಲಾಭವನ್ನು (% ಗಳಲ್ಲಿ) ಕಂಡುಹಿಡಿಯಿರಿ.




(profit = ಲಾಭ, october =ಅಕ್ಟೋಬರ್, November =ನವೆಂಬರ್, December = ಡಿಸೆಂಬರ್, January =ಜನವರಿ, February = ಫೆಬ್ರವರಿ)

**A.** 5% ✓

**B.** 7%

**C.** 10%

**D.** 6%

Blackbook Vocabulary — Now in the App! ► Download Now on Google Play

generated by rank.qmaths.in

## Mathematics

25 Questions • Answer Key

**Q1** Annual Compounding

₹2,000 ಮೊತ್ತದ ಮೇಲೆ ವಾರ್ಷಿಕ 12% ಚಕ್ರಬಡ್ಡಿ ದರದಲ್ಲಿ (ವಾರ್ಷಿಕ ಚಕ್ರಬಡ್ಡಿ ಲೆಕ್ಕದಲ್ಲಿ) 2 ವರ್ಷಗಳ ಅವಧಿಯ ನಂತರ ಎಷ್ಟು ಮೊತ್ತ ಸಿಗುತ್ತದೆ?

A. ₹2,520.80
B. ₹2,508.80 ✓
C. ₹2,608.80
D. ₹2,450.80

**Q2** Annual Compounding

ಸಚಿನ್ ಅವರು ವರ್ಷಕ್ಕೊಮ್ಮೆ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ವಾರ್ಷಿಕ 20% ಬಡ್ಡಿಯ ದರದಲ್ಲಿ ₹14,525 ಮೊತ್ತವನ್ನು ಠೇವಣಿಯಾಗಿ ಇಟ್ಟರು. 2 ವರ್ಷಗಳ ನಂತರ ಸಚಿನ್ ಅವರು ಪಡೆದ ಒಟ್ಟು ಮೊತ್ತ ಎಷ್ಟು?

A. ₹20,910
B. ₹20,916 ✓
C. ₹20,720
D. ₹21,073

**Q3** Average Speed

ಒಂದು ಕಾರು ಒಟ್ಟು 360 ದೂರದಲ್ಲಿ ದೂರವನ್ನು ಕ್ರಮಿಸುತ್ತದೆ. ಅದು ಮೊದಲ 120 km ಅನ್ನು 40 km/h ವೇಗದಲ್ಲಿ ಕ್ರಮಿಸುತ್ತದೆ. ಉಳಿದ ದೂರದಲ್ಲಿ, ಅದು ಮೂರನೇ ಒಂದು ಭಾಗವನ್ನು 60 km/ h ವೇಗದಲ್ಲಿ ಮತ್ತು ಉಳಿದ ದೂರವನ್ನು ಸ್ಥಿರ ವೇಗ v ಯಲ್ಲಿ ಕ್ರಮಿಸುತ್ತದೆ. ಇಡೀ ಪ್ರಯಾಣಕ್ಕೆ ಕಾರಿನ ಒಟ್ಟಾರೆ ಸರಾಸರಿ ವೇಗ 60 km/h ಆಗಿದ್ದರೆ, v ಯ ಮೌಲ್ಯ ಎಷ್ಟು?

A. 100 km/h
B. 96 km/h ✓
C. 90 km/h
D. 85 km/h

**Q4** Basic Ratio

ಒಂದು ವೇಳೆ x : y = 3 : 5 ಮತ್ತು y : z = 2 : 3 ಆಗಿದ್ದರೆ x : y : z ನ ಮೌಲ್ಯವನ್ನು ಕಂಡುಹಿಡಿಯಿರಿ.

A. 1 : 2 : 3
B. 6 : 10 : 15 ✓
C. 3 : 5 : 7
D. 3 : 7 : 5

**Q5** Basic TSD

ಕೌಶಲ್ ಅವರು ಗಂಟೆಗೆ 45 km/h ವೇಗದಲ್ಲಿ 5 ಗಂಟೆ 52 ನಿಮಿಷ ಪ್ರಯಾಣ ಮಾಡಿದರು. ಅದೇ ದೂರವನ್ನು 24 ಗಂಟೆಗಳಲ್ಲಿ ಕ್ರಮಿಸಲು ಅವರು ಯಾವ ವೇಗದಲ್ಲಿ (km/h ಗಳಲ್ಲಿ) ಪ್ರಯಾಣ ಮಾಡಬೇಕು?

A. 8
B. 11 ✓
C. 9
D. 12

**Q6** Chord Properties

ಒಂದು ವೃತ್ತದ ವ್ಯಾಸದ ಉದ್ದವು 26 cm ಆಗಿದೆ ಮತ್ತು ವೃತ್ತದ ಒಂದು ಜ್ಯಾದ ಉದ್ದವು 10 cm ಆಗಿದೆ. ಹಾಗಾದರೆ ವೃತ್ತದ ಕೇಂದ್ರದಿಂದ ಜ್ಯಾ ದ ದೂರವನ್ನು (cm ಗಳಲ್ಲಿ) ಕಂಡುಹಿಡಿಯಿರಿ.

A. 12 ✓
B. 18
C. 14
D. 16

**Q7** Cube & Cuboid

ಒಂದು ಘನಾಭವು 30 cm × 24 cm × 18 cm ಅಳತೆಗಳನ್ನು ಹೊಂದಿದೆ. ಇದನ್ನು ಅದರ ಎಲ್ಲಾ ಹೊರ ಮೇಲ್ಮೈಗಳ ಮೇಲೆ ಬಣ್ಣಬಳಿಯಲಾಗಿದೆ ಮತ್ತು ನಂತರ 2 cm ಬಾಹುವಿನ ಸಣ್ಣ ಘನಗಳಾಗಿ ಕತ್ತರಿಸಲಾಗುತ್ತದೆ. ಹಾಗಾದರೆ ಎಷ್ಟು ಸಣ್ಣ ಘನಗಳು ನಿಖರವಾಗಿ ಎರಡು ಮುಖಗಳಲ್ಲಿ ಬಣ್ಣವನ್ನು ಹೊಂದಿವೆ?

A. 120 ✓
B. 124
C. 132
D. 128

**Q8** Dividing Quantity in Ratio

7 : 2 ಅನುಪಾತದಲ್ಲಿ ನೀಲಿ ಮತ್ತು ಬಿಳಿ ಬಣ್ಣಗಳನ್ನು ಮಿಶ್ರಣ ಮಾಡಿ ಒಂದು ಬಣ್ಣದ ಮಿಶ್ರಣವನ್ನು ತಯಾರಿಸಲಾಗುತ್ತದೆ. ಒಂದು ವೇಳೆ ಒಬ್ಬ ಪೇಯಿಂಟರ್ 315 ಲೀಟರ್ ನೀಲಿ ಬಣ್ಣವನ್ನು ಬಳಸಿದರೆ, ಒಟ್ಟು ಎಷ್ಟು ಬಣ್ಣದ ಮಿಶ್ರಣವನ್ನು ತಯಾರಿಸಲಾಗುತ್ತದೆ?

A. 420 ಲೀಟರ್
B. 405 ಲೀಟರ್ ✓
C. 490 ಲೀಟರ್
D. 350 ಲೀಟರ್

Blackbook Vocabulary — Now in the App! ▶ Download Now on Google Play

**Q9** Find SI

ವಾರ್ಷಿಕ 12% ದರದಲ್ಲಿ ₹500 ಮೊತ್ತವನ್ನು 4.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 370

B. 320

C. 250

D. 270 ✓

**Q10** Finding Value from Percentage

ಒಂದು ಚುನಾವಣೆಯಲ್ಲಿ ಕೇವಲ ಇಬ್ಬರು ಅಭ್ಯರ್ಥಿಗಳು ಮಾತ್ರ ಸ್ಪರ್ಧಿಸಿದರು. 25% ಮತಗಳನ್ನು ಪಡೆದ ವ್ಯಕ್ತಿಯು 500 ಮತಗಳ ಅಂತರದಿಂದ ಸೋತರು. ಒಂದುವೇಳೆ ಯಾವುದೇ ಮತಗಳು ಸಹ ಅಸಿಂಧುವಲ್ಲ ಎಂದು ಭಾವಿಸಿದರೆ, ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆ ಎಷ್ಟು?

A. 2000

B. 4000

C. 3000

D. 1000 ✓

**Q11** Laws of Indices

ಒಂದು ವೇಳೆ $86^{0.2} = x$, $86^{0.35} = y$ ಮತ್ತು $x^z = y^9$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

A. 16.25

B. 14.75

C. 17.25

D. 15.75 ✓

**Q12** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 3 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 8 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 24 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವು ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಿಸಲು ಎಷ್ಟು ಸಮಯ (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತವೆ?

A. 2

B. 4

C. 3

D. 1 ✓

**Q13** Percentage Increase/Decrease

ಒಂದು ವಾಷಿಂಗ್ ಮೆಷಿನ್‌ನ ಬೆಲೆಯು ಒಂದು ಟಿವಿಯ ಬೆಲೆಗಿಂತ 50% ಕಡಿಮೆ ಇದೆ. ವಾಷಿಂಗ್ ಮೆಷಿನ್‌ನ ಬೆಲೆಯು 76% ರಷ್ಟು ಹೆಚ್ಚಾದರೆ ಮತ್ತು ಟಿವಿಯ ಬೆಲೆಯು 37% ರಷ್ಟು ಕಡಿಮೆಯಾದರೆ, 4 ವಾಷಿಂಗ್ ಮೆಷಿನ್‌ಗಳು ಮತ್ತು 3 ಟಿವಿಗಳ ಒಟ್ಟು ವೆಚ್ಚದಲ್ಲಿ ಆಗುವ ಶೇಕಡಾವಾರು ಬದಲಾವಣೆ ಎಷ್ಟು ಆಗುತ್ತದೆ?

A. 8.2% ರಷ್ಟು ಹೆಚ್ಚಳ ✓

B. 5% ರಷ್ಟು ಕಡಿಮೆ

C. 13% ರಷ್ಟು ಹೆಚ್ಚಳ

D. 16% ರಷ್ಟು ಕಡಿಮೆ

**Q14** Profit/Loss Percentage

ಮುಖೇಶ್ ಎಂಬ ವ್ಯಾಪಾರಿಯು ಪ್ರತಿ ಪೆನ್ನಿಗೆ ₹5 ರಂತೆ ಒಂದು ನಿರ್ದಿಷ್ಟ ಸಂಖ್ಯೆಯ ಪೆನ್ನುಗಳನ್ನು ಖರೀದಿಸುತ್ತಾನೆ. ಅವನು ಮೂರನೇ-ಎರಡರಷ್ಟು ಪೆನ್ನುಗಳನ್ನು 25% ಲಾಭದಲ್ಲಿ ಮತ್ತು ಉಳಿದ ಪೆನ್ನುಗಳನ್ನು 10% ನಷ್ಟದಲ್ಲಿ ಮಾರಾಟ ಮಾಡುತ್ತಾನೆ. ಒಂದು ವೇಳೆ ಮುಖೇಶ್ ಗಳಿಸಿದ ಒಟ್ಟು ಲಾಭವು ₹360 ಆಗಿದ್ದರೆ, ಅವನು ಖರೀದಿಸಿದ ಪೆನ್ನುಗಳ ಸಂಖ್ಯೆ ಎಷ್ಟು?

A. 540 ✓

B. 550

C. 580

D. 530

**Q15** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಕುಕ್ಕರ್‌ನ ನಮೂದಿತ ಬೆಲೆ ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 66% ಮತ್ತು 88% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿ 78% ಮತ್ತು 70% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿ 89% ಮತ್ತು 35% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 27%, 65% ಮತ್ತು 59% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. IV

B. I ✓

C. II

D. III

Blackbook Vocabulary — Now in the App! ▶ Download Now on Google Play

**Q16** Weighted Average

ಒಂದು ಕುಟುಂಬದ ಸರಾಸರಿ ಮಾಸಿಕ ಖರ್ಚು ಮೊದಲ ಮೂರು ತಿಂಗಳು ₹3,200, ಮುಂದಿನ ನಾಲ್ಕು ತಿಂಗಳು ₹3,550 ಮತ್ತು ವರ್ಷದ ಕೊನೆಯ ಐದು ತಿಂಗಳು ₹4,120 ಆಗಿದೆ. ಒಂದು ವೇಳೆ ವರ್ಷದ ಒಟ್ಟು ಉಳಿತಾಯವು ₹2,265 ಆಗಿದ್ದರೆ, ಸರಾಸರಿ ಮಾಸಿಕ ಆದಾಯ ಎಷ್ಟು?

A. ₹4,380

B. ₹3,880

C. ₹4,234.60

D. ₹3,888.75 ✓

**Q17** a^3+b^3+c^3-3abc

ಒಂದುವೇಳೆ $a + b + c = 6$, $abc = -60$ ಮತ್ತು $a^3 + b^3 + c^3 = 162$ ಆಗಿದ್ದರೆ, $ab + bc + ca$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. 11

B. −21

C. −7 ✓

D. 14

**Q18** Fraction Operations

ಸರಳೀಕರಿಸಿ : $(\frac{7}{8} \div \frac{7}{16})$.

A. 2 ✓

B. 1

C. 3

D. 4

**Q19** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 62 ಆಗಿದ್ದರೆ, $(6x + 3y)$ ನ ಮೌಲ್ಯ ಎಷ್ಟು?

| **ವರ್ಗ** | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| **ಆವರ್ತನ** | 2 | 16 | x | 8 | y | 50 |

A. 77

B. 65

C. 71

D. 81 ✓

**Q20** Median

ಈ ಕೆಳಗೆ ನೀಡಲಾದ ದತ್ತಾಂಶದ ಮಧ್ಯಾಂಕವನ್ನು ಕಂಡು ಹಿಡಿಯಿರಿ.

| ವಯಸ್ಸು (ವರ್ಷಗಳಲ್ಲಿ) | 20-30 | 30-40 | 40-50 | 50-60 | 60-70 | 70-80 | 80-90 |
|---|---|---|---|---|---|---|---|
| ರೋಗಿಗಳ ಸಂಖ್ಯೆ | 21 | 25 | 13 | 11 | 10 | 37 | 23 |

A. 60 ✓

B. 79

C. 72

D. 48

Blackbook Vocabulary — Now in the App! ▶ Download Now on Google Play

**Q21** Pythagorean Identities

ಒಂದು ವೇಳೆ $\frac{\tan\theta - 1 + \sec\theta}{\tan\theta + 1 - \sec\theta} = N.\frac{1+\sin\theta}{\cos\theta}$ ಆಗಿದ್ದರೆ, $\frac{1}{N}$ ನ ಮೌಲ್ಯ ಇದಾಗಿರುತ್ತದೆ:

A. $1$ ✓

B. $\tan\theta$

C. $\operatorname{cosec}\theta$

D. $\infty$

**Q22** Pythagorean Identities

ಒಂದು ವೇಳೆ $\sin(\theta) = \frac{3}{5}$ ಆಗಿದ್ದು $\theta$ ಎನ್ನುವುದು ಲಘು ಕೋನ ಆಗಿದ್ದಲ್ಲಿ, $\cos(\theta)$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{3}{5}$

B. $\frac{4}{5}$ ✓

C. $\frac{5}{4}$

D. $\frac{3}{4}$

**Q23** Sector Area & Arc Length

ಒಂದು ವೃತ್ತದ ತ್ರಿಜ್ಯವು 9 cm ಆಗಿದೆ. ಕೇಂದ್ರಕೋನ 72° ಇರುವ ತ್ರಿಜ್ಯಖಂಡದ ವಿಸ್ತೀರ್ಣವನ್ನು ($cm^2$ ಗಳಲ್ಲಿ) ಕಂಡುಹಿಡಿಯಿರಿ. ($\pi = \frac{22}{7}$ ಎಂದು ಬಳಸಿ, ಉತ್ತರವನ್ನು ಎರಡು ದಶಮಾಂಶಗಳಿಗೆ ಮಿತಿಗೊಳಿಸಿ)

A. 72.36

B. 56.82

C. 48.23

D. 50.91 ✓

**Q24** Surds

ಸರಳೀಕರಿಸಿ :

$(3\sqrt{5} + 2\sqrt{3})^2 - (3\sqrt{5} - 2\sqrt{3})^2.$

A. $24\sqrt{15}$ ✓

B. $18\sqrt{5}$

C. $36\sqrt{3}$

D. $30\sqrt{15}$

Blackbook Vocabulary — Now in the App! ► Download Now on Google Play

generated by rank.qmaths.in

**Q25** Year-on-Year Comparison

2020 ಮತ್ತು 2025 ರ ಅವಧಿಯಲ್ಲಿ ನ್ಯೂಜಿಲೆಂಡ್‌ನ ವಿವಿಧ ಚಿಲ್ಲರೆ ವ್ಯಾಪಾರ ವಲಯಗಳಲ್ಲಿ ಆನ್‌ಲೈನ್ ಮಾರಾಟದ ವಿತರಣೆಯನ್ನು (ಒಟ್ಟು ಮೊತ್ತವು ಎರಡೂ ವರ್ಷಗಳವರೆಗೆ (₹ ನಲ್ಲಿ) ಒಂದೇ ಆಗಿರುತ್ತದೆ) ಈ ಕೆಳಗಿನ ಪೈ ನಕ್ಷೆಗಳು ವಿವರಿಸುತ್ತವೆ.




(Travel =ಪ್ರಯಾಣ, Film/Music= ಚಲನಚಿತ್ರ/ಸಂಗೀತ, Books= ಪುಸ್ತಕಗಳು, Clothes= ಬಟ್ಟೆಗಳು)

2020 ರಿಂದ 2025 ರವರೆಗೆ ಚಲನಚಿತ್ರ ಮತ್ತು ಸಂಗೀತದ ಪಾಲು ಶೇಕಡಾ ಎಷ್ಟು ಪಾಯಿಂಟ್‌ಗಳಷ್ಟು ಬದಲಾಗಿದೆ?

- **A.** 17%
- **B.** 12% ✓
- **C.** 16%
- **D.** 22%

Blackbook Vocabulary — Now in the App! ► Download Now on Google Play

generated by rank.qmaths.in

## Mathematics

25 Questions • Answer Key

**Q1** Annual Compounding

ವರ್ಷಕ್ಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಹಾಕುವಂತೆ, ₹8,324 ಮೊತ್ತದ ಮೇಲೆ ವಾರ್ಷಿಕ 5% ದರದಲ್ಲಿ 2 ವರ್ಷಗಳ ಅವಧಿಗೆ ಸಿಗುವ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ.

- A. ₹865.31
- B. ₹841.11
- C. ₹853.21 ✓
- D. ₹875.41

**Q2** Annual Compounding

ನರೇಶ್ ವಾರ್ಷಿಕವಾಗಿ ಚಕ್ರಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ 20% ಬಡ್ಡಿದರದಲ್ಲಿ ₹58,000 ಠೇವಣಿ ಇಟ್ಟರು. 2 ವರ್ಷಗಳ ನಂತರ ನರೇಶ್ ಪಡೆದ ಒಟ್ಟು ಮೊತ್ತ ಎಷ್ಟು?

- A. ₹83,520 ✓
- B. ₹83,119
- C. ₹83,229
- D. ₹83,159

**Q3** Combined Work Rate

ಒಂದು ಕಾರ್ಖಾನೆಯಲ್ಲಿ X ಮತ್ತು Y ಎಂಬ ಎರಡು ಯಂತ್ರಗಳಿವೆ. X ಯಂತ್ರವು 5 ಗಂಟೆಗಳಲ್ಲಿ 200 ಯೂನಿಟ್‌ಗಳನ್ನು ಉತ್ಪಾದಿಸಬಲ್ಲದು ಮತ್ತು Y ಯಂತ್ರವು 6 ಗಂಟೆಗಳಲ್ಲಿ 180 ಯೂನಿಟ್‌ಗಳನ್ನು ಉತ್ಪಾದಿಸಬಲ್ಲದು. ಎರಡೂ ಯಂತ್ರಗಳು ಒಟ್ಟಿಗೆ 3 ಗಂಟೆಗಳ ಕಾಲ ಕೆಲಸ ಮಾಡಿದರೆ ಮತ್ತು ನಂತರ X ಯಂತ್ರವು ಮಾತ್ರವೇ ಇನ್ನೂ 2 ಗಂಟೆಗಳ ಕಾಲ ಕೆಲಸ ಮಾಡಿದರೆ, ಒಟ್ಟು ಎಷ್ಟು ಯೂನಿಟ್‌ಗಳನ್ನು ಉತ್ಪಾದಿಸಲಾಗುತ್ತದೆ?

- A. 350 ಯೂನಿಟ್‌ಗಳು
- B. 280 ಯೂನಿಟ್‌ಗಳು
- C. 290 ಯೂನಿಟ್‌ಗಳು ✓
- D. 310 ಯೂನಿಟ್‌ಗಳು

**Q4** Common Tangents

$C_1$ ಮತ್ತು $C_2$ ಎಂಬ ಕೇಂದ್ರಬಿಂದುಗಳನ್ನು ಹೊಂದಿರುವ ಎರಡು ವೃತ್ತಗಳು ಕ್ರಮವಾಗಿ $r_1$ ಮತ್ತು $r_2$ ತ್ರಿಜ್ಯಗಳನ್ನು ಹೊಂದಿವೆ. ಒಂದು ವೇಳೆ ಅವುಗಳ ಕೇಂದ್ರಬಿಂದುಗಳ ನಡುವಿನ ಅಂತರವು $r_2 - r_1$ ಆಗಿದ್ದರೆ, ಎರಡು ವೃತ್ತಗಳಿಗೆ ಎಷ್ಟು ಸಾಮಾನ್ಯ ಸ್ಪರ್ಶಕಗಳನ್ನು ಎಳೆಯಬಹುದಾಗಿದೆ?

- A. 1 ✓
- B. 0
- C. 3
- D. 2

**Q5** Cost with Overhead Expenses

ಅರವಿಂದ್ ಅವರು ಒಂದು ವಸ್ತುವನ್ನು ₹x ಗೆ ಖರೀದಿಸಿದರು. ಅದನ್ನು ಬಿರು ಅವರಿಗೆ 11% ನಷ್ಟಕ್ಕೆ ಮಾರಾಟ ಮಾಡಿದರು. ಬಿರು ಅವರು ಅದರ ಸಾಗಣೆಗೆ ₹180 ಖರ್ಚು ಮಾಡಿದರು ಮತ್ತು ಅದನ್ನು ಮಿನು ಅವರಿಗೆ 60% ಲಾಭಕ್ಕೆ ಮಾರಾಟ ಮಾಡಿದರು. ಮಿನು ಅವರು ಅದನ್ನು ₹1,000 ಕ್ಕೆ ಖರೀದಿಸಿದರೆ, x ನ ಮೌಲ್ಯ ಎಷ್ಟು?

- A. 503
- B. 500 ✓
- C. 494
- D. 452

**Q6** Find SI

ವಾರ್ಷಿಕ 4% ಬಡ್ಡಿದರದಲ್ಲಿ ₹550 ಮೊತ್ತವನ್ನು 2.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 155
- B. 55 ✓
- C. 35
- D. 105

Blackbook Vocabulary — Now in the App! ▶ Download Now on Google Play

**Q7** Finding Ratio

A, B, ಮತ್ತು C ಎಂಬ ಮೂರು ವಿಧದ ಹಾಲು ಕ್ರಮವಾಗಿ 12%, 18%, ಮತ್ತು 24% ಸಾಂದ್ರತೆಯನ್ನು ಹೊಂದಿದೆ. ಒಂದುವೇಳೆ ಅವುಗಳನ್ನು 2 : 4 : p ರ ಅನುಪಾತದಲ್ಲಿ ಬೆರೆಸಿ 20% ಸಾಂದ್ರತೆಯೊಂದಿಗೆ ಮಿಶ್ರಣವನ್ನು ತಯಾರಿಸಿದರೆ, p ನ ಮೌಲ್ಯ ಎಷ್ಟು?

- A. 6 ✓
- B. 3
- C. 4
- D. 2

**Q8** Laws of Indices

ಒಂದು ವೇಳೆ $140^{0.86}$ = x, $140^{0.74}$ = y ಮತ್ತು $x^z = y^7$ ಆಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

- A. 5.94
- B. 8.01
- C. 6.02 ✓
- D. 4.38

**Q9** Linear Race

1 km ಓಟದಲ್ಲಿ, A ಎಂಬುವವ 50 ಮೀಟರ್ ಅಂತರದಲ್ಲಿ B ಎಂಬುವವನನ್ನು ಸೋಲಿಸುತ್ತಾನೆ. 800 ಮೀಟರ್ ಓಟದಲ್ಲಿ, B ಎನ್ನುವವ 40 ಮೀಟರ್ ಅಂತರದಲ್ಲಿ C ಯನ್ನು ಸೋಲಿಸುತ್ತಾನೆ. 200 ಮೀಟರ್ ಓಟದಲ್ಲಿ, A ಯು ಎಷ್ಟು ಅಂತರದಲ್ಲಿ (ಮೀಟರ್ ಗಳಲ್ಲಿ) C ಯನ್ನು ಸೋಲಿಸುತ್ತಾನೆ?

- A. 25
- B. 18
- C. 19.5 ✓
- D. 22.5

**Q10** Mean Proportional

ಒಂದುವೇಳೆ (2x + 5), (3x + 7) ಮತ್ತು (4x + 9) ಗಳು ಮುಂದುವರಿದ ಸಮಾನುಪಾತದಲ್ಲಿದ್ದರೆ, x ನ ಮೌಲ್ಯಗಳನ್ನು ಕಂಡುಹಿಡಿಯಿರಿ.

- A. x = 3, -3
- B. x = -2, -2 ✓
- C. x = 2, -2
- D. x = 2 , 2

**Q11** Melting & Recasting

6 cm ತ್ರಿಜ್ಯವನ್ನು ಹೊಂದಿರುವ ಒಂದು ಘನರೂಪದ ಲೋಹದ ಗೋಳವನ್ನು ಕರಗಿಸಲಾಗುತ್ತದೆ ಮತ್ತು 3 cm ತ್ರಿಜ್ಯವಿರುವ ಮತ್ತು 4 cm ಎತ್ತರವಿರುವ ಸಣ್ಣ ಘನರೂಪದ ಶಂಕುಗಳಾಗಿ ಮರುರೂಪಿಸಲಾಗುತ್ತದೆ. ಹಾಗಾದರೆ ಎಷ್ಟು ಸಂಪೂರ್ಣ ಶಂಕುಗಳನ್ನು ರೂಪಿಸಬಹುದು?

- A. 30
- B. 18
- C. 36
- D. 24 ✓

**Q12** Mode

ಸಾಧಾರಣ ಅಸಮ್ಮಿತಿಯ (moderately skewed) ವಿತರಣೆಯ ಮಧ್ಯಾಂಕ 32 ಮತ್ತು ಸರಾಸರಿ 30 ಆಗಿದೆ. ದತ್ತಾಂಶದ ರೂಢಿಬೆಲೆಯನ್ನು ಕಂಡುಹಿಡಿಯಿರಿ.

- A. 40
- B. 36 ✓
- C. 35
- D. 32

**Q13** Percentage Increase/Decrease

ರಾಮನ್ ಅವರ ಆದಾಯ ₹49,000 ಆಗಿದೆ. ಅವರು ತಮ್ಮ ಆದಾಯದ 27.5% ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಆದಾಯವು 34% ಹೆಚ್ಚಾದರೆ ಮತ್ತು ಖರ್ಚು 20% ಹೆಚ್ಚಾದರೆ, ನಂತರ ಅವರ ಉಳಿತಾಯವು _____ ಆಗುತ್ತದೆ.

- A. ₹9,550 ಇಳಿಕೆ
- B. ₹9,559 ಹೆಚ್ಚಳ
- C. ₹9,556 ಇಳಿಕೆ
- D. ₹9,555 ಹೆಚ್ಚಳ ✓

**Q14** Prime & Composite Numbers

ಮೂರು ಅವಿಭಾಜ್ಯ ಸಂಖ್ಯೆಗಳ ಮೊತ್ತವು 112 ಆಗಿದೆ. ಒಂದು ಸಂಖ್ಯೆಯು ಇನ್ನೊಂದು ಸಂಖ್ಯೆಗಿಂತ 36 ರಷ್ಟು ಹೆಚ್ಚು ಇದ್ದರೆ ಈ ಸಂಖ್ಯೆಗಳ ಗುಣಲಬ್ಧ ಎಷ್ಟು?

- A. 4826
- B. 5402 ✓
- C. 4516
- D. 5678

Blackbook Vocabulary — Now in the App! ► Download Now on Google Play

**Q15** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 85% ಮತ್ತು 27% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 78% ಮತ್ತು 19% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 24% ಮತ್ತು 27% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 24%, 94% ಮತ್ತು 74% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- A. III
- B. IV ✓
- C. I
- D. II

**Q16** Total Surface Area

ಸಿಲಿಂಡರ್‌ನ ಪಾದದ ತ್ರಿಜ್ಯ ಮತ್ತು ಎತ್ತರದ ಮೊತ್ತ 48 cm ಆಗಿದೆ. ಸಿಲಿಂಡರ್‌ನ ವಕ್ರ ಮೇಲ್ಮೈ ವಿಸ್ತೀರ್ಣ ಮತ್ತು ಒಟ್ಟು ಮೇಲ್ಮೈ ವಿಸ್ತೀರ್ಣದ ನಡುವಿನ ಅನುಪಾತವು 5:8 ಆಗಿದ್ದರೆ, ಸಿಲಿಂಡರ್‌ನ ಒಟ್ಟು ಮೇಲ್ಮೈ ವಿಸ್ತೀರ್ಣ ಮತ್ತು ವಕ್ರ ಮೇಲ್ಮೈ ವಿಸ್ತೀರ್ಣದ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ. (π = 3.14 ಬಳಸಿ)

- A. 2,034.72 cm2 ✓
- B. 2,108.38 cm2
- C. 2,186.59 cm2
- D. 2,058.63 cm2

**Q17** Two Persons Age Relation

ಅನಿಲ್ ಮತ್ತು ರೋಹಿತ್ ಅವರ ಪ್ರಸ್ತುತ ವಯಸ್ಸುಗಳ ನಡುವಿನ ಅನುಪಾತವು 7 : 9 ಆಗಿದೆ. 8 ವರ್ಷಗಳ ನಂತರ, ಈ ಅನುಪಾತವು 9 : 11 ಆಗುತ್ತದೆ. ಹಾಗಾದರೆ ಅನಿಲ್ ಅವರ ಪ್ರಸ್ತುತ ವಯಸ್ಸು ಎಷ್ಟು?

- A. 28 ✓
- B. 35
- C. 42
- D. 21

**Q18** Two Successive Changes

ಒಂದು ಸಂಖ್ಯೆಯನ್ನು ಮೊದಲು 20% ಹೆಚ್ಚಿಸಲಾಯಿತು ಮತ್ತು ನಂತರ 12% ಕಡಿಮೆ ಮಾಡಲಾಯಿತು. ಈ ಸಂಖ್ಯೆಯಲ್ಲಿ ನಿವ್ವಳ ಶೇಕಡಾವಾರು ಹೆಚ್ಚಳ ಅಥವಾ ಇಳಿಕೆಯನ್ನು ಕಂಡುಹಿಡಿಯಿರಿ.

- A. 5.2% ಹೆಚ್ಚಳ
- B. 5.6% ಹೆಚ್ಚಳ ✓
- C. 4.8% ಇಳಿಕೆ
- D. 4.3% ಇಳಿಕೆ

**Q19** Two Trains Crossing

150 m ಉದ್ದದ ಒಂದು ರೈಲು 72 km/hr ವೇಗದಲ್ಲಿ ಚಲಿಸುತ್ತಾ, ಈ ರೈಲಿಗಿಂತ ಮೂರು ಪಟ್ಟು ವೇಗವಾಗಿ ಮತ್ತು ಸಮಾನಾಂತರ ಮಾರ್ಗದಲ್ಲಿ ಅದೇ ದಿಕ್ಕಿನಲ್ಲಿ ಚಲಿಸುತ್ತಿರುವ ಮತ್ತೊಂದು ರೈಲನ್ನು 10 ಸೆಕೆಂಡುಗಳಲ್ಲಿ ದಾಟುತ್ತದೆ. ಹಾಗಾದರೆ ಎರಡನೇ ರೈಲಿನ ಉದ್ದವನ್ನು (m ಗಳಲ್ಲಿ) ಕಂಡುಹಿಡಿಯಿರಿ.

- A. 300
- B. 280
- C. 250 ✓
- D. 320

**Q20** a^3 + b^3, a^3 - b^3

ಒಂದು ವೇಳೆ a + b = 9 ಮತ್ತು ab = 13 ಆಗಿದ್ದರೆ, $a^3 + b^3$ ನ ಮೌಲ್ಯವು:

- A. 328
- B. 348
- C. 398
- D. 378 ✓

Blackbook Vocabulary — Now in the App! ► Download Now on Google Play

**Q21** Comparative Analysis

ನೀಡಿರುವ ಸ್ತಂಭ ನಕಾಶೆಯು ಮೂರು ತಿಂಗಳ ಅವಧಿಯಲ್ಲಿ (ಜನವರಿಯಿಂದ ಮಾರ್ಚ್ ವರೆಗೆ) ಐದು ಕುಟುಂಬಗಳ (ಕುಟುಂಬ A, B, C, D, E) ವಿದ್ಯುತ್ ಬಳಕೆಯನ್ನು (kWh ನಲ್ಲಿ) ತೋರಿಸುತ್ತದೆ.
(Family: ಕುಟುಂಬ; January: ಜನವರಿ; February: ಫೆಬ್ರುವರಿ; March: ಮಾರ್ಚ್; Electricity Consumption: ವಿದ್ಯುತ್ ಬಳಕೆ)




ಮೂರು ತಿಂಗಳ ಅವಧಿಯಲ್ಲಿ ಯಾವ ಕುಟುಂಬವು ಅತಿ ಹೆಚ್ಚು ವಿದ್ಯುತ್ ಬಳಕೆಯನ್ನು ಮಾಡಿದೆ ಮತ್ತು ಅತ್ಯಂತ ಕಡಿಮೆ ಬಳಕೆ ಹೊಂದಿರುವ ಕುಟುಂಬಕ್ಕೆ ಹೋಲಿಸಿದರೆ ಆ ಕುಟುಂಬವು ಎಷ್ಟು ಹೆಚ್ಚು (kWh ಗಳಲ್ಲಿ) ಬಳಸಿದೆ?

A. B, ಮತ್ತು 145 ✓

B. C, ಮತ್ತು 142

C. E, ಮತ್ತು 146

D. A, ಮತ್ತು 145

**Q22** Laws of Indices

$(2^3)^4 \div 2^5$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. $2^2$

B. $2^{12}$

C. $2^5$

D. $2^7$ ✓

**Q23** Mean of Grouped Data

ಕೆಳಗಿನ ದತ್ತಾಂಶದ ಸರಾಸರಿಯು 47 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 10-20 | 20-30 | 30-40 | 40-50 | 50-60 |
|---|---|---|---|---|---|
| ಆವರ್ತನ | 36 | 18 | 29 | 20 | x |

A. 227

B. 270

C. 242 ✓

D. 243

Blackbook Vocabulary — Now in the App! ▶ Download Now on Google Play

**Q24** Two Triangle Problems

ಸಮುದ್ರ ಮಟ್ಟದಿಂದ 249 ಮೀಟರ್ ಎತ್ತರದ ಬಂಡೆಯ ಮೇಲಿರುವ ವೀಕ್ಷಕರೊಬ್ಬರು, ಎರಡು ಹಡಗುಗಳನ್ನು ಗಮನಿಸುತ್ತಿದ್ದಾರೆ. ಆ ಹಡಗುಗಳ ಅವನತ ಕೋನಗಳು ಕ್ರಮವಾಗಿ 30° ಮತ್ತು 60° ಆಗಿವೆ. ಎರಡೂ ಹಡಗುಗಳು ಬಂಡೆಯ ವಿರುದ್ಧ ದಿಕ್ಕುಗಳಲ್ಲಿದ್ದರೆ ಆ ಹಡಗುಗಳ ನಡುವಿನ ದೂರ (ಮೀಟರ್‌ಗಳಲ್ಲಿ) ಎಷ್ಟು?

A. $249\sqrt{3}$

B. $249\sqrt{2}$

C. $332\sqrt{3}$ ✓

D. $332\sqrt{2}$

**Q25** sec^2 - tan^2 = 1

ಈ ಕೆಳಗಿನ ನಿತ್ಯ ಸಮೀಕರಣಗಳಲ್ಲಿ ಯಾವುದು ಸರಿ?

A. $\sec^2\theta + \tan^2\theta = 1$

B. $\sec^2\theta - \tan^2\theta = 1$ ✓

C. $\sin^2\theta - \cos^2\theta = 1$

D. $\text{cosec}^2\theta + \cot^2\theta = 1$

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** AA, SAS, SSS Similarity

ರಘು ಅವರು 140 cm ಎತ್ತರವನ್ನು ಹೊಂದಿದ್ದಾನೆ. ಅವರು ಒಂದು ಬೀದಿದೀಪದ ಕಂಬದಿಂದ 180 cm ದೂರದಲ್ಲಿ ನಿಂತಿದ್ದಾರೆ. ದೀಪದಿಂದ ಅವರ ನೆರಳು 70 cm ಉದ್ದವಾಗಿದೆ. ಹಾಗಾದರೆ ಬೀದಿದೀಪದ ಕಂಬದ ಎತ್ತರವನ್ನು ಕಂಡುಹಿಡಿಯಿರಿ.

A. 350 cm
B. 250 cm
C. 500 cm ✓
D. 300 cm

**Q2** Age in Ratio Form

ಇಬ್ಬರು ಸಹೋದರರ ಪ್ರಸ್ತುತ ವಯಸ್ಸುಗಳ ನಡುವಿನ ಅನುಪಾತವು 3: 5 ಆಗಿದೆ. ಇಂದಿನಿಂದ 12 ವರ್ಷಗಳ ನಂತರ, ಅವರ ವಯಸ್ಸುಗಳ ನಡುವಿನ ಅನುಪಾತವು 9: 11 ಆಗಿರುತ್ತದೆ. ಹಾಗಾದರೆ ಕಿರಿಯ ಸಹೋದರನ ಪ್ರಸ್ತುತ ವಯಸ್ಸು ಎಷ್ಟು?

A. 12 ವರ್ಷಗಳು
B. 10 ವರ್ಷಗಳು
C. 18 ವರ್ಷಗಳು
D. 6 ವರ್ಷಗಳು ✓

**Q3** Area/Volume Error

ಒಂದು ಸಿಲಿಂಡರ್‌ನ ಎತ್ತರ ಮತ್ತು ಪಾದದ ತ್ರಿಜ್ಯಗಳನ್ನು ಕ್ರಮವಾಗಿ 10% ಮತ್ತು 5% ರಷ್ಟು ಹೆಚ್ಚಿಸಿದರೆ, ಸಿಲಿಂಡರ್‌ನ ಘನಫಲದಲ್ಲಿ ಶೇಕಡಾವಾರು ಎಷ್ಟು ಹೆಚ್ಚಳ ಉಂಟಾಗುತ್ತದೆ? (1 ದಶಮಾಂಶ ಸ್ಥಾನದ ಪೂರ್ಣಾಂಕಕ್ಕೆ ತನ್ನಿ)

A. 20.3 %
B. 22.2 %
C. 24.2 %
D. 21.3 % ✓

**Q4** Average Speed

ಒಂದು ಕಾರು 30 ನಿಮಿಷಗಳ ಕಾಲ 40 km/hr ನಷ್ಟು ಸ್ಥಿರವಾದ ವೇಗದಲ್ಲಿ ಚಲಿಸುತ್ತದೆ, ನಂತರ ಮುಂದಿನ 40 ನಿಮಿಷಗಳ ಕಾಲ 60 km/h ನಷ್ಟು ಸ್ಥಿರವಾದ ವೇಗದಲ್ಲಿ ಚಲಿಸುತ್ತದೆ. ಹಾಗಾದರೆ ಇಡೀ ಪ್ರಯಾಣದಲ್ಲಿ ಕಾರಿನ ಸರಾಸರಿ ವೇಗ (km/hr ನಲ್ಲಿ) ಎಷ್ಟು? (ಉತ್ತರವನ್ನು ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ತರಲಾಗಿದೆ)

A. 51.43 ✓
B. 54.67
C. 53.72
D. 50.34

**Q5** CP-SP Relation

ಒಂದು ಲ್ಯಾಪ್‌ಟಾಪ್ ಅನ್ನು 10% ನಷ್ಟಕ್ಕೆ ಮತ್ತು ಡೆಸ್ಕ್‌ಟಾಪ್ ಅನ್ನು 15% ಲಾಭಕ್ಕೆ ಮಾರಾಟ ಮಾಡುವುದರಿಂದ, ರೀಟಾ ಅವರು ಒಟ್ಟು ₹8,000 ಗಳಿಸುತ್ತಾರೆ. ಒಂದು ವೇಳೆ ಲ್ಯಾಪ್‌ಟಾಪ್ ಅನ್ನು10% ಲಾಭಕ್ಕೆ ಮತ್ತು ಡೆಸ್ಕ್‌ಟಾಪ್ ಅನ್ನು 20% ಲಾಭಕ್ಕೆ ಮಾರಾಟ ಮಾಡಿದರೆ, ಅವರು ಒಟ್ಟು ₹20,000 ಗಳಿಸುತ್ತಾರೆ. ಹಾಗಾದರೆ ಲ್ಯಾಪ್‌ಟಾಪ್‌ನ ಅಸಲು ಬೆಲೆಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 40,000 ✓
B. 60,000
C. 80,000
D. 36,000

**Q6** Even/Odd Number Series

4 ಅನುಕ್ರಮ ಬೆಸ ಸಂಖ್ಯೆಗಳ ಸರಾಸರಿಯು 36 ಆಗಿದೆ. ಅವುಗಳಲ್ಲಿ ಅತಿದೊಡ್ಡ ಮತ್ತು ಅತಿ ಸಣ್ಣ ಸಂಖ್ಯೆಗಳ ಮೊತ್ತ ಎಷ್ಟು?

A. 72 ✓
B. 68
C. 66
D. 74

**Q7** Find SI

ವಾರ್ಷಿಕ 29% ದರದಲ್ಲಿ ₹500 ಮೊತ್ತವನ್ನು 3.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 450
B. 350 ✓
C. 330
D. 400

Blackbook Vocabulary — Now in the App! ▶ Download Now on Google Play

**Q8** Given Three Vertices

A(3,2), B(11,6), ಮತ್ತು C(7,14) ಶೃಂಗಬಿಂದುಗಳನ್ನು ಹೊಂದಿರುವ ಒಂದು ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. 36 ಮೂಲಮಾನ2

B. 32 ಮೂಲಮಾನ2

C. 42 ಮೂಲಮಾನ2

D. 40 ಮೂಲಮಾನ2 ✓

**Q9** Half-Yearly Compounding

ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಒಂದು ಬ್ಯಾಂಕ್ ವಾರ್ಷಿಕ 4.5 % ಚಕ್ರಬಡ್ಡಿಯನ್ನು ನೀಡುತ್ತದೆ. ಒಬ್ಬ ಗ್ರಾಹಕನು ಒಂದು ವರ್ಷದ ಜನವರಿ 1 ಮತ್ತು ಜುಲೈ 1 ರಂದು ತಲಾ ₹8,138 ಠೇವಣಿ ಇಡುತ್ತಾನೆ. ವರ್ಷದ ಕೊನೆಯಲ್ಲಿ ಆಗುವ ಬಡ್ಡಿಯನ್ನು ಕಂಡು ಹಿಡಿಯಿರಿ. (ಎರಡು ದಶಮಾಂಶ ಸ್ಥಾನಗಳಿಗೆ ಸರಿದೂಗಿಸಿ)

A. ₹540.05

B. ₹538.12

C. ₹553.43 ✓

D. ₹562.53

**Q10** Median

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆಯು ಕ್ರಮವಾಗಿ 62.4 ಮತ್ತು 36.8 ಆಗಿವೆ. ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ. (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

A. 53.9 ✓

B. 55.5

C. 55.8

D. 54.2

**Q11** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 3 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 9 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 18 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ಅರ್ಧದಷ್ಟು ತುಂಬಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತವೆ?

A. 3

B. 2

C. 1 ✓

D. 4

**Q12** Percentage Increase/Decrease

ರಾಮನ್ ಅವರ ಆದಾಯವು ₹70,900 ಆಗಿದೆ. ಅವರು ತಮ್ಮ ಆದಾಯದ 12% ಅನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಆದಾಯವು 39% ಹೆಚ್ಚಾದರೆ ಮತ್ತು ಖರ್ಚು 50% ಹೆಚ್ಚಾದರೆ, ಅವರ ಉಳಿತಾಯವು:

A. ₹3,550 ಕಡಿಮೆಯಾಗಲಿದೆ

B. ₹3,546 ಹೆಚ್ಚಾಗಲಿದೆ

C. ₹3,545 ಕಡಿಮೆಯಾಗಲಿದೆ ✓

D. ₹3,548 ಹೆಚ್ಚಾಗಲಿದೆ

**Q13** Population Based Problems

ಒಂದು ಪಟ್ಟಣದ ಜನಸಂಖ್ಯೆಯು ಪ್ರತಿ ವರ್ಷ 25% ನಷ್ಟು ಹೆಚ್ಚಾಗುತ್ತದೆ. ಒಂದುವೇಳೆ ಈಗಿನ ಜನಸಂಖ್ಯೆಯು 16,000 ಆಗಿದ್ದರೆ, 3 ವರ್ಷಗಳ ನಂತರದ ಜನಸಂಖ್ಯೆ ಎಷ್ಟಾಗಿರುತ್ತದೆ?

A. 32,000

B. 28,800

C. 30,250

D. 31,250 ✓

**Q14** Relative Speed

ಎರಡು ರೈಲುಗಳು A ಮತ್ತು B ಎಂಬ ಎರಡು ನಿಲ್ದಾಣಗಳಿಂದ ಕ್ರಮವಾಗಿ 70 km/h ಮತ್ತು 80 km/h ವೇಗಗಳಲ್ಲಿ ಪರಸ್ಪರ ಹತ್ತಿರಕ್ಕೆ ಚಲಿಸುತ್ತಾ ಬರುತ್ತಿವೆ. ಅವೆರಡು ಪರಸ್ಪರ ಭೇಟಿಯಾದಾಗ, ಎರಡನೇ ರೈಲು ಮೊದಲ ರೈಲಿಗಿಂತ 150 km ಹೆಚ್ಚು ಕ್ರಮಿಸಿರುವುದು ಗಮನಕ್ಕೆ ಬರುತ್ತದೆ. ಹಾಗಾದರೆ ಎರಡು ನಿಲ್ದಾಣಗಳ ನಡುವಿನ ಅಂತರ ಎಷ್ಟು?

A. 2250 km ✓

B. 2230 km

C. 2260 km

D. 2240 km

**Q15** Rules for 2,3,4,5,6

717A0280 ಎಂಬ ಸಂಖ್ಯೆಯನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

A. 2 ✓

B. 5

C. 8

D. 1

Blackbook Vocabulary — Now in the App! ▶ Download Now on Google Play

**Q16** Rules for 2,3,4,5,6

7-ಅಂಕಿಯ ಸಂಖ್ಯೆಯಾದ 45A216B ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

A. 2

B. 5

C. 0 ✓

D. 3

**Q17** Rules for 7,8,9,11

ಈ ಕೆಳಗಿನವುಗಳಲ್ಲಿ ಯಾವ ಸಂಖ್ಯೆಯು 9 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ?

A. 5,328 ✓

B. 4,317

C. 3,624

D. 6,018

**Q18** Simple Ratio Partnership

A ಮತ್ತು B ಜಂಟಿಯಾಗಿ ವ್ಯವಹಾರವನ್ನು ಪ್ರಾರಂಭಿಸುತ್ತಾರೆ. A ಅವರ ಹೂಡಿಕೆಯು B ಅವರ ಹೂಡಿಕೆಯ ಮೂರು ಪಟ್ಟು ಇದೆ. ವಾರ್ಷಿಕ ಲಾಭ ₹5,524 ಆಗಿದ್ದರೆ, A ಅವರ ಪಾಲನ್ನು ಕಂಡುಹಿಡಿಯಿರಿ.

A. ₹4,143 ✓

B. ₹4,113

C. ₹4,133

D. ₹4,123

**Q19** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಕುಕ್ಕರ್‌ನ ನಮೂದಿತ ಬೆಲೆ ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 54% ಮತ್ತು 61% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿ 17% ಮತ್ತು 49% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿ 25% ಮತ್ತು 36% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 95%, 20% ಮತ್ತು 68% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. IV ✓

B. III

C. II

D. I

**Q20** Two Persons Age Relation

ಒಬ್ಬ ವ್ಯಕ್ತಿಯು ತನ್ನ ಮಗನಿಗಿಂತ 24 ವರ್ಷ ದೊಡ್ಡವನಾಗಿದ್ದಾನೆ. ಇಂದಿನಿಂದ ಎರಡು ವರ್ಷಗಳ ನಂತರ, ಅವನ ವಯಸ್ಸು ಮಗನ ವಯಸ್ಸಿನ ಎರಡು ಪಟ್ಟು ಆಗುತ್ತದೆ. ಹಾಗಾದರೆ ಮಗನ ಪ್ರಸ್ತುತ ವಯಸ್ಸು ಎಷ್ಟು?

A. 25 ವರ್ಷಗಳು

B. 22 ವರ್ಷಗಳು ✓

C. 26 ವರ್ಷಗಳು

D. 21 ವರ್ಷಗಳು

**Q21** Weighted Average

ಒಂದು ವಿಷಯದಲ್ಲಿ 350 ವಿದ್ಯಾರ್ಥಿಗಳು ಗಳಿಸಿದ ಸರಾಸರಿ ಅಂಕಗಳು 75 ಆಗಿವೆ. ಅಗ್ರ 100 ವಿದ್ಯಾರ್ಥಿಗಳ ಸರಾಸರಿ 85 ಮತ್ತು ಕೊನೆಯ 100 ವಿದ್ಯಾರ್ಥಿಗಳ ಸರಾಸರಿ 65 ಎಂದು ಕಂಡುಬಂದಿದೆ. ಹಾಗಾದರೆ ಉಳಿದ 150 ವಿದ್ಯಾರ್ಥಿಗಳ ಸರಾಸರಿ ಅಂಕಗಳು ಎಷ್ಟು?

A. 75 ✓

B. 65

C. 85

D. 55

**Q22** Finding Value from Percentage

ಒಬ್ಬ ವ್ಯಕ್ತಿಯು ಪ್ರತಿ ತಿಂಗಳಿಗೆ ₹3654 ಮೊತ್ತವನ್ನು ಖರ್ಚು ಮಾಡುತ್ತಾನೆ. ಮತ್ತು ತನ್ನ ಆದಾಯದ $12\frac{1}{2}\%$ ಭಾಗವನ್ನು ಉಳಿತಾಯ ಮಾಡುತ್ತಾನೆ. ಹಾಗಾದರೆ ಅವನ ಮಾಸಿಕ ಆದಾಯ ಎಷ್ಟು?

A. ₹4176 ✓

B. ₹4196

C. ₹4186

D. ₹4166

Blackbook Vocabulary — Now in the App! ▶ Download Now on Google Play

**Q23** Pythagorean Identities

ಇದನ್ನು ಸರಳೀಕರಿಸಿ: $\frac{\cot A + \operatorname{cosec} A - 1}{\cot A + 1 - \operatorname{cosec} A} - \frac{1}{\sin A} - \cot A$

A. $\sec A$

B. $1$

C. $\sin A$

D. $0$ ✓

**Q24** Pythagorean Identities

ಒಂದು ವೇಳೆ $\cos A = \frac{5}{13}$ ಆಗಿದ್ದು A ಒಂದು ಲಘುಕೋನ ಆಗಿದ್ದರೆ, $\frac{\sin A}{\cos A}$ ಯ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{12}{13}$

B. $\frac{5}{12}$

C. $\frac{13}{5}$

D. $\frac{12}{5}$ ✓

Blackbook Vocabulary — Now in the App! ▶ Download Now on Google Play

**Q25** Simple Bar Chart

ಕೆಳಗಿನ ಸ್ತಂಭ ನಕ್ಷೆಯು ಆರು ವಿಭಿನ್ನ ವರ್ಷಗಳಲ್ಲಿ ಮೂರು ವಿಭಿನ್ನ ಪಡೆಗಳಲ್ಲಿ ನೇಮಕಗೊಂಡ ಸೈನಿಕರ ಸಂಖ್ಯೆಯನ್ನು (ಸಾವಿರಗಳಲ್ಲಿ) ತೋರಿಸುತ್ತದೆ. ಕೆಳಗಿನ ಪ್ರಶ್ನೆಗೆ ಉತ್ತರಿಸಲು ಕೆಳಗಿನ ನಕ್ಷೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ.
ಹಿಂದಿನ ವರ್ಷಕ್ಕೆ ಹೋಲಿಸಿದರೆ 2022 ರಲ್ಲಿ ವಾಯುಪಡೆಯಲ್ಲಿ (Airforce) ನೇಮಕಗೊಂಡ ಸೈನಿಕರ ಸಂಖ್ಯೆಯಲ್ಲಿ ಆಗಿರುವ ಶೇಕಡಾವಾರು ಹೆಚ್ಚಳ ಎಷ್ಟು?
(Navy= ನೌಕಾ ಪಡೆ Army=ಭೂ ಸೇನಾ ಪಡೆ)




A. $31\frac{1}{3}\%$

B. $32\frac{1}{3}\%$

C. $33\frac{1}{3}\%$ ✓

D. $30\frac{1}{3}\%$

Blackbook Vocabulary — Now in the App! ► Download Now on Google Play
generated by rank.qmaths.in

## Mathematics

25 Questions • Answer Key

**Q1** 3-Year Difference

ಒಬ್ಬ ವ್ಯಕ್ತಿಯು ಒಂದು ಮೊತ್ತದ ಮೇಲೆ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ 5% ಬಡ್ಡಿ ದರದಂತೆ ಮೂರು ವರ್ಷಗಳ ಅವಧಿಗೆ ಬರುವ ಚಕ್ರಬಡ್ಡಿಯು, ಸರಳ ಬಡ್ಡಿಯಿಂದ ಬರುವ ಮೊತ್ತಕ್ಕಿಂತ ₹61 ಹೆಚ್ಚಾಗಿದೆ ಎಂದು ಕಂಡುಕೊಳ್ಳುತ್ತಾನೆ. ಹಾಗಾದರೆ ಆ ಅಸಲು ಮೊತ್ತ ಎಷ್ಟು?

A. ₹9,400
B. ₹8,200
C. ₹7,890
D. ₹8,000 ✓

**Q2** AA, SAS, SSS Similarity

ತ್ರಿಭುಜ ABC ಯಲ್ಲಿ, ∠A = 30°, ∠B = 60° ಮತ್ತು ∠C = 90° ಆಗಿದೆ. ತ್ರಿಭುಜ DEF ನಲ್ಲಿ, ∠D = 30°, ∠E = 60° ಮತ್ತು ∠F = 90° ಆಗಿದೆ. ಒಂದು ವೇಳೆ AB:DE = 2:3 ಆಗಿದ್ದರೆ, ಎರಡು ತ್ರಿಭುಜಗಳ ವಿಸ್ತೀರ್ಣಗಳ ನಡುವಿನ ಅನುಪಾತ ಎಷ್ಟು?

A. 3:5
B. 1:2
C. 2:1
D. 4:9 ✓

**Q3** Annual Compounding

ಕ್ರಿಶ್ ಬಳಿ ₹1681 ಇದೆ. ಅದನ್ನು ತನ್ನ ಮಕ್ಕಳಾದ ವೀರ್ ಮತ್ತು ನಿತಿನ್ ನಡುವೆ ಹಂಚಿಕೊಂಡು, ವಾರ್ಷಿಕವಾಗಿ ಚಕ್ರಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, 5% ಚಕ್ರಬಡ್ಡಿ ದರದಲ್ಲಿ ಹೂಡಿಕೆ ಮಾಡಲು ಹೇಳಿದನು. 12 ಮತ್ತು 13 ವರ್ಷಗಳ ನಂತರ ವೀರ್ ಮತ್ತು ನಿತಿನ್ ಕ್ರಮವಾಗಿ ಒಂದೇ ಮೊತ್ತವನ್ನು ಪಡೆದರು. ಹಾಗಾದರೆ ಕ್ರಿಶ್ ಅವರು ವೀರ್‌ಗೆ ಎಷ್ಟು (₹ ಗಳಲ್ಲಿ) ಹಣ ನೀಡಿದರು?

A. 711
B. 820
C. 920
D. 861 ✓

**Q4** Average Speed

ರಮೇಶ್ ಅವರು ಮೊದಲ 2 ಗಂಟೆಗಳಲ್ಲಿ ಪ್ರತಿ ಗಂಟೆಗೆ 60 km ವೇಗದಲ್ಲಿ ಪ್ರಯಾಣಿಸುತ್ತಾರೆ. ಮುಂದಿನ ಎರಡು ಗಂಟೆಗಳಲ್ಲಿ, ಅವರು ಪ್ರತಿ ಗಂಟೆಗೆ 50 km ವೇಗದಲ್ಲಿ ಪ್ರಯಾಣಿಸುತ್ತಾರೆ. ಹಾಗಾದರೆ ಅವರ ಸಂಪೂರ್ಣ ಪ್ರಯಾಣದ ಸರಾಸರಿ ವೇಗವನ್ನು (ಪ್ರತಿ ಗಂಟೆಗೆ km ಗಳಲ್ಲಿ) ಕಂಡುಹಿಡಿಯಿರಿ.

A. 60
B. 50
C. 65
D. 55 ✓

**Q5** Basic TSD

ಒಂದು ಬಸ್ 60 kmph ಸರಾಸರಿ ವೇಗದಲ್ಲಿ, ಸಮಯಕ್ಕೆ ಸರಿಯಾಗಿ ತನ್ನ ಗಮ್ಯಸ್ಥಾನವನ್ನು ತಲುಪುತ್ತದೆ. ಒಂದುವೇಳೆ ಅದು 55 kmph ಸರಾಸರಿ ವೇಗದಲ್ಲಿ ಚಲಿಸಿದ್ದರೆ, 10 ನಿಮಿಷಗಳಷ್ಟು ತಡವಾಗುತ್ತಿತ್ತು. ಹಾಗಾದರೆ ಪ್ರಯಾಣದ ಒಟ್ಟು ದೂರ ಎಷ್ಟು?

A. 110 km ✓
B. 70 km
C. 100 km
D. 120 km

**Q6** Dividing Quantity in Ratio

ಕೆಲವು ಲಡ್ಡುಗಳನ್ನು A, B, C, ಮತ್ತು D ಎಂಬ ನಾಲ್ಕು ಪೆಟ್ಟಿಗೆಗಳಲ್ಲಿ 5:6:8:3 ಅನುಪಾತದಲ್ಲಿ ಪ್ಯಾಕ್ ಮಾಡಲಾಗುತ್ತದೆ. C ಪೆಟ್ಟಿಗೆಯಲ್ಲಿ A ಗಿಂತ 225 ಹೆಚ್ಚು ಲಡ್ಡುಗಳು ಇದ್ದರೆ, D ಪೆಟ್ಟಿಗೆಯಲ್ಲಿ ಎಷ್ಟು ಲಡ್ಡುಗಳು ಇರುತ್ತವೆ?

A. 375
B. 300
C. 275
D. 225 ✓

Blackbook Vocabulary — Now in the App! ► Download Now on Google Play

**Q7** Family Age Problems

5 ವರ್ಷಗಳ ಹಿಂದೆ, ತಾಯಿಯ ವಯಸ್ಸು ತನ್ನ ಮಗಳ ವಯಸ್ಸಿನ ಮೂರು ಪಟ್ಟಿಗಿಂತ 12 ವರ್ಷಗಳು ಹೆಚ್ಚು ಇತ್ತು. ಇಂದಿನಿಂದ ಎಷ್ಟು ವರ್ಷಗಳ ನಂತರ, ತಾಯಿಯ ವಯಸ್ಸು ತನ್ನ ಮಗಳ ವಯಸ್ಸಿನ ಮೂರು ಪಟ್ಟು ಆಗಿರುತ್ತದೆ?

A. 4 ವರ್ಷಗಳು

B. 1 ವರ್ಷ ✓

C. 2 ವರ್ಷಗಳು

D. 3 ವರ್ಷಗಳು

**Q8** Find Principal

ಪದ್ಮಿನಿ ಎಂಬವರು ವಾರ್ಷಿಕ 10% ಸರಳ ಬಡ್ಡಿದರದಲ್ಲಿ 5 ವರ್ಷಗಳ ಅವಧಿಗೆ ಒಂದು ನಿರ್ದಿಷ್ಟ ಮೊತ್ತವನ್ನು ಸಾಲವಾಗಿ ಪಡೆದರು. ಒಂದು ವೇಳೆ 5 ವರ್ಷಗಳ ನಂತರ ಪಾವತಿಸಬೇಕಾದ ಒಟ್ಟು ಮೊತ್ತವು ₹24,000 ಆಗಿದ್ದರೆ, ಅಸಲು ಮೊತ್ತವನ್ನು ಕಂಡುಹಿಡಿಯಿರಿ.

A. ₹18,000

B. ₹17,400

C. ₹16,000 ✓

D. ₹15,800

**Q9** Order of Operations

ಮೌಲ್ಯಮಾಪನ ಮಾಡಿ: 16 - 5 × 4 + 5

A. -1

B. 3

C. 0

D. 1 ✓

**Q10** Percentage Increase/Decrease

ರಾಮನ್ ಅವರ ಆದಾಯವು ₹10,200 ಆಗಿದೆ. ಅವರು ತಮ್ಮ ಆದಾಯದ 30 % ಅನ್ನು ಉಳಿಸುತ್ತಾರೆ. ಒಂದು ವೇಳೆ ಅವರ ಆದಾಯವು 14 % ರಷ್ಟು ಹೆಚ್ಚಾದರೆ ಮತ್ತು ವೆಚ್ಚವು 40 % ರಷ್ಟು ಹೆಚ್ಚಾದರೆ, ಅವರ ಉಳಿತಾಯವು:

A. ₹1,429 ರಷ್ಟು ಹೆಚ್ಚಳವಾಗಿದೆ

B. ₹1,427 ರಷ್ಟು ಕಡಿಮೆಯಾಗಿದೆ

C. ₹1,430 ರಷ್ಟು ಹೆಚ್ಚಳವಾಗಿದೆ

D. ₹1,428 ರಷ್ಟು ಕಡಿಮೆಯಾಗಿದೆ ✓

**Q11** Profit/Loss Percentage

ಒಬ್ಬ ವ್ಯಾಪಾರಿ ಒಟ್ಟು 6,000 ಬೆಲೆಗೆ ಒಂದೇ ರೀತಿಯ 10 ವಸ್ತುಗಳನ್ನು ಖರೀದಿಸುತ್ತಾನೆ. ಅವನು ಅವುಗಳಲ್ಲಿ 6 ಅನ್ನು 15% ಲಾಭಕ್ಕೆ ಮತ್ತು ಉಳಿದ 4 ಅನ್ನು 10% ನಷ್ಟಕ್ಕೆ ಮಾರಾಟ ಮಾಡುತ್ತಾನೆ. ಒಟ್ಟಾರೆ ಶೇಕಡಾವಾರು ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಿರಿ.

A. 10% ಲಾಭ

B. 5% ನಷ್ಟ

C. 5% ಲಾಭ ✓

D. 10% ನಷ್ಟ

**Q12** Proportion

a, b, c, d ಎಂಬ ನಾಲ್ಕು ಸಂಖ್ಯೆಗಳು ಅನುಪಾತದಲ್ಲಿವೆ. a = 32, b = 72, ಮತ್ತು c = 180 ಆಗಿದ್ದರೆ, d ಯ ಮೌಲ್ಯ ಎಷ್ಟು?

A. 415

B. 410

C. 405 ✓

D. 400

**Q13** Rules for 2,3,4,5,6

39A122B ಎಂಬ 7-ಅಂಕಿಯ ಒಂದು ಸಂಖ್ಯೆಯನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

A. 3

B. 2

C. 6

D. 1 ✓

**Q14** Rules for 7,8,9,11

ಒಂದು ವೇಳೆ 7-ಅಂಕಿಯ ಸಂಖ್ಯೆ 29009A6 ಅನ್ನು 7 ರಿಂದ ನಿಶ್ಶೇಷವಾಗಿ ಭಾಗಿಸಬಹುದಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

A. 9

B. 2 ✓

C. 5

D. 1

Blackbook Vocabulary — Now in the App! ▶ Download Now on Google Play

generated by rank.qmaths.in

**Q15** Single Change

ಒಬ್ಬ ಉದ್ಯೋಗಿಯ ವೇತನವು ₹50,000 ರಿಂದ ₹45,000 ಕ್ಕೆ ಇಳಿಕೆಯಾಗಿತು. ಹಾಗಾದರೆ ವೇತನದಲ್ಲಿ ಉಂಟಾದ ಶೇಕಡಾವಾರು ಇಳಿಕೆಯನ್ನು ಕಂಡುಹಿಡಿಯಿರಿ.

A. 8%

B. 15%

C. 12%

D. 10% ✓

**Q16** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
I ನೇ ಅಂಗಡಿಯು 90% ಮತ್ತು 61% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 15% ಮತ್ತು 98% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 28% ಮತ್ತು 99% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 91%, 37% ಮತ್ತು 95% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. IV ✓

B. I

C. III

D. II

**Q17** Ungrouped Data Mode

ಒಂದು ದಿನದಲ್ಲಿ ಅಂಗಡಿಯಲ್ಲಿ ಮಾರಾಟವಾಗುವ ಚೀಲಗಳ ಗಾತ್ರಗಳನ್ನು ಕೆಳಗೆ ನೀಡಲಾಗಿದೆ:

10, 4, 6, 8, 7, 4, 8, 2, 9, 5, 4, 6, 9

ಈ ದತ್ತಾಂಶದ ರೂಢಿಬೆಲೆ ಕಂಡುಹಿಡಿಯಿರಿ.

A. 2

B. 5

C. 4 ✓

D. 1

**Q18** Weighted Average

ಒಂದು ಸಮೀಕ್ಷೆಯಲ್ಲಿ, 4 ಜನರು ಒಂದು ಉತ್ಪನ್ನಕ್ಕೆ 5 ರೇಟಿಂಗ್ ನೀಡಿದ್ದಾರೆ ಮತ್ತು 6 ಜನರು 3 ರೇಟಿಂಗ್ ನೀಡಿದ್ದಾರೆ. ಹಾಗಾದರೆ ತೂಕಿತ ಸರಾಸರಿ ರೇಟಿಂಗ್ ಎಷ್ಟು?

A. 3.8 ✓

B. 4.2

C. 3.5

D. 4.0

Blackbook Vocabulary — Now in the App! ▶ Download Now on Google Play

**Q19** Degree Based

ಕೆಳಗಿನ ಪೈ ನಕ್ಷೆಯು ಸಂಸ್ಥೆಯೊಂದರಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 4800 ಉದ್ಯೋಗಿಗಳ ಡಿಗ್ರಿ-ವಾರು ಹಂಚಿಕೆಯನ್ನು ತೋರಿಸುತ್ತದೆ ಮತ್ತು ಪುರುಷರ ಮತ್ತು ಮಹಿಳೆಯರ ಸಂಖ್ಯೆಯ ನಡುವಿನ ಅನುಪಾತವು 3:5 ಆಗಿದೆ. ಹಾಗಾದರೆ HR ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪುರುಷರ ಸಂಖ್ಯೆ ಎಷ್ಟು?




(Marketing Department: ಮಾರ್ಕೆಟಿಂಗ್ ವಿಭಾಗ; IT Department: IT ವಿಭಾಗ; HR Department: HR ವಿಭಾಗ; Production Department: ಉತ್ಪಾದನಾ ವಿಭಾಗ; Accounts Department: ಲೆಕ್ಕಪತ್ರ ವಿಭಾಗ)

A. 198

B. 196

C. 180 ✓

D. 194

**Q20** Diagonal of Cube/Cuboid

ಒಂದು ಘನಾಭದ ಅಳತೆಗಳು 1 : 2 : 3 ರ ಅನುಪಾತದಲ್ಲಿವೆ. ಒಂದುವೇಳೆ ಘನಾಭದ ಆಂತರಿಕ ಕರ್ಣದ (space diagonal) ಉದ್ದವು $\sqrt{56}$ cm ಆಗಿದ್ದರೆ, ಘನಾಭದ ಘನಫಲವನ್ನು ಕಂಡುಹಿಡಿಯಿರಿ.

A. 46 $cm^3$

B. 45 $cm^3$

C. 84 $cm^3$

D. 48 $cm^3$ ✓

**Q21** Leaving Midway

A ಅವರೊಬ್ಬರೇ ಒಂದು ಕೆಲಸವನ್ನು 10 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು, ಮತ್ತು B ಅವರೊಬ್ಬರೇ ಅದೇ ಕೆಲಸವನ್ನು 30 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಅವರು 6 ದಿನಗಳ ಕಾಲ ಒಟ್ಟಿಗೆ ಕೆಲಸ ಮಾಡುತ್ತಾರೆ. ನಂತರ A ಅವರು ಕೆಲಸ ಬಿಟ್ಟು ಹೋಗುತ್ತಾರೆ, ಮತ್ತು B ಅವರು ಇನ್ನೂ 4 ದಿನಗಳ ಕಾಲ ಒಬ್ಬರೇ ಕೆಲಸ ಮುಂದುವರಿಸುತ್ತಾರೆ. ಹಾಗಾದರೆ ಎಷ್ಟು ಭಾಗ ಕೆಲಸವು ಇನ್ನೂ ಬಾಕಿ ಉಳಿದಿದೆ?

A. $\frac{1}{5}$

B. $\frac{1}{15}$ ✓

C. $\frac{2}{15}$

D. $\frac{1}{10}$

Blackbook Vocabulary — Now in the App! ► Download Now on Google Play

generated by rank.qmaths.in

**Q22** Mean of Grouped Data

ಈ ಕೆಳಗಿನ ದತ್ತಾಂಶಗಳ ಸರಾಸರಿಯು 46 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 10-20 | 20-30 | 30-40 | 40-50 | 50-60 |
|---|---|---|---|---|---|
| ಆವರ್ತನ | 36 | 20 | 29 | 26 | x |

A. 206

B. 210

C. 190

D. 209 ✓

**Q23** Sphere & Hemisphere

ಒಂದು ವೇಳೆ 16 cm ವ್ಯಾಸ ಹೊಂದಿರುವ ಒಂದು ದೊಡ್ಡ ಗೋಳದಿಂದ 64 ಒಂದೇ ರೀತಿಯ ಸಣ್ಣ ಗೋಳಗಳನ್ನು ಮಾಡಿದರೆ, ಪ್ರತಿಯೊಂದು ಸಣ್ಣ ಗೋಳದ ಮೇಲ್ಮೈ ವಿಸ್ತೀರ್ಣ ಎಷ್ಟು?

A. $2\pi cm^2$

B. $12\pi cm^2$

C. $16\pi cm^2$ ✓

D. $14\pi cm^2$

**Q24** Standard Angle Values

$\sin^2 10° + \sin^2 80° + \tan^2 45° + \sec^2 60° + \sin^2 30°$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{15}{2}$

B. $\frac{25}{3}$

C. $\frac{25}{4}$ ✓

D. $\frac{20}{3}$

**Q25** sin^2 + cos^2 = 1

ಒಂದು ವೇಳೆ $\sin A + \cos A = m$ ಆಗಿದ್ದರೆ, $\sin^4 A + \cos^4 A$ ಯ ಮೌಲ್ಯ ಎಷ್ಟು?

A. $1 + \frac{(1-m^2)^2}{2}$

B. $1 - \frac{(1-m^2)}{2}$

C. $1 - \frac{(1-m^2)^2}{2}$ ✓

D. $1 + \frac{(1-m^2)}{2}$

Blackbook Vocabulary — Now in the App! ► Download Now on Google Play

generated by rank.qmaths.in

## Mathematics

25 Questions • Answer Key

**Q1** 3-Year Difference

ವಾರ್ಷಿಕ 20% ದರದಲ್ಲಿ 3 ವರ್ಷಗಳ ಅವಧಿಗೆ ಸಿಗುವ ಚಕ್ರ ಬಡ್ಡಿ (ವರ್ಷಕ್ಕೊಮ್ಮೆ ಚಕ್ರ ಬಡ್ಡಿ ಲೆಕ್ಕ ಹಾಕುವಂತೆ) ಮತ್ತು ಸರಳ ಬಡ್ಡಿ- ಇವೆರಡರ ನಡುವಿನ ವ್ಯತ್ಯಾಸ ₹624 ಆಗಿದೆ. ಹಾಗಾದರೆ ಅಸಲು ಮೊತ್ತ ಎಷ್ಟು?

- A. ₹3,775
- B. ₹4,875 ✓
- C. ₹5,975
- D. ₹6,075

**Q2** Cost with Overhead Expenses

ಅರವಿಂದ್ ಅವರು ಒಂದು ವಸ್ತುವನ್ನು ₹x ಗೆ ಖರೀದಿಸಿದರು. ಅದನ್ನು ಬಿರು ಅವರಿಗೆ 15% ನಷ್ಟಕ್ಕೆ ಮಾರಾಟ ಮಾಡಿದರು. ಬಿರು ಅವರು ಅದರ ಸಾಗಣೆಗೆ ₹101 ಖರ್ಚು ಮಾಡಿದರು ಮತ್ತು ಅದನ್ನು ಮಿನು ಅವರಿಗೆ 50% ಲಾಭಕ್ಕೆ ಮಾರಾಟ ಮಾಡಿದರು. ಮಿನು ಅವರು ಅದನ್ನು ₹1,554 ಕ್ಕೆ ಖರೀದಿಸಿದರೆ, x ನ ಮೌಲ್ಯ ಎಷ್ಟು?

- A. 1,126
- B. 1,087
- C. 1,068
- D. 1,100 ✓

**Q3** Divisibility Rules

456A2384 ಎಂಬ ಸಂಖ್ಯೆಯನ್ನು 16 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

- A. 2
- B. 0 ✓
- C. 5
- D. 4

**Q4** Find SI

ವಾರ್ಷಿಕ 12% ಬಡ್ಡಿದರದಲ್ಲಿ ₹550 ಮೊತ್ತವನ್ನು 2.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 145
- B. 165 ✓
- C. 155
- D. 150

**Q5** HCF/LCM Word Problems

12, 24, 45 ಮತ್ತು 60 ರಿಂದ ಭಾಗಿಸಬಹುದಾದ 4 ಅಂಕಿಗಳ ಅತಿದೊಡ್ಡ ಸಂಖ್ಯೆಯನ್ನು ಕಂಡುಹಿಡಿಯಿರಿ.

- A. 9,720 ✓
- B. 9,256
- C. 9,600
- D. 9,450

**Q6** Half-Yearly Compounding

ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಒಂದು ಮೊತ್ತಕ್ಕೆ 20% ಚಕ್ರಬಡ್ಡಿಯನ್ನು ನೀಡಲಾಗುತ್ತದೆ. ಜನವರಿ 1 ರಂದು ₹8,500 ಹೂಡಿಕೆ ಮಾಡಲಾಗಿದೆ ಮತ್ತು ಅದೇ ವರ್ಷದ ಜುಲೈ 1 ರಂದು ಮತ್ತೊಂದು ₹8,500 ಹೂಡಿಕೆ ಮಾಡಲಾಗಿದೆ. ವರ್ಷದ ಕೊನೆಯಲ್ಲಿ ಗಳಿಸಿದ ಒಟ್ಟು ಬಡ್ಡಿಯನ್ನು ಕಂಡುಹಿಡಿಯಿರಿ.

- A. ₹2,680
- B. ₹2,635 ✓
- C. ₹2,525
- D. ₹2,540

**Q7** Mean Proportional

ಒಂದು ಆಯತದ ಅಗಲವು 16 cm ಆಗಿದೆ. ಒಂದುವೇಳೆ ಅದರ ಉದ್ದವು 9 cm ಮತ್ತು 16 cm ಗಳ ನಡುವಿನ ಸರಾಸರಿ ಸಮಾನುಪಾತದಲ್ಲಿದ್ದರೆ, ಆಯತದ ಉದ್ದವನ್ನು ಕಂಡುಹಿಡಿಯಿರಿ.

- A. 18 cm
- B. 16 cm
- C. 12 cm ✓
- D. 9 cm

**Q8** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 3 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 7 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 42 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ, ತೊಟ್ಟಿಯ ಅರ್ಧ ಭಾಗವನ್ನು ತುಂಬಿಸಲು ಅವು ತೆಗೆದುಕೊಳ್ಳುವ ಸಮಯ (ಗಂಟೆಗಳಲ್ಲಿ) ಎಷ್ಟು?

- A. 3
- B. 1 ✓
- C. 4
- D. 2

Blackbook Vocabulary — Now in the App! ▶ Download Now on Google Play

**Q9** Percentage Increase/Decrease

ಒಂದು ವಾಷಿಂಗ್ ಮೆಷಿನ್‌ನ ಬೆಲೆಯು ಟಿವಿಯ ಬೆಲೆಗಿಂತ 50% ಕಡಿಮೆ ಇದೆ. ವಾಷಿಂಗ್ ಮೆಷಿನ್‌ನ ಬೆಲೆಯು 83% ರಷ್ಟು ಹೆಚ್ಚಾದರೆ ಮತ್ತು ಟಿವಿಯ ಬೆಲೆಯು 38% ರಷ್ಟು ಕಡಿಮೆಯಾದರೆ, 8 ವಾಷಿಂಗ್ ಮೆಷಿನ್‌ಗಳು ಮತ್ತು 4 ಟಿವಿಗಳ ಒಟ್ಟು ಬೆಲೆಯಲ್ಲಿ ಉಂಟಾಗುವ ಶೇಕಡಾವಾರು ಬದಲಾವಣೆ ಎಷ್ಟು?

A. 19% ರಷ್ಟು ಕಡಿಮೆ
B. 26% ರಷ್ಟು ಹೆಚ್ಚಳ
C. 27% ರಷ್ಟು ಕಡಿಮೆ
D. 22.5% ರಷ್ಟು ಹೆಚ್ಚಳ ✓

**Q10** Relative Speed

S1 ಮತ್ತು S2 ಎಂಬ ಎರಡು ನಿಲ್ದಾಣಗಳು 766 km ಅಂತರದಲ್ಲಿವೆ. ಒಂದು ರೈಲು S1 ನಿಂದ 5:20 a.m. ಗೆ ಹೊರಟು S2 ಕಡೆಗೆ 74 kmph ವೇಗದಲ್ಲಿ ಚಲಿಸುತ್ತದೆ. ಇನ್ನೊಂದು ರೈಲು S2 ನಿಂದ 7:50 a.m ಗೆ ಹೊರಟು S1 ಕಡೆಗೆ ಸಮಾಂತರ ಹಳಿಗಳಲ್ಲಿ 92 kmph ವೇಗದಲ್ಲಿ ಚಲಿಸುತ್ತದೆ. ಹಾಗಾದರೆ ಅವು ಯಾವ ಸಮಯಕ್ಕೆ ಸಂಧಿಸುತ್ತವೆ?

A. 10:05 am
B. 11:20 am ✓
C. 9:55 am
D. 9:50 am

**Q11** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆ ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, ಅಂಗಡಿ I ರಲ್ಲಿ 57% ಮತ್ತು 29% ಗಳ ಎರಡು ಸತತ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಅಂಗಡಿ II ರಲ್ಲಿ 76% ಮತ್ತು 35% ಗಳ ಸತತ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಅಂಗಡಿ III ರಲ್ಲಿ 53% ಮತ್ತು 86% ಗಳ ಸತತ ರಿಯಾಯಿತಿಗಳನ್ನು ನೀಡಲಾಗುತ್ತಿದೆ ಮತ್ತು ಅಂಗಡಿ IV ರಲ್ಲಿ 58%, 13% ಮತ್ತು 12% ಗಳ ಸತತ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. III ✓
B. II
C. I
D. IV

**Q12** Surface Area

ಎರಡು ಘನ ಗೋಳಗಳನ್ನು ಒಂದೇ ವಸ್ತುವಿನಿಂದ ಮಾಡಲಾಗಿದೆ. ದೊಡ್ಡ ಗೋಳದ ತೂಕವು ಚಿಕ್ಕ ಗೋಳದ ತೂಕಕ್ಕಿಂತ 8 ಪಟ್ಟು ಹೆಚ್ಚು ಇದೆ. ಒಂದುವೇಳೆ ಚಿಕ್ಕ ಗೋಳದ ತ್ರಿಜ್ಯವು 7 cm ಆಗಿದ್ದರೆ, ಎರಡೂ ಗೋಳಗಳ ಮೇಲ್ಮೈ ಪ್ರದೇಶಗಳ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ. (π = 22/7 ಬಳಸಿ)

A. 1828 cm2
B. 1848 cm2 ✓
C. 1868 cm2
D. 1888 cm2

**Q13** Trapezium Properties

ABCD ಟ್ರಾಪಿಜ್ಯದಲ್ಲಿ, AB∥CD ಮತ್ತು AB = 16 cm, CD = 8 cm ಆಗಿದ್ದರೆ. ಹಾಗಾದರೆ ΔABC ಮತ್ತು ΔACD ಗಳ ವಿಸ್ತೀರ್ಣಗಳ ನಡುವಿನ ಅನುಪಾತ ಎಷ್ಟು?

A. 4:3
B. 2:1 ✓
C. 3:5
D. 1:2

**Q14** Two Persons Age Relation

ಮಾನುಷಿ ಮತ್ತು ನಾನಿನಾಳ ಪ್ರಸ್ತುತ ವಯಸ್ಸುಗಳ ನಡುವಿನ ಅನುಪಾತವು 4: 9 ಆಗಿದೆ. 6 ವರ್ಷಗಳ ನಂತರ, ಅವರ ವಯಸ್ಸುಗಳ ನಡುವಿನ ಅನುಪಾತವು 6: 11 ಆಗಿರುತ್ತದೆ. ಹಾಗಾದರೆ ನಾನಿನಾಳ ಪ್ರಸ್ತುತ ವಯಸ್ಸು ಎಷ್ಟು?

A. 25 ವರ್ಷಗಳು
B. 27 ವರ್ಷಗಳು ✓
C. 24 ವರ್ಷಗಳು
D. 26 ವರ್ಷಗಳು

**Q15** Two Successive Changes

ಒಂದು ವಸ್ತುವಿನ ಬೆಲೆಯು ಸತತವಾಗಿ ಎರಡು ಬಾರಿ ತಲಾ 12% ಹೆಚ್ಚಾಗುತ್ತದೆ. ಹಾಗಾದರೆ, ಆ ವಸ್ತುವಿನ ಬೆಲೆಯಲ್ಲಿ ಉಂಟಾದ ಒಟ್ಟು ಹೆಚ್ಚಳಕ್ಕೆ ಸಮನಾದ ಒಂದೇ ಶೇಕಡಾವಾರು ಹೆಚ್ಚಳವನ್ನು ಕಂಡುಹಿಡಿಯಿರಿ.

A. 24%
B. 22%
C. 25.44% ✓
D. 24.44%

Blackbook Vocabulary — Now in the App! ▶ Download Now on Google Play

**Q16** Two Trains Crossing

Blackbook Vocabulary — Now in the App! ▸ Download Now on Google Play

**Q17** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ.
ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ I ನೇ ಅಂಗಡಿಯು 18% ಮತ್ತು 65% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 56% ಮತ್ತು 86% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 53% ಮತ್ತು 69% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 15%, 60% ಮತ್ತು 65% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ.
ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. III

B. I

C. II ✓

D. IV

**Q18** Surface Area (TSA/LSA)

ಒಂದು ಕಂಪನಿಯು ಒಂದು ನಿರ್ದಿಷ್ಟ ವಸ್ತುವನ್ನು ಪ್ಯಾಕ್ ಮಾಡಲು ಎರಡು ಆಯ್ಕೆಗಳನ್ನು ಹೊಂದಿದೆ.

ಪೆಟ್ಟಿಗೆ A: 5 cm ಬಾಹು ಇರುವ ಘನಾಕಾರದ ಪೆಟ್ಟಿಗೆ.
ಪೆಟ್ಟಿಗೆ B: ಉದ್ದ = 6 cm, ಅಗಲ = 4 cm ಮತ್ತು ಎತ್ತರ = 3 cm ಇರುವ ಘನಾಕಾರದ ಪೆಟ್ಟಿಗೆ.

ಪೆಟ್ಟಿಗೆಗಳನ್ನು ತಯಾರಿಸಲು ಅಗತ್ಯವಿರುವ ರಟ್ಟಿನ ಬೆಲೆಯು ₹10/cm$^2$ ಆಗಿದೆ. ಆದಾಗ್ಯೂ, ಮಡಚುವಿಕೆ ಮತ್ತು ತಿರುಗಿಸುವಿಕೆಗಳಿಗಾಗಿ A ಪೆಟ್ಟಿಗೆಯು 10% ಹೆಚ್ಚು ಕಾರ್ಡ್‌ಬೋರ್ಡ್ ಅನ್ನು ಬಳಸುತ್ತದೆ, ಮತ್ತು B ಪೆಟ್ಟಿಗೆಯು 15% ಹೆಚ್ಚು ಕಾರ್ಡ್‌ಬೋರ್ಡ್ ಅನ್ನು ಬಳಸುತ್ತದೆ.
ಹಾಗಾದರೆ ಕಾರ್ಡ್‌ಬೋರ್ಡ್‌ನ ಒಟ್ಟು ವೆಚ್ಚವನ್ನು ಕಡಿಮೆ ಮಾಡಲು ಕಂಪನಿಯು ಯಾವ ಪೆಟ್ಟಿಗೆಯನ್ನು ಬಳಸಬೇಕು ಮತ್ತು ಅದನ್ನು ತಯಾರಿಸಲು ಎಷ್ಟು ವೆಚ್ಚವಾಗುತ್ತದೆ?

A. ಪೆಟ್ಟಿಗೆ A: ₹1650

B. ಪೆಟ್ಟಿಗೆ B: ₹1800

C. ಪೆಟ್ಟಿಗೆ A: ₹1500

D. ಪೆಟ್ಟಿಗೆ B: ₹1242 ✓

**Q19** Ungrouped Data Median

ಈ ಕೆಳಗಿನ ದತ್ತಾಂಶದಲ್ಲಿ, ಮಧ್ಯಾಂಕದ ಮೌಲ್ಯ ಎಷ್ಟು?

18, 20, 21, 25, 26, 23 ,29 ,32, 41, 33, 39

A. 25

B. 29

C. 32

D. 26 ✓

**Q20** Common Tangents

ಪ್ರತಿಯೊಂದೂ r ಯೂನಿಟ್ ತ್ರಿಜ್ಯವನ್ನು ಹೊಂದಿರುವ ಎರಡು ವೃತ್ತಗಳಿಗೆ ಒಂದು ಸಾಮಾನ್ಯ ಬಾಹ್ಯ ಸ್ಪರ್ಶಕವನ್ನು ಎಳೆಯಲಾಗುತ್ತದೆ. ಸಾಮಾನ್ಯ ಸ್ಪರ್ಶಕದ ಉದ್ದ 2r ಮಾನಗಳಾಗಿವೆ. ಹಾಗಾದರೆ ವೃತ್ತಗಳ ಕೇಂದ್ರಗಳ ನಡುವಿನ ಅಂತರವು ______ಮಾನಗಳಾಗಿರುತ್ತವೆ.

A. $2r$ ✓

B. $4r$

C. $r$

D. $3r$

Blackbook Vocabulary — Now in the App! ▶ Download Now on Google Play

**Q21** Complementary Angle Values

$\Delta ABC$ ಯಲ್ಲಿ $\angle C = 90^\circ$ ಮತ್ತು $\tan A = \sqrt{6}$ ಆಗಿದ್ದರೆ, $\sin A \times \cos B \times \operatorname{cosec}(A+B)$ ಯ ಮೌಲ್ಯವನ್ನು ಕಂಡು ಹಿಡಿಯಿರಿ.

A. $\frac{\sqrt{3}}{2}$

B. $\frac{6}{7}$ ✓

C. 1

D. 0

**Q22** Mean of Grouped Data

ಕೆಳಗಿನ ದತ್ತಾಂಶದ ಸರಾಸರಿಯು 47 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 20-30 | 30-40 | 40-50 | 50-60 | 60-70 |
|---|---|---|---|---|---|
| ಆವರ್ತನ | 20 | 29 | 22 | 32 | x |

A. 36

B. 32 ✓

C. 53

D. 30

**Q23** Sphere & Hemisphere

ಒಂದು ಗೋಳದ ಮೇಲ್ಮೈ ವಿಸ್ತೀರ್ಣವು ಮತ್ತೊಂದು ಗೋಳದ ಘನಫಲಕ್ಕೆ ಸಂಖ್ಯಾತ್ಮಕವಾಗಿ ಸಮಾನವಾಗಿದೆ. ಒಂದುವೇಳೆ ಮೊದಲ ಗೋಳದ ತ್ರಿಜ್ಯವು 7 cm ಆಗಿದ್ದರೆ, ಎರಡನೇ ಗೋಳದ ತ್ರಿಜ್ಯವನ್ನು (cm ಗಳಲ್ಲಿ) ಕಂಡುಹಿಡಿಯಿರಿ.

A. $\sqrt{174}$

B. $\sqrt[3]{147}$ ✓

C. $\sqrt{147}$

D. $\sqrt[3]{174}$

Blackbook Vocabulary — Now in the App! ▶ Download Now on Google Play

**Q24** Year-on-Year Comparison

ಕೆಳಗೆ ನೀಡಲಾದ ಎರಡು ಪೈ-ನಕ್ಷೆಗಳನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ.




(A=ಶಿಕ್ಷಣ, B =ಉಳಿತಾಯ C =ದಿನಸಿ D =ವಿದ್ಯುಚ್ಛಕ್ತಿ ಮತ್ತು ಫೋನ್ ಬಿಲ್ E= ಇತರೆ, March month's salary = ಮಾರ್ಚ್ ತಿಂಗಳ ಸಂಬಳ, April's month's salary = ಏಪ್ರಿಲ್ ತಿಂಗಳ ಸಂಬಳ)

ಮಾರ್ಚ್ ತಿಂಗಳ ಸಂಬಳದಿಂದ ಶಿಕ್ಷಣಕ್ಕಾಗಿ ಖರ್ಚು ಮಾಡಿದ ಮೊತ್ತ ಮತ್ತು ಏಪ್ರಿಲ್ ತಿಂಗಳ ಸಂಬಳದಿಂದ ದಿನಸಿಗಾಗಿ ಖರ್ಚು ಮಾಡಿದ ಮೊತ್ತಗಳ ನಡುವಿನ ಅನುಪಾತವನ್ನು ಕಂಡುಹಿಡಿಯಿರಿ.

- **A.** 272:35 ✓
- **B.** 271:33
- **C.** 272:33
- **D.** 271:35

**Q25** sin^2 + cos^2 = 1

$\sin^2 42° + \sin^2 48° + \sec^2 30° - \cot^2 45°$ ನ ಮೌಲ್ಯ ಎಷ್ಟು?

- **A.** 1
- **B.** $\frac{4}{3}$ ✓
- **C.** $\frac{2}{3}$
- **D.** $\frac{3}{4}$

Blackbook Vocabulary — Now in the App! ► Download Now on Google Play
generated by rank.qmaths.in

## Mathematics

25 Questions • Answer Key

**Q1** (a+b)^2, (a-b)^2

ಈ ಕೆಳಗಿನ ಗಣಿತೋಕ್ತಿಯನ್ನು ಸರಳೀಕರಿಸಿ:

$(2a + 3b + 4c)^2 + (2a - 3b - 4c)^2 - 8a^2 - 18b^2 - 32c^2$

A. 12bc
B. 48bc ✓
C. 16ac
D. 24ab

**Q2** 2-Year Difference

₹5,000 ಮೊತ್ತವನ್ನು ವಾರ್ಷಿಕ 8% ದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಲಾಯಿತು. ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕ ಮಾಡುವ ರೀತಿಯಲ್ಲಿ, ಚಕ್ರಬಡ್ಡಿ ಮತ್ತು ಸರಳ ಬಡ್ಡಿಗಳ ನಡುವಿನ ವ್ಯತ್ಯಾಸವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. ₹50
B. ₹20
C. ₹32 ✓
D. ₹80

**Q3** Angles in Circle

O ಕೇಂದ್ರಬಿಂದುವನ್ನು ಹೊಂದಿರುವ ಒಂದು ವೃತ್ತದ ಎರಡು ಜ್ಯಾಗಳಾದ AB ಮತ್ತು CD ಗಳು E ಬಿಂದುವಿನಲ್ಲಿ ಸಂಧಿಸುತ್ತವೆ. ಒಂದು ವೇಳೆ AOC ಕೋನ = 54° ಮತ್ತು BOD ಕೋನ = 48° ಆಗಿದ್ದರೆ, BED ಕೋನದ ಮೌಲ್ಯ ಎಷ್ಟು?

A. 52°
B. 53°
C. 51° ✓
D. 50°

**Q4** Average Speed

ಒಬ್ಬ ವ್ಯಕ್ತಿಯು ಒಂದು ಮೋಟಾರ್ ಬೈಕ್‌ನಲ್ಲಿ ಒಟ್ಟು 800 km ದೂರವನ್ನು ಕ್ರಮಿಸುತ್ತಾನೆ. ಮೊದಲ 12 ಗಂಟೆಗಳ ಪ್ರಯಾಣದಲ್ಲಿ, ಅವನ ವೇಗವು 50 km/hr ಆಗಿರುತ್ತದೆ ಮತ್ತು ಪ್ರಯಾಣದ ಉಳಿದ ಸಮಯದಲ್ಲಿ ಈ ವೇಗವು 25 km/hr ಗೆ ಇಳಿಯುತ್ತದೆ. ಹಾಗಾದರೆ ಸರಾಸರಿ ವೇಗವು (km/hr ಗಳಲ್ಲಿ)_____ಆಗಿರುತ್ತದೆ.

A. 48
B. 40 ✓
C. 42
D. 36

**Q5** Basic TSD

ಒಂದು ಬಸ್ A ಎಂಬ ನಗರದಿಂದ 7:00 a.m ಗೆ ಹೊರಟು 48 km/h ವೇಗದಲ್ಲಿ ಚಲಿಸುತ್ತದೆ. 10:00 a.m ಗೆ ಚಾಲಕನು 30 ನಿಮಿಷಗಳ ವಿರಾಮಕ್ಕಾಗಿ ನಿಲ್ಲಿಸುತ್ತಾನೆ. ನಂತರ ಅವನು 60 km/h ವೇಗದಲ್ಲಿ ಮುಂದುವರಿಯುತ್ತಾನೆ. ಹಾಗಾದರೆ ಅವನು A ನಗರದಿಂದ 300 km ದೂರದಲ್ಲಿರುವ B ಎಂಬ ನಗರವನ್ನು ತಲುಪುವ ಸಮಯವನ್ನು ಕಂಡುಹಿಡಿಯಿರಿ.

A. 12:56 pm
B. 1:06 pm ✓
C. 1:30 pm
D. 1:10 pm

**Q6** Cost with Overhead Expenses

ಅರವಿಂದ್ ಅವರು ಒಂದು ವಸ್ತುವನ್ನು ₹x ಗೆ ಖರೀದಿಸಿದರು. ಅವರು ಅದನ್ನು ಬೀರು ಅವರಿಗೆ 26% ನಷ್ಟದಲ್ಲಿ ಮಾರಾಟ ಮಾಡಿದರು. ಬೀರು ಅವರು ಅದರ ಸಾಗಣೆಗೆ ₹102 ಖರ್ಚು ಮಾಡಿದರು ಮತ್ತು ಅದನ್ನು ಮೀನು ಅವರಿಗೆ 50% ಲಾಭಕ್ಕೆ ಮಾರಾಟ ಮಾಡಿದರು. ಒಂದು ವೇಳೆ ಮೀನು ಅವರು ಅದನ್ನು ₹1,374 ಕ್ಕೆ ಖರೀದಿಸಿದರೆ, x ನ ಮೌಲ್ಯ ಎಷ್ಟು?

A. 1,080
B. 1,120
C. 1,060
D. 1,100 ✓

**Q7** Dividing Quantity in Ratio

ಒಂದು ಸ್ಥಳೀಯ ಕ್ಲಬ್ ಚುನಾವಣೆಯಲ್ಲಿ, ಇಬ್ಬರು ಅಭ್ಯರ್ಥಿಗಳು 7: 5 ರ ಅನುಪಾತದಲ್ಲಿ ಮತಗಳನ್ನು ಪಡೆದುಕೊಂಡಿದ್ದಾರೆ. ಒಂದು ವೇಳೆ ಒಟ್ಟು ಚಲಾವಣೆಯಾದ ಮತಗಳ ಸಂಖ್ಯೆಯು 360 ಆಗಿದ್ದರೆ, ವಿಜೇತ ಅಭ್ಯರ್ಥಿಯು ಎಷ್ಟು ಮತಗಳನ್ನು ಪಡೆದುಕೊಂಡಿದ್ದಾರೆ?

A. 200
B. 210 ✓
C. 240
D. 180

Blackbook Vocabulary — Now in the App! ▶ Download Now on Google Play

**Q8** Find SI

ತಿಂಗಳಿಗೆ 6% ಬಡ್ಡಿದರದಲ್ಲಿ, 10 ತಿಂಗಳ ಅವಧಿಗೆ ₹1,200 ಮೊತ್ತದ ಮೇಲಿನ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 120

B. 720 ✓

C. 80

D. 60

**Q9** Half-Yearly Compounding

ಒಂದು ಬ್ಯಾಂಕ್, ಅರ್ಧ ವಾರ್ಷಿಕ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ವಾರ್ಷಿಕ 6.8% ಚಕ್ರ ಬಡ್ಡಿಯನ್ನು ನೀಡುತ್ತದೆ. ಒಬ್ಬ ಗ್ರಾಹಕನು ವರ್ಷದ ಜನವರಿ 1 ಮತ್ತು ಜುಲೈ 1 ರಂದು ತಲಾ ₹3,485 ಠೇವಣಿ ಇಡುತ್ತಾನೆ. ವರ್ಷದ ಕೊನೆಯಲ್ಲಿ, ಬಡ್ಡಿಯ ಮೂಲಕ ಅವನು ಗಳಿಸಬಹುದಾದ ಮೊತ್ತ ಎಷ್ಟು? (ಎರಡು ದಶಮಾಂಶ ಸ್ಥಳಗಳಿಗೆ ಸೀಮಿತಗೊಳಿಸಿ)

A. ₹348.50

B. ₹359.50 ✓

C. ₹352.50

D. ₹376.50

**Q10** Laws of Indices

ಒಂದು ವೇಳೆ $116^{0.26} = x$, $116^{0.1} = y$ ಮತ್ತು $x^z = y^4$ ಆಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

A. 1.54 ✓

B. 0.58

C. 2.42

D. 3.39

**Q11** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 6 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 28 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 21 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಆ ಮೂರೂ ಕೊಳವೆಗಳನ್ನು ಒಟ್ಟಿಗೆ ತೆರೆದರೆ, ಅದೇ ತೊಟ್ಟಿಯ ನಾಲ್ಕನೇ-ಒಂದು ಭಾಗವನ್ನು ತುಂಬಿಸಲು ಅವು ತೆಗೆದುಕೊಳ್ಳುವ ಸಮಯ (ಗಂಟೆಗಳಲ್ಲಿ) ಎಷ್ಟು?

A. 2

B. 3

C. 1 ✓

D. 4

**Q12** Order of Operations

ಮೌಲ್ಯಮಾಪನ ಮಾಡಿ: 16 - 5 × 3 + 19

A. 19

B. 22

C. 18

D. 20 ✓

**Q13** Percentage Increase/Decrease

ರಾಮನ್ ಅವರ ಆದಾಯವು ₹43,000 ಆಗಿದೆ. ಅವರು ತಮ್ಮ ಆದಾಯದ 26% ಮೊತ್ತವನ್ನು ಉಳಿಸುತ್ತಾರೆ. ಅವರ ಆದಾಯವು 20% ಹೆಚ್ಚಾದರೆ ಮತ್ತು ಖರ್ಚು 40% ಹೆಚ್ಚಾದರೆ, ಅವರ ಉಳಿತಾಯವು ____ಆಗುತ್ತದೆ.

A. ₹4,131 ರಷ್ಟು ಹೆಚ್ಚಳ

B. ₹4,128 ರಷ್ಟು ಇಳಿಕೆ ✓

C. ₹4,133 ರಷ್ಟು ಇಳಿಕೆ

D. ₹4,133 ರಷ್ಟು ಹೆಚ್ಚಳ

**Q14** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ I ನೇ ಅಂಗಡಿಯು 84% ಮತ್ತು 97% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 42% ಮತ್ತು 94% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 50% ಮತ್ತು 85% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 89%, 37% ಮತ್ತು 82% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. II

B. III

C. I ✓

D. IV

**Q15** Surface Area (TSA/LSA)

ಬಾಹು 65 cm ಇರುವ ಒಂದು ಘನದ ಒಟ್ಟು ಮೇಲ್ಮೈ ವಿಸ್ತೀರ್ಣ ಇದಾಗಿದೆ:

A. 25350 cm2 ✓

B. 25320 cm2

C. 25332 cm2

D. 25386 cm2

Blackbook Vocabulary — Now in the App! ▶ Download Now on Google Play

generated by rank.qmaths.in

**Q16** Volume

2 m ತ್ರಿಜ್ಯ ಮತ್ತು 7 m ಎತ್ತರದ ಒಂದು ಸಿಲಿಂಡರಾಕಾರದ ತೊಟ್ಟಿಯನ್ನು ಸಂಪೂರ್ಣವಾಗಿ ನೀರಿನಿಂದ ತುಂಬಿಸಲಾಗುತ್ತದೆ. 10% ನೀರು ಸೋರಿಕೆಯಾದ ನಂತರ, ಆ ಟ್ಯಾಂಕ್‌ನಲ್ಲಿ ಉಳಿದ ನೀರನ್ನು 4 : 1 ಅನುಪಾತದಲ್ಲಿ ಹಾಲಿನೊಂದಿಗೆ ಬೆರೆಸಲಾಗುತ್ತದೆ. ದೊಡ್ಡ ಟ್ಯಾಂಕ್‌ನಲ್ಲಿರುವ ನೀರಿಗೆ ಎಷ್ಟು ಲೀಟರ್ ಹಾಲನ್ನು ಸೇರಿಸಲಾಗುತ್ತದೆ? (π = 22/7 ಬಳಸಿ)

A. 19800 ✓

B. 18400

C. 17800

D. 19400

**Q17** Weighted Average

ಒಬ್ಬ ವಿದ್ಯಾರ್ಥಿಯು 40% ತೂಕವನ್ನು ಹೊಂದಿರುವ ವಿಷಯದಲ್ಲಿ 80 ಅಂಕಗಳನ್ನು ಗಳಿಸುತ್ತಾನೆ ಮತ್ತು 60% ತೂಕವನ್ನು ಹೊಂದಿರುವ ವಿಷಯದಲ್ಲಿ 70 ಅಂಕಗಳನ್ನು ಪಡೆಯುತ್ತಾನೆ. ಹಾಗಾದರೆ ಅವನ ತೂಕಿತ ಸರಾಸರಿ ಅಂಕ ಎಷ್ಟು?

A. 74 ✓

B. 70

C. 80

D. 72

**Q18** Weighted Average

ನಾಲ್ಕು ವಿಷಯಗಳಿಗೆ ನಿಗದಿಪಡಿಸಲಾದ ತೂಕಗಳು ಕ್ರಮವಾಗಿ 2, 3, 4 ಮತ್ತು 1 ಆಗಿವೆ. ಒಬ್ಬ ವಿದ್ಯಾರ್ಥಿಯು ಈ ವಿಷಯಗಳಲ್ಲಿ 60, 70, 80 ಮತ್ತು 90 ಅಂಕಗಳನ್ನು ಪಡೆಯುತ್ತಾನೆ. ಹಾಗಾದರೆ ಅಂಕಗಳ ತೂಕಿತ ಸರಾಸರಿ ಎಷ್ಟು?

A. 64

B. 74 ✓

C. 68

D. 78

Blackbook Vocabulary — Now in the App! ▶ Download Now on Google Play

**Q19** Double Pie Chart

ಕೆಳಗಿನ ಬಹು ಪೈ ನಕ್ಷೆಗಳು ಚಿತ್ರಿಸಿರುವಂತೆ, ಶಾಲೆ A ಯು (School A)ತನ್ನ ಬಜೆಟ್‌ನ 33.3% ಅನ್ನು ಶಿಕ್ಷಕರ ವೇತನಕ್ಕಾಗಿ ಖರ್ಚು ಮಾಡುತ್ತದೆ ಮತ್ತು ಶಾಲೆ B ಯು (School B) ತನ್ನ ಬಜೆಟ್‌ನ (Budget) 25.5% ಅನ್ನು ಶಿಕ್ಷಕರ ವೇತನಕ್ಕಾಗಿ ಖರ್ಚು ಮಾಡುತ್ತದೆ. ಒಂದು ವೇಳೆ ಎರಡೂ ಸಹ ಸಮಾನ ಒಟ್ಟು ಬಜೆಟ್ ₹36,00,000 ಅನ್ನು ಹೊಂದಿದ್ದರೆ, ವೇತನ ನೀಡಲು A ಶಾಲೆಯು B ಶಾಲೆಗಿಂತ ಎಷ್ಟು ಹೆಚ್ಚು (₹ ಗಳಲ್ಲಿ) ಖರ್ಚು ಮಾಡುತ್ತದೆ? (teacher salaries = ಶಿಕ್ಷಕರ ವೇತನ, other spending=ಇತರೆ ಖರ್ಚು)







A. 5,00,000

B. 2,80,800 ✓

C. 4,00,000

D. 2,00,000

**Q20** Mean Proportional

$3 + \sqrt{2}$ and $12 - \sqrt{32}$ ಇವುಗಳ ನಡುವಿನ ಸರಾಸರಿ ಸಮಾನುಪಾತ ಎಷ್ಟು?

A. $2\sqrt{6}$

B. $3\sqrt{6}$

C. $2\sqrt{7}$ ✓

D. $3\sqrt{7}$

Blackbook Vocabulary — Now in the App! ▶ Download Now on Google Play

generated by rank.qmaths.in

**Q21** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 64 ಆಗಿದ್ದರೆ, (9x + 2y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 8 | 20 | x | 6 | y | 80 |

A. 113 ✓

B. 94

C. 99

D. 106

**Q22** Pythagorean Identities

$[(1 + \cot^2 A) + (1 + \frac{1}{\cot^2 A})] \times \sin^2 A \cos^2 A$ ಯ ಮೌಲ್ಯವನ್ನು ಕಂಡುಹಿಡಿಯಿರಿ.

A. 3

B. 4

C. 5

D. 1 ✓

**Q23** Ratio Comparison

ಮನೋಜ್‌ನ ತೂಕವು ಸಂಜುವಿನ ತೂಕದ $\frac{5}{7}$ ಪಟ್ಟು ಇದೆ. ಹಾಗಾದರೆ ಸಂಜುವಿನ ತೂಕವು ಮನೋಜ್‌ನ ತೂಕಕ್ಕಿಂತ ಎಷ್ಟು ಭಿನ್ನರಾಶಿಯಷ್ಟು ಹೆಚ್ಚು ಇದೆ?

A. $\frac{7}{5}$

B. $\frac{2}{7}$

C. $\frac{2}{5}$ ✓

D. $\frac{3}{7}$

**Q24** Reciprocal Relations

ಒಂದು ವೇಳೆ $\cos A = \frac{9}{41}$ ಆಗಿದ್ದು A ಲಘುಕೋನ ಆಗಿದ್ದರೆ, $\operatorname{cosec} A \cos A + \sec A \sin A$ ಯ ಮೌಲ್ಯವನ್ನು ಕಂಡುಹಿಡಿಯಿರಿ.

A. $4\frac{241}{360}$ ✓

B. $3\frac{119}{180}$

C. $5\frac{317}{360}$

D. $2\frac{131}{180}$

Blackbook Vocabulary — Now in the App! ► Download Now on Google Play

**Q25** Surds

$$\frac{\sqrt{264}\times\sqrt{330}\times\sqrt{1125}}{\sqrt{1296}\times\sqrt{400}}$$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{38}{3}$

B. $\frac{11}{2}$

C. $\frac{55}{4}$ ✓

D. $\frac{89}{6}$

Blackbook Vocabulary — Now in the App! ► Download Now on Google Play
generated by rank.qmaths.in

## Mathematics

25 Questions • Answer Key

**Q1** Annual Compounding

ವಾರ್ಷಿಕ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಎಷ್ಟು ಶೇಕಡಾ ಚಕ್ರಬಡ್ಡಿಯಲ್ಲಿ 2 ವರ್ಷಗಳಲ್ಲಿ ಒಂದು ಮೊತ್ತವು ತನ್ನ 46 ಪಟ್ಟು ಆಗುತ್ತದೆ? (ನಿಮ್ಮ ಉತ್ತರವನ್ನು ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

- A. 588.5
- B. 582.2
- C. 570.4
- D. 578.2 ✓

**Q2** Annual Compounding

ವರ್ಷಕ್ಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಹಾಕುವಂತೆ, ₹1,000 ಅಸಲು ಮೊತ್ತವನ್ನು ವಾರ್ಷಿಕ 10% ಚಕ್ರಬಡ್ಡಿಯ ದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಲಾಗುತ್ತದೆ. 2 ವರ್ಷಗಳ ಕೊನೆಯಲ್ಲಿ ಸಿಗುವ ಚಕ್ರಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 210 ✓
- B. 200
- C. 220
- D. 230

**Q3** Average Speed

ಅನಿರುದ್ಧ್ ಅವರು 55 km ಅನ್ನು 11 km/h ವೇಗದಲ್ಲಿ, 65 km ಅನ್ನು 13 km/h ವೇಗದಲ್ಲಿ ಮತ್ತು 120 km ಅನ್ನು 20 km/h ವೇಗದಲ್ಲಿ ಕ್ರಮಿಸುತ್ತಾರೆ. ಹಾಗಾದರೆ ಅವರ ಸರಾಸರಿ ವೇಗ ( km/h ಗಳಲ್ಲಿ) ಎಷ್ಟು?

- A. 16
- B. 15 ✓
- C. 18
- D. 14

**Q4** Basic TSD

ಕೌಶಲ್ ಅವರು 120 km/h ವೇಗದಲ್ಲಿ 7 ಗಂಟೆ 31 ನಿಮಿಷಗಳ ಕಾಲ ಪ್ರಯಾಣಿಸಿದರು. ಹಾಗಾದರೆ ಅದೇ ದೂರವನ್ನು 22 ಗಂಟೆಗಳಲ್ಲಿ ಕ್ರಮಿಸಬೇಕಾದರೆ ಅವರು ಯಾವ ವೇಗದಲ್ಲಿ (km/h ಗಳಲ್ಲಿ) ಪ್ರಯಾಣಿಸಬೇಕು?

- A. 41 ✓
- B. 39
- C. 38
- D. 43

**Q5** Basic Time & Work

ದಿನಕ್ಕೆ 8 ಗಂಟೆ ಕೆಲಸ ಮಾಡುವ 16 ಟೈಪಿಸ್ಟ್‌ಗಳು 6 ದಿನಗಳಲ್ಲಿ 172 ಪುಟಗಳನ್ನು ಟೈಪ್ ಮಾಡಬಲ್ಲರು. ದಿನಕ್ಕೆ 6 ಗಂಟೆ ಕೆಲಸ ಮಾಡಿದರೆ 4 ದಿನಗಳಲ್ಲಿ 215 ಪುಟಗಳನ್ನು ಟೈಪ್ ಮಾಡಲು ಎಷ್ಟು ಟೈಪಿಸ್ಟ್‌ಗಳು ಬೇಕಾಗುತ್ತಾರೆ?

- A. 25
- B. 40 ✓
- C. 20
- D. 35

**Q6** CP-SP Relation

ಒಬ್ಬ ಅಂಗಡಿಯವನು ₹1 ಕ್ಕೆ 21 ಚಾಕೊಲೇಟ್‌ಗಳನ್ನು ಮಾರಾಟ ಮಾಡಿ 100% ಲಾಭ ಗಳಿಸುತ್ತಾನೆ. ಹಾಗಾದರೆ ಅವನು ₹1 ಕ್ಕೆ ಎಷ್ಟು ಚಾಕೊಲೇಟ್‌ಗಳನ್ನು ಖರೀದಿಸಿದ್ದನು?

- A. 42 ✓
- B. 63
- C. 43
- D. 69

**Q7** Find SI

ವಾರ್ಷಿಕ 12% ಬಡ್ಡಿದರದಲ್ಲಿ ₹600 ಮೊತ್ತವನ್ನು 2.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 160
- B. 180 ✓
- C. 230
- D. 280

**Q8** Finding Present Age

A ಅವರು B ಅವರಿಗಿಂತ 4 ವರ್ಷ ದೊಡ್ಡವರು. 5 ವರ್ಷಗಳ ನಂತರ, ಅವರಿಬ್ಬರ ವಯಸ್ಸುಗಳ ಮೊತ್ತವು 50 ಆಗಲಿದೆ. ಹಾಗಾದರೆ B ಅವರ ಪ್ರಸ್ತುತ ವಯಸ್ಸನ್ನು ಕಂಡುಹಿಡಿಯಿರಿ.

- A. 16 ವರ್ಷಗಳು
- B. 26 ವರ್ಷಗಳು
- C. 8 ವರ್ಷಗಳು
- D. 18 ವರ್ಷಗಳು ✓

Blackbook Vocabulary — Now in the App! ► Download Now on Google Play

**Q9** Finding Value from Percentage

ಇಬ್ಬರು ಅಭ್ಯರ್ಥಿಗಳ ನಡುವಿನ ಒಂದು ಚುನಾವಣೆಯಲ್ಲಿ, ಒಟ್ಟು ಮತಗಳಲ್ಲಿ 10% ಮತಗಳನ್ನು ಅಸಿಂಧುವೆಂದು ಘೋಷಿಸಲಾಯಿತು ಮತ್ತು ಎಲ್ಲಾ ಸಿಂಧು ಮತಗಳನ್ನು ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬರ ಪರವಾಗಿ ಚಲಾಯಿಸಲಾಗಿದೆ. ಒಂದು ವೇಳೆ ವಿಜೇತ ಅಭ್ಯರ್ಥಿಯು ಸಿಂಧು ಮತಗಳಲ್ಲಿ 53% ಮತಗಳನ್ನು ಪಡೆದುಕೊಂಡಿದ್ದರೆ ಮತ್ತು 1,620 ಮತಗಳ ಅಂತರದಿಂದ ಚುನಾವಣೆಯಲ್ಲಿ ಗೆದ್ದರೆ, ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 32,000

B. 28,000

C. 30,000 ✓

D. 27,000

**Q10** Grouped Data Median

ಒಂದು ವಿಮಾ ಕಂಪನಿಯು ಒಂದು ನಿರ್ದಿಷ್ಟ ಪ್ರದೇಶದಿಂದ ಅಪಘಾತ ಕ್ಲೇಮ್‌ಗಳಿಗಾಗಿ ಈ ಕೆಳಗಿನ ದತ್ತಾಂಶವನ್ನು ಪಡೆದುಕೊಂಡಿತು. ಈ ದತ್ತಾಂಶದಿಂದ ಮಧ್ಯಾಂಕವನ್ನು (ಸಾವಿರ ರೂಪಾಯಿಗಳಲ್ಲಿ) ಕಂಡುಹಿಡಿಯಿರಿ. (ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

| ಕ್ಲೈಮ್ ನ ವಿವರಣೆ (₹ ಸಾವಿರದಲ್ಲಿ) | ಆವರ್ತನ |
|---|---|
| 1-4 | 7 |
| 4-7 | 53 |
| 7-10 | 87 |
| 10-13 | 56 |
| 13-16 | 24 |
| 16-19 | 16 |
| 19-22 | 6 |
| 22-25 | 5 |

A. 6.11

B. 8.65

C. 4.21

D. 9.31 ✓

**Q11** HCF/LCM Word Problems

ಒಂದು ಶಾಲೆಯು ವಿದ್ಯಾರ್ಥಿಗಳಿಗೆ 60 ಪೆನ್ಸಿಲ್‌ಗಳು ಮತ್ತು 75 ಎರೇಸರ್‌ಗಳನ್ನು ವಿತರಿಸಲು ಬಯಸುತ್ತದೆ. ಅವರೆಲ್ಲರೂ, ಯಾವುದೇ ವಸ್ತುಗಳು ಉಳಿಯದಂತೆ ಸಮಾನ ಸಂಖ್ಯೆಯ ಪೆನ್ಸಿಲ್‌ಗಳು ಮತ್ತು ಎರೇಸರ್‌ಗಳನ್ನು ಪಡೆಯಬೇಕು. ಈ ಉಡುಗೊರೆಯನ್ನು ಪಡೆಯಬಹುದಾದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆ ಎಷ್ಟು?

A. 15 ✓

B. 5

C. 10

D. 25

**Q12** Median

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆಯು ಕ್ರಮವಾಗಿ 50.7 ಮತ್ತು 66.9 ಆಗಿವೆ. ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ಆ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ.

A. 56.3

B. 56.7

C. 57.6

D. 56.1 ✓

**Q13** Percentage Increase/Decrease

ಒಂದು ವಾಷಿಂಗ್ ಮಷಿನ್‌ನ ಬೆಲೆಯು TV ಯ ಬೆಲೆಗಿಂತ 44% ಕಡಿಮೆ ಇದೆ. ಒಂದು ವೇಳೆ ವಾಷಿಂಗ್ ಮಷಿನ್‌ನ ಬೆಲೆಯು 78% ಹೆಚ್ಚಾದರೆ ಮತ್ತು TV ಯ ಬೆಲೆಯು 70% ಕಡಿಮೆಯಾದರೆ, 7 ವಾಷಿಂಗ್ ಮಷಿನ್‌ಗಳು ಮತ್ತು 2 TV ಗಳ ಒಟ್ಟು ಬೆಲೆಯಲ್ಲಿ ಉಂಟಾಗುವ ಶೇಕಡಾವಾರು ಬದಲಾವಣೆ ಎಷ್ಟು?

A. 28% ಹೆಚ್ಚಳ ✓

B. 30% ಇಳಿಕೆ

C. 34% ಇಳಿಕೆ

D. 21% ಹೆಚ್ಚಳ

**Q14** Rules for 2,3,4,5,6

8-ಅಂಕಿಯ ಸಂಖ್ಯೆಯಾದ 796A6351 ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

A. 3

B. 5

C. 1

D. 2 ✓

**Q15** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 73% ಮತ್ತು 16% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 59% ಮತ್ತು 18% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 49% ಮತ್ತು 66% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 84%, 67% ಮತ್ತು 94% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. II

B. III

C. I

D. IV ✓

Blackbook Vocabulary — Now in the App! ▶ Download Now on Google Play

**Q16** Surface Area (TSA/LSA)

ಒಂದು ಘನದ ಒಟ್ಟು ಮೇಲ್ಮೈ ವಿಸ್ತೀರ್ಣವು 294 $cm^2$ ಇದೆ. ಅದರ ಒಂದು ಅಂಚನ್ನು ಕತ್ತರಿಸಿ ಒಂದು ಚಿಕ್ಕ ಘನವನ್ನು ಮಾಡಲಾಗುತ್ತದೆ, ಹೇಗೆಂದರೆ ಕತ್ತರಿಸಿರುವ ಚಿಕ್ಕ ಘನದ ಅಂಚು, ಮೊದಲು ಇದ್ದ ಮೂಲ ಘನದ ಅಂಚಿನ ಮೂರನೇ ಒಂದು ಭಾಗದಷ್ಟಿರುವಂತೆ ಕತ್ತರಿಸಲಾಗುತ್ತದೆ. ಹಾಗಾದರೆ ಉಳಿದಿರುವ ಘನದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. 306 cm2

B. 294 cm2 ✓

C. 282 cm2

D. 270 cm2

**Q17** Time-based Partnership

ಜತಿನ್ ಮತ್ತು ಕಿರಣ್ ಅವರು ಕ್ರಮವಾಗಿ ₹1,20,000 ಮತ್ತು ₹80,000 ಹೂಡಿಕೆ ಮಾಡುವ ಮೂಲಕ ಒಂದು ವ್ಯವಹಾರವನ್ನು ಪ್ರಾರಂಭಿಸುತ್ತಾರೆ. 8 ತಿಂಗಳ ನಂತರ, ಜತಿನ್ ಅವರು ₹20,000 ಹೂಡಿಕೆಯನ್ನು ಹಿಂತೆಗೆದುಕೊಳ್ಳುತ್ತಾರೆ. ವರ್ಷದ ಕೊನೆಯಲ್ಲಿ ಗಳಿಸಿದ ಒಟ್ಟು ಲಾಭವು ₹29,000 ಆಗಿದ್ದರೆ, ಕಿರಣ್ ಅವರ ಲಾಭದ ಪಾಲನ್ನು ಕಂಡುಹಿಡಿಯಿರಿ.

A. ₹18,000

B. ₹17,000

C. ₹14,000

D. ₹12,000 ✓

**Q18** Weighted Average

ಒಂದು ತರಗತಿಯ ಎಲ್ಲಾ ವಿದ್ಯಾರ್ಥಿಗಳ ಸರಾಸರಿ ತೂಕವು 36.5 kg ಆಗಿದೆ. ಆ ತರಗತಿಯ ಎಲ್ಲಾ ಹುಡುಗರ ಸರಾಸರಿ ತೂಕ 40 kg ಮತ್ತು ಎಲ್ಲಾ ಹುಡುಗಿಯರ ತೂಕ 32.3 kg ಆಗಿದೆ. ಆ ತರಗತಿಯಲ್ಲಿರುವ ಹುಡುಗರ ಸಂಖ್ಯೆ ಮತ್ತು ಹುಡುಗಿಯರ ಸಂಖ್ಯೆಯ ನಡುವಿನ ಅನುಪಾತ ಕಂಡುಹಿಡಿಯಿರಿ.

A. 5 : 6

B. 5 : 7

C. 6 : 5 ✓

D. 7 : 5

**Q19** Combined Work Rate

ಒಂದು ತರಗತಿಯಲ್ಲಿ, ಭಾನು ಒಂದು ಮನೆಕೆಲಸವನ್ನು 4 ದಿನಗಳಲ್ಲಿ ಮಾಡಬಲ್ಲಳು, ಜಯಾ ಈ ಕೆಲಸವನ್ನು 12 ದಿನಗಳಲ್ಲಿ ಮಾಡಬಲ್ಲಳು ಮತ್ತು ಮೌನಿಕಾ ಅದೇ ಕೆಲಸವನ್ನು 8 ದಿನಗಳಲ್ಲಿ ಮಾಡಬಲ್ಲಳು. ಮೂರು ಜನ ಒಟ್ಟಿಗೆ ಕೆಲಸ ಮಾಡಿದರೆ, ಅವರು ಕೆಲಸವನ್ನು ಪೂರ್ಣಗೊಳಿಸಲು ಎಷ್ಟು ದಿನಗಳನ್ನು ತೆಗೆದುಕೊಳ್ಳುತ್ತಾರೆ?

A. $2\frac{2}{11}$ ✓

B. $2\frac{9}{11}$

C. $2\frac{5}{11}$

D. $2\frac{1}{11}$

Blackbook Vocabulary — Now in the App! ▶ Download Now on Google Play

**Q20** Comparative Analysis

ಒಂದು ಶಾಲೆಯ 8ನೇ ತರಗತಿಯಲ್ಲಿ ಹುಡುಗರು ಮತ್ತು ಹುಡುಗಿಯರು ಐದು ವಿಷಯಗಳಲ್ಲಿ ಪಡೆದ ಸರಾಸರಿ ಅಂಕಗಳನ್ನು (100 ಕ್ಕೆ) ಕೆಳಗಿನ ಸ್ತಂಭ ನಕ್ಷೆಗಳು ತೋರಿಸುತ್ತವೆ.







ಹುಡುಗಿಯರು ಮತ್ತು ಹುಡುಗರ ಒಟ್ಟಾರೆ ಸರಾಸರಿ ಅಂಕಗಳಿಕೆಗಳ ನಡುವಿನ ವ್ಯತ್ಯಾಸವನ್ನು (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ) ಲೆಕ್ಕ ಹಾಕಿ. (Average Marks = ಸರಾಸರಿ ಅಂಕಗಳು, Boys = ಹುಡುಗರು Girls = ಹುಡುಗಿಯರು)

**A.** 5.8 ✓

**B.** 5.5

**C.** 5.4

**D.** 5.6

**Q21** Congruence & Similarity

Δ ABC ಯಲ್ಲಿ, DE || AC ಆಗಿದ್ದು, D ಮತ್ತು E ಗಳು ಕ್ರಮವಾಗಿ AB ಮತ್ತು BC ಬಾಹುಗಳಲ್ಲಿರುವ ಬಿಂದುಗಳಾಗಿವೆ. ಒಂದು ವೇಳೆ BD = 5 cm ಮತ್ತು AD = 14 cm ಆಗಿದ್ದರೆ, Δ BDE ಮತ್ತು ತ್ರಾಪಿಜ್ಯ ADEC ಯ ವಿಸ್ತೀರ್ಣಗಳ ನಡುವಿನ ಅನುಪಾತ ಎಷ್ಟು?

**A.** 19 : 12

**B.** 25 : 336 ✓

**C.** 21 : 23

**D.** 336 : 25

Blackbook Vocabulary — Now in the App! ▶ Download Now on Google Play
generated by rank.qmaths.in

**Q22** Index Simplification

ಸರಳೀಕರಿಸಿ:

$$\left(\frac{3^4 \times 3^{-2}}{3^{-1}}\right)^2 \div 3^5$$

A. 1

B. $\frac{2}{3}$

C. 3 ✓

D. $\frac{1}{3}$

**Q23** Pythagorean Identities

ಈ ಕೆಳಗಿನ ಉಕ್ತಿಯ ಮೌಲ್ಯವನ್ನು ಕಂಡುಹಿಡಿಯಿರಿ:

$$\tan A \left[\frac{\sec A + \tan A}{\operatorname{cosec} A - \cot A}\right]$$

A. $\frac{1 + \cos A}{1 - \sin A}$ ✓

B. $\frac{1 - \sin A}{1 + \cos A}$

C. $\frac{1 - \cos A}{1 + \sin A}$

D. $\frac{1 + \sin A}{1 - \cos A}$

**Q24** Surface Area (TSA/LSA)

ಒಂದು ಕೋಣೆಯ ನಾಲ್ಕು ಗೋಡೆಗಳ ವಿಸ್ತೀರ್ಣ 336 $m^2$ ಆಗಿದೆ. ಕೋಣೆಯ ಉದ್ದವು ಅದರ ಅಗಲದ ಮೂರು ಪಟ್ಟು ಇದೆ ಮತ್ತು ಕೋಣೆಯ ಎತ್ತರ 6 m ಆಗಿದೆ. ಹಾಗಾದರೆ ನೆಲದ ವಿಸ್ತೀರ್ಣ ಎಷ್ಟು?

A. $143 \text{ m}^2$

B. $150 \text{ m}^2$

C. $139 \text{ m}^2$

D. $147 \text{ m}^2$ ✓

**Q25** Trigonometric Identities

ಒಂದು ವೇಳೆ $\sec^2\alpha = \frac{4ab}{(a+b)^2}$ ಆಗಿದ್ದರೆ:

A. $a = -b$

B. $a = \frac{1}{b}$

C. $a = -\frac{1}{b}$

D. $a = b$ ✓

Blackbook Vocabulary — Now in the App! ▶ Download Now on Google Play

## Mathematics

25 Questions • Answer Key

**Q1** (a+b)^2, (a-b)^2

ಸರಳೀಕರಿಸಿ: $(a + b)^2 - (a - b)^2$

A. 2ab
B. $a^2 - b^2$
C. 4ab ✓
D. $a^2 + b^2$

**Q2** Annual Compounding

ಮಹೇಶ್ ಅವರು ವರ್ಷಕ್ಕೊಮ್ಮೆ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ವಾರ್ಷಿಕ 20% ಬಡ್ಡಿದರದಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ಠೇವಣಿ ಇಟ್ಟರು. 2 ವರ್ಷಗಳ ಕೊನೆಯಲ್ಲಿ, ಮಹೇಶ್ ಒಟ್ಟು ₹18,000 ಪಡೆದರು. ಹಾಗಾದರೆ ಮಹೇಶ್ ಠೇವಣಿ ಇಟ್ಟ ಹಣ ಎಷ್ಟು?

A. ₹12,500 ✓
B. ₹12,129
C. ₹12,800
D. ₹12,996

**Q3** Arithmetic Mean

ಕೆಳಗಿನ ದತ್ತಾಂಶದ ಸರಾಸರಿಯನ್ನು ಲೆಕ್ಕಹಾಕಿ.

163, 141, 155, 175, 186, 206

A. 173
B. 170
C. 172
D. 171 ✓

**Q4** Average Speed

ಒಂದು ಬಸ್ಸು A ಎಂಬ ನಗರದಿಂದ 210 km ಅಂತರದಲ್ಲಿರುವ B ಎಂಬ ನಗರಕ್ಕೆ ಚಲಿಸುತ್ತದೆ. ಕೊನೆಯ 90 km ಗಳಲ್ಲಿ, ಬಸ್ಸು ತನ್ನ ವೇಗವನ್ನು ಅದು ಪ್ರಯಾಣಿಸುತ್ತಿದ್ದ ವೇಗಕ್ಕಿಂತ 5 km/h ಹೆಚ್ಚಿಸುತ್ತದೆ. ಒಂದು ವೇಳೆ ಪ್ರಯಾಣದ ಸರಾಸರಿ ವೇಗವು ಗಂಟೆಗೆ 42 km ಆಗಿದ್ದರೆ, ಬಸ್ಸು ಪ್ರಯಾಣದ ಮೊದಲ ಭಾಗದಲ್ಲಿ ಪ್ರಯಾಣಿಸಿದ ವೇಗದಲ್ಲಿ ಸಂಪೂರ್ಣ ದೂರವನ್ನು ಪ್ರಯಾಣಿಸಿದರೆ ಪ್ರಯಾಣಕ್ಕೆ ತೆಗೆದುಕೊಂಡ ಒಟ್ಟು ಸಮಯವನ್ನು (ಗಂಟೆಗಳಲ್ಲಿ) ಕಂಡುಹಿಡಿಯಿರಿ.

A. 4.75
B. 5.25 ✓
C. 5.62
D. 4.67

**Q5** Base-Height Method

PQR ತ್ರಿಭುಜದಲ್ಲಿ, PQ ಮತ್ತು PR ಬಾಹುಗಳು ಕ್ರಮವಾಗಿ 26 cm ಮತ್ತು 17 cm ಉದ್ದಗಳಲ್ಲಿ ಸ್ಥಿರವಾಗಿರುತ್ತವೆ. S ಬಿಂದುವು QR ಬಾಹುವಿನಲ್ಲಿದ್ದು, ಇದರಿಂದ QS:SR = 3:5 ರ ಅನುಪಾತವಿರುತ್ತವೆ. PQS ತ್ರಿಭುಜದ ವಿಸ್ತೀರ್ಣವು 120 $cm^2$ ಆಗಿದೆ. ಹಾಗಾದರೆ PQR ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. 322.5 cm2
B. 315 cm2
C. 320 cm2 ✓
D. 308 cm2

**Q6** Cost with Overhead Expenses

ಅರವಿಂದ್ ಅವರು ಒಂದು ವಸ್ತುವನ್ನು ₹ x ಗೆ ಖರೀದಿಸಿದರು. ಅದನ್ನು 15% ನಷ್ಟದಲ್ಲಿ ಬಿರು ಅವರಿಗೆ ಮಾರಾಟ ಮಾಡಿದರು. ಬಿರು ಅವರು ಅದರ ಸಾಗಾಟಕ್ಕಾಗಿ ₹157 ಖರ್ಚು ಮಾಡಿದರು ಮತ್ತು ಅದನ್ನು 40% ಲಾಭಕ್ಕೆ ಮೀನು ಅವರಿಗೆ ಮಾರಾಟ ಮಾಡಿದರು. ಒಂದು ವೇಳೆ ಮೀನು ಅವರು ಅದನ್ನು ₹1505 ಕ್ಕೆ ಖರೀದಿಸಿದರೆ, x ನ ಮೌಲ್ಯ ಎಷ್ಟು?

A. 1,160
B. 1,060
C. 1,080 ✓
D. 1,180

**Q7** Dividing Quantity in Ratio

ಎರಡು ಸಂಖ್ಯೆಗಳ ನಡುವಿನ ಅನುಪಾತವು 2 : 5 ಆಗಿದೆ. ಅವುಗಳ ಮೊತ್ತವು 49 ಆಗಿದ್ದರೆ, ಆ ಎರಡು ಸಂಖ್ಯೆಗಳಲ್ಲಿ ದೊಡ್ಡದನ್ನು ಕಂಡುಹಿಡಿಯಿರಿ.

A. 14
B. 35 ✓
C. 42
D. 25

**Q8** Find SI

ವಾರ್ಷಿಕ 8% ಬಡ್ಡಿದರದಲ್ಲಿ ₹600 ಮೊತ್ತವನ್ನು 2.5 ವರ್ಷಗಳ ಅವಧಿಗೆ ಸಾಲವಾಗಿ ಪಡೆದರೆ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 120 ✓
B. 170
C. 100
D. 220

Blackbook Vocabulary — Now in the App! ► Download Now on Google Play

**Q9** Finding Value from Percentage

₹60,000 ಮಾಸಿಕ ಆದಾಯವನ್ನು ಹೊಂದಿರುವ ಒಂದು ಕುಟುಂಬವು ಈ ಮೊತ್ತದ 30% ಅನ್ನು ಆಹಾರಕ್ಕಾಗಿ ಖರ್ಚು ಮಾಡುತ್ತದೆ. ಈ ವೆಚ್ಚದ ಹಣಕಾಸಿನ ಮೌಲ್ಯ ಎಷ್ಟು?

- A. ₹18,000 ✓
- B. ₹12,000
- C. ₹15,000
- D. ₹10,000

**Q10** HCF/LCM Word Problems

12 m, 18 m, ಮತ್ತು 24 m ಉದ್ದದ ಮೂರು ಹಗ್ಗಗಳನ್ನು ಒಂದೇ ಉದ್ದದ ತುಂಡುಗಳಾಗಿ ಕತ್ತರಿಸಬೇಕು. ಆದರೆ ಯಾವುದೇ ಹಗ್ಗವನ್ನು ಬಳಸದೆ ಇರಬಾರದು. ಹಾಗಾದರೆ ಪ್ರತಿಯೊಂದು ಹಗ್ಗದ ತುಂಡಿನ ಗರಿಷ್ಠ ಸಂಭಾವ್ಯ ಉದ್ದ ಎಷ್ಟು (ಮೀಟರ್ ಗಳಲ್ಲಿ) ಇರಬೇಕು?

- A. 3
- B. 6 ✓
- C. 12
- D. 9

**Q11** Laws of Indices

ಒಂದು ವೇಳೆ $52^{0.21} = x$, $52^{0.18} = y$ ಮತ್ತು $x^z = y^{10}$ ಆಗಿದ್ದರೆ, z ನ ಮೌಲ್ಯವು ______ ಕ್ಕೆ ಸಮೀಪದಲ್ಲಿರುತ್ತದೆ.

- A. 6.58
- B. 8.57 ✓
- C. 9.66
- D. 7.97

**Q12** Median

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆಯು ಕ್ರಮವಾಗಿ 53.8 ಮತ್ತು 75.7 ಆಗಿರುತ್ತದೆ. ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ಆ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ.

- A. 60.5
- B. 61.2
- C. 61.1 ✓
- D. 60.8

**Q13** Men, Women & Children

5 ಪುರುಷರು ಮತ್ತು 15 ಮಹಿಳೆಯರು ಒಂದು ಕೆಲಸವನ್ನು 10 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಆದರೆ ಅದೇ ಕೆಲಸವನ್ನು 15 ಪುರುಷರು ಮತ್ತು 5 ಮಹಿಳೆಯರು 20 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಹಾಗಾದರೆ 40 ಮಹಿಳೆಯರು ಎಷ್ಟು ದಿನಗಳಲ್ಲಿ ಆ ಕೆಲಸವನ್ನು ಪೂರ್ಣಗೊಳಿಸಬಲ್ಲರು?

- A. 15 ದಿನ
- B. 4 ದಿನ ✓
- C. 30 ದಿನ
- D. 10 ದಿನ

**Q14** Percentage Increase/Decrease

ರಾಮನ್ ಅವರ ಆದಾಯವು ₹68,800 ಆಗಿದೆ. ಅವರು ತಮ್ಮ ಆದಾಯದ 18.5% ಅನ್ನು ಉಳಿತಾಯ ಮಾಡುತ್ತಾರೆ, ಒಂದು ವೇಳೆ ಅವರ ಆದಾಯವು 17% ಹೆಚ್ಚಾದರೆ ಮತ್ತು ಖರ್ಚು 25% ಹೆಚ್ಚಾದರೆ, ಅವರ ಉಳಿತಾಯವು _______ ಆಗುತ್ತದೆ.

- A. ₹2,322 ಕಡಿಮೆ ✓
- B. ₹2,325 ಹೆಚ್ಚಳ
- C. ₹2,325 ಕಡಿಮೆ
- D. ₹2,319 ಹೆಚ್ಚಳ

**Q15** Rules for 2,3,4,5,6

7-ಅಂಕಿಯ ಸಂಖ್ಯೆಯಾದ 86A238B ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

- A. 0 ✓
- B. 4
- C. 3
- D. 5

**Q16** SSS, SAS, ASA, AAS, RHS

LMN ಮತ್ತು OPQ ಎಂಬುವು ಎರಡು ಸರ್ವಸಮ ತ್ರಿಭುಜಗಳಾಗಿವೆ. ಒಂದು ವೇಳೆ ΔLMN ನ ವಿಸ್ತೀರ್ಣವು 74 $cm^2$ ಆಗಿದ್ದರೆ, ΔOPQ ನ ವಿಸ್ತೀರ್ಣ ಇದಾಗಿರುತ್ತದೆ:

- A. 148 cm2
- B. 18.5 cm2
- C. 74 cm2 ✓
- D. 37 cm2

Blackbook Vocabulary — Now in the App! ▶ Download Now on Google Play

**Q17** Simple Ratio Partnership

P, Q, ಮತ್ತು R ಎಂಬ ಮೂವರು ಒಟ್ಟಿಗೆ ವ್ಯವಹಾರವನ್ನು ಪ್ರಾರಂಭಿಸುತ್ತಾರೆ, ಅವರು 4:5:6 ಅನುಪಾತದಲ್ಲಿ ಒಂದು ಮೊತ್ತವನ್ನು ಹೂಡಿಕೆ ಮಾಡುತ್ತಾರೆ. ಒಟ್ಟು ಲಾಭವನ್ನು ಅದೇ ಅನುಪಾತದಲ್ಲಿ ಅವರ ನಡುವೆ ಹಂಚಿದರೆ ಮತ್ತು Q ಅವರು ₹15,000 ಪಡೆದರೆ, ಒಟ್ಟು ಲಾಭವನ್ನು ಕಂಡುಹಿಡಿಯಿರಿ?

A. ₹51,000

B. ₹60,000

C. ₹54,000

D. ₹45,000 ✓

**Q18** Successive Discount

ಒಂದು ಕುಕ್ಕರ್‌ನ ನಮೂದಿತ ಬೆಲೆಯು I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದೇ ಆಗಿದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, ಅಂಗಡಿ I ರಲ್ಲಿ 17% ಮತ್ತು 35% ಗಳ ಎರಡು ಸತತ ರಿಯಾಯಿತಿಗಳನ್ನು ನೀಡಲಾಗಿದೆ, ಅಂಗಡಿ II ರಲ್ಲಿ 99% ಮತ್ತು 23% ಗಳ ಸತತ ರಿಯಾಯಿತಿಗಳನ್ನು ನೀಡಲಾಗಿದೆ, ಅಂಗಡಿ III ರಲ್ಲಿ 31% ಮತ್ತು 98% ಗಳ ಸತತ ರಿಯಾಯಿತಿಗಳನ್ನು ನೀಡಲಾಗಿದೆ ಮತ್ತು ಅಂಗಡಿ IV ರಲ್ಲಿ 66%, 30% ಮತ್ತು 37% ಗಳ ಸತತ ರಿಯಾಯಿತಿಗಳನ್ನು ನೀಡಲಾಗಿದೆ. ಹಾಗಾದರೆ ಯಾವ ಅಂಗಡಿಯು ಅತಿ ಕಡಿಮೆ ಬೆಲೆಗೆ ಕುಕ್ಕರ್ ಅನ್ನು ಮಾರಾಟ ಮಾಡುತ್ತಿದೆ?

A. II ✓

B. III

C. I

D. IV

**Q19** Three Successive Changes

ಒಂದು ನಗರದಲ್ಲಿ 80,000 ಜನಸಂಖ್ಯೆ ಇದೆ. ಮೊದಲ ವರ್ಷದಲ್ಲಿ ಜನಸಂಖ್ಯೆಯು 10% ರಷ್ಟು ಹೆಚ್ಚಾಗುತ್ತದೆ, ಎರಡನೇ ವರ್ಷದಲ್ಲಿ ಜನಸಂಖ್ಯೆಯು 5% ರಷ್ಟು ಕಡಿಮೆಯಾಗುತ್ತದೆ, ಮತ್ತು ಮೂರನೇ ವರ್ಷದಲ್ಲಿ ಜನಸಂಖ್ಯೆಯು ಮತ್ತೆ 20% ರಷ್ಟು ಹೆಚ್ಚಾಗುತ್ತದೆ. ಹಾಗಾದರೆ ಆ ನಗರದ ಅಂತಿಮ ಜನಸಂಖ್ಯೆ ಎಷ್ಟು?

A. 1,10,320

B. 1,01,320

C. 1,07,320

D. 1,00,320 ✓

**Q20** Total Surface Area

ತ್ರಿಜ್ಯ 20 cm ಮತ್ತು ಎತ್ತರ 60 cm ಇರುವ ಸಿಲಿಂಡರ್‌ನ ಒಟ್ಟು ಮೇಲ್ಮೈ ವಿಸ್ತೀರ್ಣ ಮತ್ತು ಪಾರ್ಶ್ವ ಮೇಲ್ಮೈ ವಿಸ್ತೀರ್ಣದ ನಡುವಿನ ಅನುಪಾತ:

A. 3:2

B. 4:3 ✓

C. 2:3

D. 3:4

**Q21** Average Speed

ಸುಮಂತ್ ಅವರು ಒಂದು ನಿರ್ದಿಷ್ಟ ಸ್ಥಳದಿಂದ ಹೊರಟು, 29 km/hr ವೇಗದಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಾರೆ ಮತ್ತು ಅದೇ ಸ್ಥಾನಕ್ಕೆ ಮರಳಿ ಬರುವಾಗ 28 km/hr ವೇಗದಲ್ಲಿ ಸ್ಕೂಟರ್ ಸವಾರಿ ಮಾಡಿಕೊಂಡು ಬರುತ್ತಾರೆ. ಹಾಗಾದ್ರೆ, ಇಡೀ ಪ್ರಯಾಣದಲ್ಲಿನ ಸರಾಸರಿ ವೇಗವನ್ನು ಕಂಡುಹಿಡಿಯಿರಿ.

A. $29\frac{28}{57}$ km/hr

B. $27\frac{28}{57}$ km/hr

C. $26\frac{28}{57}$ km/hr

D. $28\frac{28}{57}$ km/hr ✓

Blackbook Vocabulary — Now in the App! ▶ Download Now on Google Play

**Q22** Calculation Based

ಈ ಕೆಳಗಿನ ಕೋಷ್ಟಕವು ಒಂದು ಪುಸ್ತಕದಂಗಡಿಯು ಮೂರು ತಿಂಗಳುಗಳಲ್ಲಿ ನಾಲ್ಕು ವಿಭಾಗಗಳಲ್ಲಿ ಮಾರಾಟ ಮಾಡಿದ ಪುಸ್ತಕಗಳ ಸಂಖ್ಯೆಯನ್ನು ಮತ್ತು ಪ್ರತಿ ಪುಸ್ತಕದ ಸರಾಸರಿ ಮಾರಾಟ ಬೆಲೆಯನ್ನು ತೋರಿಸುತ್ತದೆ.

| ತಿಂಗಳು | ಕಲ್ಪಿತ ಕಥೆ | ಕಲ್ಪಿತವಲ್ಲದ ಕಥೆ | ಮಕ್ಕಳ ಪುಸ್ತಕಗಳು | ಶೈಕ್ಷಣಿಕ | ಪ್ರತಿ ಪುಸ್ತಕದ ಸರಾಸರಿ ಮಾರಾಟ ಬೆಲೆ(₹ ಗಳಲ್ಲಿ) |
|---|---|---|---|---|---|
| ಜನವರಿ | 1,200 | 900 | 1,500 | 800 | 250 |
| ಫೆಬ್ರವರಿ | 1,400 | 1,000 | 1,600 | 900 | 260 |
| ಮಾರ್ಚ್ | 1,300 | 1,200 | 1,700 | 1,000 | 270 |

ಈ ಕೆಳಗಿನ ಯಾವ ತಿಂಗಳಲ್ಲಿ ಮಾರಾಟವಾದ ಮಕ್ಕಳ ಪುಸ್ತಕಗಳು ಮತ್ತು ಶೈಕ್ಷಣಿಕ ಪುಸ್ತಕಗಳ ಸಂಖ್ಯೆಗಳ ನಡುವಿನ ಅನುಪಾತವು ಅತ್ಯಂತ ಹೆಚ್ಚಾಗಿತ್ತು?

A. ಜನವರಿ ✓

B. ಮಾರ್ಚ್

C. ಎಲ್ಲಾ ತಿಂಗಳುಗಳಲ್ಲಿಯೂ ಒಂದೇ ರೀತಿ ಇತ್ತು

D. ಫೆಬ್ರುವರಿ

**Q23** Complementary Angle Values

$\left[\frac{\sin^2 25° + \sin^2 65°}{\cos^2 25° + \cos^2 65°} + \sin^2 57° + \cos 57° \sin 33°\right]$ ಯ ಮೌಲ್ಯ ಎಷ್ಟು?

A. 0

B. -1

C. 1

D. 2 ✓

**Q24** Reciprocal Relations

ಒಂದು ವೇಳೆ $\sin A = \frac{4}{5}$ ಆಗಿದ್ದು A ಒಂದು ಲಘುಕೋನ ಆಗಿದ್ದರೆ, $\sec A \times \sin A - \operatorname{cosec} A \times \cos A$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. 0

B. $\frac{3}{8}$

C. $\frac{7}{12}$ ✓

D. $\frac{5}{6}$

**Q25** Weighted Average

ರವಿ ಅವರು ಪ್ರತಿ kg ಗೆ ₹100 ರಂತೆ 2 kg ಸೇಬುಹಣ್ಣುಗಳನ್ನು ಮತ್ತು ಪ್ರತಿ kg ಗೆ ₹60 ರಂತೆ 3 kg ಬಾಳೆಹಣ್ಣುಗಳನ್ನು ಖರೀದಿಸುತ್ತಾರೆ. ಹಾಗಾದರೆ ಅವರು ಖರೀದಿಸಿದ ಹಣ್ಣುಗಳ ಪ್ರತಿ kg ಯ ಸರಾಸರಿ ಬೆಲೆ ಎಷ್ಟು?

A. ₹72

B. ₹80

C. ₹76 ✓

D. ₹70

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** Average Speed

ಒಬ್ಬ ಸೈಕಲ್ ಸವಾರನು 20 km/h ವೇಗದಲ್ಲಿ 60 km ದೂರವನ್ನು, 30 km/h ವೇಗದಲ್ಲಿ 90 km ದೂರವನ್ನು ಮತ್ತು 25 km/h ವೇಗದಲ್ಲಿ 150 km ದೂರವನ್ನು ಕ್ರಮಿಸುತ್ತಾನೆ.
ಹಾಗಾದರೆ ಸೈಕಲ್ ಸವಾರನ ಇಡೀ ಪ್ರಯಾಣದ ಸರಾಸರಿ ವೇಗವನ್ನು ಕಂಡುಹಿಡಿಯಿರಿ.

- A. 25 km/h ✓
- B. 24 km/h
- C. 26 km/h
- D. 27 km/h

**Q2** Basic Algebra

ಒಂದುವೇಳೆ x = 3 ಆಗಿದ್ದರೆ, $x^2 + 2x + 1$ ಎಂಬ ಗಣಿತೋಕ್ತಿಯ ಮೌಲ್ಯ ಎಷ್ಟು?

- A. 14
- B. 18
- C. 12
- D. 16 ✓

**Q3** Basic TSD

A ಅವರು 8 ಗಂಟೆಗಳಲ್ಲಿ 84 km ದೂರವನ್ನು ಕ್ರಮಿಸಿದರು. ಒಂದು ಭಾಗದಷ್ಟು ದೂರವನ್ನು 6 km/hr ವೇಗದಲ್ಲಿ ನಡೆದರು ಮತ್ತು ಉಳಿದ ದೂರವನ್ನು 12 km/hr ವೇಗದಲ್ಲಿ ಸೈಕಲ್ ಮೂಲಕ ಪಯಣಿಸಿದರು. ಹಾಗಾದರೆ ಅವರು ನಡೆದ ದೂರ ಎಷ್ಟು?

- A. 10 km
- B. 12 km ✓
- C. 11 km
- D. 15 km

**Q4** CP-SP Relation

ಒಬ್ಬ ಅಂಗಡಿಯವನು ₹1 ಕ್ಕೆ 22 ಚಾಕೊಲೇಟ್‌ಗಳನ್ನು ಮಾರಾಟ ಮಾಡಿ 50% ಲಾಭ ಗಳಿಸುತ್ತಾನೆ. ಹಾಗಾದರೆ ಅವನು ₹1 ಕ್ಕೆ ಎಷ್ಟು ಚಾಕೊಲೇಟ್‌ಗಳನ್ನು ಖರೀದಿಸಿದ್ದನು?

- A. 39
- B. 33 ✓
- C. 44
- D. 35

**Q5** Chord Properties

5 cm ತ್ರಿಜ್ಯವಿರುವ ವೃತ್ತದ ಮಧ್ಯದಿಂದ 4 cm ದೂರದಲ್ಲಿರುವ ಜ್ಯಾ ದ ಉದ್ದವನ್ನು ಕಂಡುಹಿಡಿಯಿರಿ.

- A. 8 cm
- B. 10 cm
- C. 6 cm ✓
- D. 3 cm

**Q6** Combined Work Rate

ರಿಷಿ ಅವರು ಒಂದು ಮರದ ವಾಡ್‌ರೋಬ್ ಅನ್ನು 2 ದಿನಗಳಲ್ಲಿ ತಯಾರಿಸಬಲ್ಲರು ಮತ್ತು ಶಾನ್ ಅವರು ಅದೇ ವಾಡ್‌ರೋಬ್ ಅನ್ನು 4 ದಿನಗಳಲ್ಲಿ ತಯಾರಿಸಬಲ್ಲರು. ಒಂದು ವೇಳೆ ಅವರು ಒಟ್ಟಿಗೆ ಕೆಲಸ ಮಾಡಿದರೆ, ಅದೇ ರೀತಿಯ 126 ವಾಡ್‌ರೋಬ್‌ಗಳನ್ನು ಅವರು ಎಷ್ಟು ದಿನಗಳಲ್ಲಿ ತಯಾರಿಸುತ್ತಾರೆ?

- A. 164
- B. 170
- C. 172
- D. 168 ✓

**Q7** Discount

ಒಬ್ಬ ಅಂಗಡಿಯವನು ಆಟಿಕೆಗಳ ಮೇಲೆ ಈ ಕೆಳಗಿನ ರಿಯಾಯಿತಿ ಯೋಜನೆಗಳನ್ನು ನೀಡುತ್ತಾನೆ. ಇವೆಲ್ಲವೂ ಒಂದೇ ನಮೂದಿತ ಬೆಲೆಯನ್ನು ಹೊಂದಿವೆ.

(A) ಖರೀದಿಸಿದ ಯಾವುದೇ ಆಟಿಕೆಗಳ ಮೇಲೆ 45% ಮತ್ತು 6% ಗಳ ಅನುಕ್ರಮ ರಿಯಾಯಿತಿ.
(B) ಖರೀದಿಸಿದ ಆಟಿಕೆಗಳ ಮೇಲೆ 17%, 49%, ಮತ್ತು 6% ಗಳ ಅನುಕ್ರಮ ರಿಯಾಯಿತಿ.
(C) ಮೊದಲ 8 ಆಟಿಕೆಗಳ ಮೇಲೆ 47% ಗಳ ರಿಯಾಯಿತಿ ಮತ್ತು ನಂತರ ಪ್ರತಿ ಆಟಿಕೆಯ ಮೇಲೆ 25% ಗಳ ರಿಯಾಯಿತಿ.
(D) 9 ಆಟಿಕೆಗಳನ್ನು ಖರೀದಿಸಿ ಮತ್ತು 8 ಆಟಿಕೆಗಳನ್ನು ಉಚಿತವಾಗಿ ಪಡೆಯಿರಿ.

ಒಬ್ಬ ಗ್ರಾಹಕ 9 ಆಟಿಕೆಗಳನ್ನು ಖರೀದಿಸಲು ಬಯಸುತ್ತಾರೆ. ಮೇಲಿನ ಯಾವ ಯೋಜನೆಯು ಅವರಿಗೆ ಅತ್ಯಂತ ಕಡಿಮೆ ಲಾಭದಾಯಕ?

- A. D
- B. B
- C. A
- D. C ✓

Blackbook Vocabulary — Now in the App! ► Download Now on Google Play

generated by rank.qmaths.in

**Q8** Find SI

A ಮತ್ತು B ಎಂಬ ಎರಡು ಬ್ಯಾಂಕುಗಳು ಕ್ರಮವಾಗಿ ವರ್ಷಕ್ಕೆ 3.5% ಮತ್ತು 8.5% ದರದಲ್ಲಿ ಸಾಲ ನೀಡುತ್ತವೆ. ತುಷಾರ್ ಅವರು ಪ್ರತಿ ಬ್ಯಾಂಕಿನಿಂದಲೂ ₹4,60,000 ಮೊತ್ತವನ್ನು ಸಾಲವಾಗಿ ಪಡೆದಿದ್ದಾರೆ. ಹಾಗಾದರೆ. 4 ವರ್ಷಗಳ ನಂತರ ತುಷಾರ್ ಈ ಎರಡು ಬ್ಯಾಂಕುಗಳಿಗೆ ಪಾವತಿಸಿದ ಸರಳ ಬಡ್ಡಿಯ ಮೊತ್ತಗಳ ನಡುವಿನ ಧನಾತ್ಮಕ ವ್ಯತ್ಯಾಸವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 93,500

B. 92,000 ✓

C. 93,000

D. 91,500

**Q9** Finding LCM

ಒಂದು ವೇಳೆ ಎರಡು ಸಂಖ್ಯೆಗಳ ಅನುಪಾತವು 4 : 9 ಆಗಿದ್ದರೆ, ಮತ್ತು ಅವುಗಳ **ಮ.ಸಾ.ಅ.** 34 ಆಗಿದ್ದರೆ, ಅವುಗಳ **ಲ.ಸಾ.ಅ.** ಎಷ್ಟು ಆಗಿರುತ್ತದೆ?

A. 1224 ✓

B. 1214

C. 1227

D. 1250

**Q10** Finding Ratio

ಒಬ್ಬ ಹಾಲು ವ್ಯಾಪಾರಿಯು ಲೀಟರ್ ಗೆ ₹0 ಬೆಲೆಯ ನೀರನ್ನು ಲೀಟರ್‌ಗೆ ₹20 ಬೆಲೆಯ ಹಾಲಿನೊಂದಿಗೆ ಬೆರೆಸುತ್ತಾನೆ. ಮಿಶ್ರಣವನ್ನು ಲೀಟರ್‌ಗೆ ₹16 ಕ್ಕೆ ಮಾರಾಟ ಮಾಡಿದರೆ ಮತ್ತು ವ್ಯವಹಾರದಲ್ಲಿ ಯಾವುದೇ ಲಾಭ ಅಥವಾ ನಷ್ಟವಾಗದಿದ್ದರೆ, ಮಿಶ್ರಣದಲ್ಲಿ ಹಾಲು ಮತ್ತು ನೀರಿನ ನಡುವಿನ ಅನುಪಾತವನ್ನು ಕಂಡುಹಿಡಿಯಿರಿ.

A. 3 : 1

B. 4 : 1 ✓

C. 5 : 1

D. 1 : 1

**Q11** Finding Value from Percentage

ಒಬ್ಬ ವ್ಯಕ್ತಿ ತನ್ನ ಮಾಸಿಕ ಸಂಬಳದ 45% ಅನ್ನು ಮನೆಗೆಲಸಕ್ಕೆ ಖರ್ಚು ಮಾಡುತ್ತಾನೆ, ಉಳಿದ 20% ಅನ್ನು ಸಾರಿಗೆಗೆ ಖರ್ಚು ಮಾಡುತ್ತಾನೆ ಮತ್ತು ಮಿಕ್ಕ ₹88,000 ಮೊತ್ತವನ್ನು ಉಳಿತಾಯ ಮಾಡುತ್ತಾನೆ. ಅವನ ಮಾಸಿಕ ಸಂಬಳ (₹ ನಲ್ಲಿ) ಎಷ್ಟು?

A. 2,00,000 ✓

B. 2,50,000

C. 2,22,500

D. 2,40,000

**Q12** Half-Yearly Compounding

₹30,000 ಮೊತ್ತವನ್ನು ವಾರ್ಷಿಕ 20% ದರದಲ್ಲಿ ಹೂಡಿಕೆ ಮಾಡಲಾಗುತ್ತದೆ. ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಮತ್ತು ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, 2 ವರ್ಷಗಳ ನಂತರ ಆಗುವ ಅಂತಿಮ ಮೊತ್ತಗಳಲ್ಲಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ.

A. ₹713

B. ₹720

C. ₹733

D. ₹723 ✓

**Q13** Mode

150 ವೀಕ್ಷಣೆಗಳ ಸರಾಸರಿ ಮತ್ತು ಮಧ್ಯಾಂಕವು ಕ್ರಮವಾಗಿ 70 ಮತ್ತು 74 ಆಗಿವೆ. ಅತ್ಯಂತ ದೊಡ್ಡ ವೀಕ್ಷಣೆಯ ಮೌಲ್ಯವು 125 ಆಗಿದೆ. ಆದರೆ ಅದು 125 ಅಲ್ಲ, 200 ಎಂದು ನಂತರ ತಿಳಿದುಬಂತು. ಹಾಗಾದರೆ ರೂಢಿಬೆಲೆಯ ಸರಿಯಾದ ಮೌಲ್ಯ ಎಷ್ಟು?

A. 84

B. 78

C. 81 ✓

D. 92

**Q14** Order of Operations

ಇದನ್ನು ಸರಳೀಕರಿಸಿ: 272 ÷ 17 × 1.5 + 13 − 5

A. 32 ✓

B. 33

C. 28

D. 29

Blackbook Vocabulary — Now in the App! ▸ Download Now on Google Play

generated by rank.qmaths.in

**Q15** Percentage Increase/Decrease

ಒಂದು ವಾಷಿಂಗ್ ಮಷಿನ್‌ನ ಬೆಲೆಯು ಒಂದು ಟಿವಿಯ ಬೆಲೆಗಿಂತ 23% ಕಡಿಮೆ ಇದೆ. ಒಂದುವೇಳೆ ವಾಷಿಂಗ್ ಮಷಿನ್‌ನ ಬೆಲೆಯು 73% ಹೆಚ್ಚಾದರೆ ಮತ್ತು ಟಿವಿಯ ಬೆಲೆಯು 54% ಕಡಿಮೆಯಾದರೆ, 6 ವಾಷಿಂಗ್ ಮಷಿನ್‌ಗಳು ಮತ್ತು 3 ಟಿವಿಗಳ ಒಟ್ಟು ಬೆಲೆಯಲ್ಲಿ ಉಂಟಾಗುವ ಶೇಕಡಾವಾರು ಬದಲಾವಣೆ ಎಷ್ಟು?

A. 26% ಇಳಿಕೆ

B. 20% ಹೆಚ್ಚಳ

C. 23% ಹೆಚ್ಚಳ ✓

D. 22% ಇಳಿಕೆ

**Q16** Pythagorean Identities

(1 + sec 15° + cot 75°)(1 – cosec 15° + tan 75°) ಇದರ ಮೌಲ್ಯ ಎಷ್ಟು?

A. −1

B. 1

C. 2 ✓

D. 0

**Q17** Quarterly Compounding

ತ್ರೈಮಾಸಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ₹2,50,000 ಮೇಲೆ 1 ವರ್ಷಕ್ಕೆ ವಾರ್ಷಿಕ 40% ದರದಲ್ಲಿ ಗಳಿಸಿದ ಚಕ್ರಬಡ್ಡಿ ಎಷ್ಟು?

A. ₹1,15,931

B. ₹1,16,416

C. ₹1,16,033

D. ₹1,16,025 ✓

**Q18** Replacement in Group

ಒಂದು ತರಗತಿಯ ಸಮೀಕ್ಷೆಯಲ್ಲಿ, 36 ವಿದ್ಯಾರ್ಥಿಗಳ ಸರಾಸರಿ ತೂಕವು 50 kg ಎಂದು ದಾಖಲಿಸಲಾಗಿದೆ. ನಂತರ, ಒಬ್ಬ ವಿದ್ಯಾರ್ಥಿಯ ತೂಕವನ್ನು 37 kg ಬದಲಿಗೆ 73 kg ಎಂದು ತಪ್ಪಾಗಿ ನಮೂದಿಸಿರುವುದು ಕಂಡುಬಂದಿದೆ. ಹಾಗಾದರೆ ತರಗತಿಯ ಸರಿಯಾದ ಸರಾಸರಿ ತೂಕ ಎಷ್ಟು?

A. 49 kg ✓

B. 50 kg

C. 47 kg

D. 48 kg

**Q19** Surface Area (TSA/LSA)

ಬಾಹು 36 cm ಇರುವ ಒಂದು ಘನದ ಒಟ್ಟು ಮೇಲ್ಮೈ ವಿಸ್ತೀರ್ಣ ಎಷ್ಟಾಗುತ್ತದೆ?

A. 7734 cm2

B. 7776 cm2 ✓

C. 7868 cm2

D. 7826 cm2

**Q20** Time-based Partnership

ದೀಪಕ್ ಮತ್ತು ಇಶಾ ಅವರು ಕ್ರಮವಾಗಿ ₹40,000 ಮತ್ತು ₹60,000 ಗಳನ್ನು ಒಂದು ಪಾಲುದಾರಿಕೆಯಲ್ಲಿ ಹೂಡಿಕೆ ಮಾಡುತ್ತಾರೆ. ದೀಪಕ್ ಅವರು 6 ತಿಂಗಳ ನಂತರ ತಮ್ಮ ಎಲ್ಲಾ ಹಣವನ್ನು ಹಿಂಪಡೆಯುತ್ತಾರೆ ಮತ್ತು ಇಶಾ ಅವರು ತಮ್ಮ ಹಣವನ್ನು ಇಡೀ ವರ್ಷಕ್ಕೆ ಹೂಡಿಕೆ ಮಾಡುತ್ತಾರೆ. ಒಂದು ವೇಳೆ ವರ್ಷದ ಕೊನೆಯಲ್ಲಿ ಬರುವ ಒಟ್ಟು ಲಾಭವು ₹22,000 ಆಗಿದ್ದರೆ, ಲಾಭದಲ್ಲಿ ದೀಪಕ್ ಅವರ ಪಾಲನ್ನು ಕಂಡುಹಿಡಿಯಿರಿ.

A. ₹5,500 ✓

B. ₹7,200

C. ₹6,500

D. ₹8,000

**Q21** Basic Ratio

ಒಂದು ವೇಳೆ, $A:B = 4:5$ ಮತ್ತು $B:C = 7:6$ ಆಗಿದ್ದರೆ, $(2A + 3C):(4A - 3C)$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. 63:10

B. 48:13

C. 73:11 ✓

D. 15:7

Blackbook Vocabulary — Now in the App! ▶ Download Now on Google Play

generated by rank.qmaths.in

**Q22** Comparative Analysis

ಈ ಕೆಳಗಿನ ಸ್ತಂಭಾನಕ್ಷೆಯು 5 ವರ್ಷಗಳ ಅವಧಿಯಲ್ಲಿ ಮೂರು ತಂಪು ಪಾನೀಯಗಳ (ಸಾವಿರ ಗಳಲ್ಲಿ) ಮಾರಾಟವನ್ನು ತೋರಿಸುತ್ತದೆ. ನಕ್ಷೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ.




(sale of three cold drinks (in thousands) over 5 years in a city = ಒಂದು ನಗರದಲ್ಲಿ 5 ವರ್ಷಗಳಲ್ಲಿ ಮೂರು ತಂಪು ಪಾನೀಯಗಳ ಮಾರಾಟ (ಸಾವಿರಾರುಗಳಲ್ಲಿ))

ಕೊಟ್ಟಿರುವ ಅವಧಿಯಲ್ಲಿ ಯಾವುದೇ ತಂಪು ಪಾನೀಯದ ಗರಿಷ್ಠ ಸರಾಸರಿ ವಾರ್ಷಿಕ ಮಾರಾಟವನ್ನು ಕಂಡುಹಿಡಿಯಿರಿ.

- **A.** 28,000 ✓
- **B.** 32,000
- **C.** 26,000
- **D.** 24,000

**Q23** Surds

ಒಂದು ವೇಳೆ $\sqrt{\sqrt{x+3}} = 2$ ಆಗಿದ್ದರೆ, x ನ ಮೌಲ್ಯ ಎಷ್ಟು?

- **A.** 13 ✓
- **B.** 9
- **C.** 14
- **D.** 8

**Q24** Trapezium

ತ್ರಾಪಿಜ್ಯ ಆಕಾರದಲ್ಲಿರುವ ಒಂದು ಜಮೀನಿನ ವಿಸ್ತೀರ್ಣ 2937.6 $m^2$ ಆಗಿದೆ. ಅದರ ಸಮಾನಾಂತರ ಬಾಹುಗಳ ನಡುವಿನ ಲಂಬರೇಖೆಯ ಅಂತರ 14.4 m ಆಗಿದೆ. ಒಂದು ವೇಳೆ ಸಮಾನಾಂತರ ಬಾಹುಗಳ ಅನುಪಾತ $\frac{7}{12} : \frac{4}{15}$ ಆಗಿದ್ದರೆ, ಉದ್ದದ ಸಮಾನಾಂತರ ಬಾಹುವಿನ ಉದ್ದ ಇಷ್ಟಿರುತ್ತದೆ:

- **A.** 140 m
- **B.** 175 m
- **C.** 315 m
- **D.** 280 m ✓

Blackbook Vocabulary — Now in the App! ► Download Now on Google Play

**Q25** cosec^2 - cot^2 = 1

ಒಂದು ವೇಳೆ $\operatorname{cosec}\alpha + \cot\alpha = 4$ ಆಗಿದ್ದರೆ, $\cos\alpha$ ದ ಮೌಲವನ್ನು ಕಂಡುಹಿಡಿಯಿರಿ:

A. $\frac{8}{17}$

B. $\frac{4}{17}$

C. $\frac{12}{17}$

D. $\frac{15}{17}$ ✓

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** (a+b)^2, (a-b)^2

$(x + 3)^2$ _______ಗೆ ಸಮನಾಗಿರುತ್ತದೆ.

- A. $x^2 + 6x + 9$ ✓
- B. $x^2 + 6x + 3$
- C. $x^2 + 3x + 9$
- D. $x^2 + 9x + 6$

**Q2** 3-Year Difference

₹2,000 ಮೊತ್ತವನ್ನು ವಾರ್ಷಿಕ 5% ದರದಲ್ಲಿ 3 ವರ್ಷಗಳ ಅವಧಿಗೆ ಹೂಡಿಕೆ ಮಾಡಲಾಗುತ್ತದೆ. ಒಂದುವೇಳೆ ಚಕ್ರಬಡ್ಡಿಯನ್ನು ವರ್ಷಕ್ಕೊಮ್ಮೆ ಲೆಕ್ಕ ಹಾಕಿದರೆ, ಚಕ್ರಬಡ್ಡಿ ಮತ್ತು ಸರಳ ಬಡ್ಡಿಗಳ ನಡುವಿನ ವ್ಯತ್ಯಾಸವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 15.25 ✓
- B. 10.25
- C. 5.25
- D. 20.25

**Q3** Basic Time & Work

30 ವಿದ್ಯಾರ್ಥಿಗಳು ದಿನಕ್ಕೆ 4 ಗಂಟೆಗಳ ಕಾಲ ದುಡಿದು ಒಂದು ಕೆಲಸವನ್ನು 10 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಹಾಗಾದರೆ 80 ವಿದ್ಯಾರ್ಥಿಗಳು ದಿನಕ್ಕೆ 3 ಗಂಟೆಗಳ ಕಾಲ ದುಡಿದು ಎಷ್ಟು ದಿನಗಳಲ್ಲಿ ಅದೇ ಕೆಲಸವನ್ನು ಪೂರ್ಣಗೊಳಿಸಬಲ್ಲರು?

- A. 4 ದಿನಗಳು
- B. 6 ದಿನಗಳು
- C. 5 ದಿನಗಳು ✓
- D. 8 ದಿನಗಳು

**Q4** Building/Tower Problems

75 m ಎತ್ತರದ ಲಂಬ ಗೋಪುರದ ತುದಿಯಿಂದ ಒಂದು ಕಟ್ಟಡದ ಪಾದದ ಅವನತ ಕೋನವು 60° ಆಗಿದ್ದರೆ ಕಟ್ಟಡದ ಮೇಲ್ಭಾಗದ ಅವನತ ಕೋನವು 30° ಆಗಿದೆ. ಗೋಪುರ ಮತ್ತು ಕಟ್ಟಡದ ಎತ್ತರಗಳ ಸರಾಸರಿಯು ಕಂಬದ ಎತ್ತರಕ್ಕೆ ಸಮನಾಗಿದ್ದರೆ, ಕಂಬದ ಎತ್ತರ ಎಷ್ಟು?

- A. 55.5 m
- B. 60 m
- C. 62.5 m ✓
- D. 65 m

**Q5** Divisibility Rules

8-ಅಂಕಿಯ ಸಂಖ್ಯೆಯಾದ 109A7760 ಅನ್ನು 16 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

- A. 0 ✓
- B. 5
- C. 4
- D. 2

**Q6** Find SI

ಪ್ರತಿ ತಿಂಗಳಿಗೆ 6% ಬಡ್ಡಿದರದಲ್ಲಿ ₹1,200 ರ ಮೇಲೆ 12 ತಿಂಗಳಿಗೆ ಪಡೆಯುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 92
- B. 144
- C. 72
- D. 864 ✓

**Q7** Finding Value from Percentage

ಒಂದು ಸಂಖ್ಯೆಯಿಂದ 36 ಅನ್ನು ಕಳೆದರೆ, ಅದು ಮೂಲ ಸಂಖ್ಯೆಯ 90% ಮೌಲ್ಯದಷ್ಟು ಇಳಿಕೆಯಾಗುತ್ತದೆ. ಹಾಗಾದರೆ ಆ ಸಂಖ್ಯೆ ಎಷ್ಟು?

- A. 480
- B. 360 ✓
- C. 840
- D. 630

**Q8** HCF/LCM Word Problems

ಎರಡು ಗಂಟೆಗಳು ಕ್ರಮವಾಗಿ 9 ನಿಮಿಷ ಮತ್ತು 10 ನಿಮಿಷಗಳ ಮಧ್ಯಂತರದಲ್ಲಿ ಮೊಳಗುತ್ತವೆ. ಒಟ್ಟಿಗೆ ಅವು 8:00 AM ಗೆ ಮೊಳಗಿದರೆ, ಎಷ್ಟು ನಿಮಿಷಗಳ ನಂತರ ಅವು ಮತ್ತೆ ಒಟ್ಟಿಗೆ ಮೊಳಗುತ್ತವೆ?

- A. 60 ನಿಮಿಷಗಳು
- B. 90 ನಿಮಿಷಗಳು ✓
- C. 45 ನಿಮಿಷಗಳು
- D. 100 ನಿಮಿಷಗಳು

Blackbook Vocabulary — Now in the App! ► Download Now on Google Play

**Q9** Half-Yearly Compounding

ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ₹1800 ಮೊತ್ತವನ್ನು ವಾರ್ಷಿಕ 20% ಚಕ್ರಬಡ್ಡಿಯ ದರದಲ್ಲಿ 1 ವರ್ಷದ ಅವಧಿಗೆ ಹೂಡಿಕೆ ಮಾಡಿದರೆ ಹೂಡಿಕೆ ಮಾಡಿದ ಮೊತ್ತ ಎಷ್ಟು ಆಗುತ್ತದೆ?

- A. ₹3012
- B. ₹1974
- C. ₹2178 ✓
- D. ₹2659

**Q10** Heron's Formula

13 cm, 14 cm ಮತ್ತು 15 cm ಉದ್ದದ ಬಾಹುಗಳನ್ನು ಹೊಂದಿರುವ ಒಂದು ತ್ರಿಭುಜದ ವಿಸ್ತೀರ್ಣ ಎಷ್ಟಿರುತ್ತದೆ?

- A. 94 $cm^2$
- B. 84 $cm^2$ ✓
- C. 114 $cm^2$
- D. 104 $cm^2$

**Q11** MP with Discount and Profit

ಅಂಗಡಿಯವನು ಒಂದು ವಸ್ತುವಿನ ಬೆಲೆಯನ್ನು ಅಸಲು ಬೆಲೆಯ ಮೇಲೆ 20% ಹೆಚ್ಚಿಸಿ ನಮೂದಿಸಿದನು ಮತ್ತು ನಂತರ ನಮೂದಿತ ಬೆಲೆಯ ಮೇಲೆ 15% ರಿಯಾಯಿತಿ ನೀಡಿದನು. ಹಾಗಾದರೆ, ಒಟ್ಟಾರೆ ಶೇಕಡಾವಾರು ಲಾಭ ಅಥವಾ ನಷ್ಟ ಎಷ್ಟು?

- A. 4% ನಷ್ಟ
- B. 1% ನಷ್ಟ
- C. 4% ಲಾಭ
- D. 2% ಲಾಭ ✓

**Q12** Median

ಒಂದು ದತ್ತಾಂಶ ಗಣದ ಸರಾಸರಿ ಮತ್ತು ರೂಢಿಬೆಲೆಯು ಕ್ರಮವಾಗಿ 44.4 ಮತ್ತು 49.7 ಆಗಿವೆ. ಪ್ರಾಯೋಗಿಕ ಸೂತ್ರವನ್ನು ಬಳಸಿಕೊಂಡು, ಆ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ. (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

- A. 47.8
- B. 47.7
- C. 47.4
- D. 46.2 ✓

**Q13** Percentage Increase/Decrease

ಸುಧಾ ಅವರ ಖರ್ಚು ಅವರ ಉಳಿತಾಯಕ್ಕಿಂತ 100% ಹೆಚ್ಚಾಗಿದೆ. ಒಂದು ವೇಳೆ ಅವರ ಖರ್ಚು 2% ಕಡಿಮೆಯಾದರೆ ಮತ್ತು ಉಳಿತಾಯವು 22% ಹೆಚ್ಚಾದರೆ, ಅವರ ಆದಾಯವು ಶೇಕಡಾ ಎಷ್ಟು ಹೆಚ್ಚಾಗುತ್ತದೆ?

- A. 3%
- B. 6% ✓
- C. 2%
- D. 1%

**Q14** Relative Speed

ಬಸ್ಸುಗಳು ಒಂದು ಡಿಪೋದಿಂದ ಪ್ರತಿ 15 ನಿಮಿಷಗಳಿಗೊಮ್ಮೆ ಹೊರಟು ನೇರ ಹೆದ್ದಾರಿಯಲ್ಲಿ 16 km/h ಸ್ಥಿರ ವೇಗದಲ್ಲಿ ಓಡುತ್ತವೆ. ಒಬ್ಬ ಸೈಕಲ್ ಸವಾರನು ಅದೇ ಹೆದ್ದಾರಿಯಲ್ಲಿ ಎದುರು ದಿಕ್ಕಿನಿಂದ ಡಿಪೋದ ಕಡೆಗೆ ಸವಾರಿ ಮಾಡುತ್ತಿದ್ದಾನೆ. ಬಸ್ಸುಗಳು 12 ನಿಮಿಷಗಳ ನಿಯಮಿತ ಅಂತರದಲ್ಲಿ ಅವನನ್ನು ದಾಟುವುದನ್ನು ಅವನು ಗಮನಿಸುತ್ತಾನೆ. ಬಸ್ಸು ಮತ್ತು ಸವಾರ ಇಬ್ಬರೂ ಒಂದೇ ರೀತಿಯ ವೇಗವನ್ನು ಕಾಯ್ದುಕೊಂಡಿದ್ದರೆ, ಸೈಕಲ್ ಸವಾರನ ವೇಗ (km/h ಗಳಲ್ಲಿ) ಎಷ್ಟು?

- A. 6
- B. 4 ✓
- C. 5
- D. 7

**Q15** Simple Mean

ಒಂದು ವಾರದ ಮೊದಲ 3 ದಿನಗಳ ಸರಾಸರಿ ತಾಪಮಾನ $36^{0}$ C ಆಗಿತ್ತು ಮತ್ತು ಈ ವಾರದ ಸರಾಸರಿ ತಾಪಮಾನ $35^{0}$ C ಯಷ್ಟಿದೆ. ಹಾಗಾದರೆ ಈ ವಾರದ ಕೊನೆಯ 4 ದಿನಗಳ ಸರಾಸರಿ ತಾಪಮಾನ ಇಷ್ಟಿತ್ತು:

- A. 34oC
- B. 35.5oC
- C. 34.25oC ✓
- D. 35oC

**Q16** Simple Ratio Partnership

ವರ್ಷದ ಆರಂಭದಲ್ಲಿ, ಒಂದು ವ್ಯಾಪಾರದಲ್ಲಿ A ಅವರು ₹12,000 ಹೂಡಿಕೆ ಮಾಡಿದರು ಮತ್ತು B ಅವರು ₹18,000 ಹೂಡಿಕೆ ಮಾಡಿದರು. ವರ್ಷದ ಕೊನೆಗೆ, ಗಳಿಸಿದ ಲಾಭವು ₹15,000 ಆಗಿದ್ದರೆ, ಲಾಭದಲ್ಲಿ B ಅವರ ಪಾಲು (₹ ಗಳಲ್ಲಿ) ಎಷ್ಟು?

- A. 8,000
- B. 9,000 ✓
- C. 6,000
- D. 7,000

Blackbook Vocabulary — Now in the App! ► Download Now on Google Play

generated by rank.qmaths.in

**Q17** Simultaneous Fill & Empty

ಒಂದು ನಲ್ಲಿಯು ಒಂದು ತೊಟ್ಟಿಯನ್ನು 10 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು ಇನ್ನೊಂದು ನಲ್ಲಿಯು ಅದನ್ನು 20 ಗಂಟೆಗಳಲ್ಲಿ ಖಾಲಿ ಮಾಡಬಲ್ಲದು. ಒಂದು ವೇಳೆ ಎರಡೂ ನಲ್ಲಿಗಳನ್ನು ತೆರೆದರೆ, ತೊಟ್ಟಿಯು ತುಂಬಲು ಎಷ್ಟು ಸಮಯ (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತದೆ?

- **A.** 20 ಗಂಟೆಗಳು ✓
- **B.** 30 ಗಂಟೆಗಳು
- **C.** 15 ಗಂಟೆಗಳು
- **D.** 18 ಗಂಟೆಗಳು

**Q18** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆ ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 85% ಮತ್ತು 18% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 84% ಮತ್ತು 34% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 52% ಮತ್ತು 11% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 84%, 31% ಮತ್ತು 94% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿ ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- **A.** I
- **B.** IV ✓
- **C.** III
- **D.** II

**Q19** Two Trains Crossing

ಎರಡು ರೈಲುಗಳು ಎರಡು ಸಮಾಂತರವಾದ ಹಳಿಗಳ ಮೇಲೆ ಚಲಿಸುತ್ತಾ ಪರಸ್ಪರ ಹತ್ತಿರಕ್ಕೆ ಬರುತ್ತಿವೆ. ಮೊದಲ ರೈಲು 430 ಮೀಟರ್ ಉದ್ದವಿದ್ದು 120 km/h ವೇಗದಲ್ಲಿ ಚಲಿಸುತ್ತಿದೆ. ಎರಡನೇ ರೈಲು 570 ಮೀಟರ್ ಉದ್ದವಿದ್ದು 85 km/h ವೇಗದಲ್ಲಿ ಚಲಿಸುತ್ತಿದೆ. ಈ ಎರಡು ರೈಲುಗಳು ಚಲಿಸಲು ಪ್ರಾರಂಭಿಸಿದಾಗ ಅವುಗಳ ನಡುವಿನ ಅಂತರ 20 km ಆಗಿತ್ತು. ಹಾಗಾದರೆ ಈ ಎರಡು ರೈಲುಗಳು ಪರಸ್ಪರ ಸಂಪೂರ್ಣವಾಗಿ ದಾಟಿ ಹೋಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ? (ಉತ್ತರವನ್ನು ಸಮೀಪದ ಸೆಕೆಂಡಿಗೆ ಸೀಮಿತಗೊಳಿಸಿದೆ)

- **A.** 393 ಸೆಕೆಂಡುಗಳು
- **B.** 343 ಸೆಕೆಂಡುಗಳು
- **C.** 369 ಸೆಕೆಂಡುಗಳು ✓
- **D.** 389 ಸೆಕೆಂಡುಗಳು

**Q20** Ungrouped Data Median

ಒಂದು ಪರೀಕ್ಷೆಯಲ್ಲಿ ಈ ಕೆಳಗಿನ ಅಂಕಗಳನ್ನು ದಾಖಲಿಸಲಾಗಿದೆ:
70, 85, 90, 90, 95, 100.
ಒಂದು ವೇಳೆ ಅತ್ಯಧಿಕ ಅಂಕವನ್ನು (100) ತೆಗೆದುಹಾಕಿದರೆ, ಹೊಸ ಮಧ್ಯಾಂಕ ಎಷ್ಟಾಗುತ್ತದೆ?

- **A.** 70
- **B.** 95
- **C.** 85
- **D.** 90 ✓

**Q21** Building/Tower Problems

ಗೋಪುರದ ಎದುರು ಬದಿಗಳಲ್ಲಿರುವ ಎರಡು ಬಿಂದುಗಳಿಂದ ಗೋಪುರದ ಮೇಲ್ಭಾಗದ ಉನ್ನತಕೋನಗಳು ಕ್ರಮವಾಗಿ 30° ಮತ್ತು 60° ಆಗಿರುತ್ತದೆ. ಎರಡು ಬಿಂದುಗಳ ನಡುವಿನ ಅಂತರವು 54 ಮೀಟರ್ ಆಗಿದ್ದರೆ, ಆ ಗೋಪುರದ ಎತ್ತರವನ್ನು ಕಂಡುಹಿಡಿಯಿರಿ.

- **A.** $15.8\sqrt{3}$ m
- **B.** $12.4\sqrt{3}$ m
- **C.** $13.5\sqrt{3}$ m ✓
- **D.** $14.6\sqrt{3}$ m

Blackbook Vocabulary — Now in the App! ► Download Now on Google Play

generated by rank.qmaths.in

**Q22** Comparative Trend

ಈ ಕೆಳಗೆ ನೀಡಿರುವ ರೇಖಾ ನಕ್ಷೆಯು 2018 ರ ಐದು ಬೇರೆ ಬೇರೆ ತಿಂಗಳುಗಳಲ್ಲಿ A ಮತ್ತು B ಎಂಬ ಎರಡು ನಗರಗಳಲ್ಲಿ ಪ್ರವಾಸಿಗರ ಸಂಖ್ಯೆಯನ್ನು (ನೂರುಗಳಲ್ಲಿ) ತೋರಿಸುತ್ತದೆ.

ರೇಖಾ ನಕ್ಷೆಯನ್ನು ಅಧ್ಯಯನ ಮಾಡಿ ಮತ್ತು ಆನಂತರ ನೀಡಲಾದ ಪ್ರಶ್ನೆಗೆ ಉತ್ತರಿಸಿ.




| | Jan | Feb | Mar | Apr | May |
|---|---|---|---|---|---|
| City A | 320 | 300 | 250 | 240 | 200 |
| City B | 140 | 220 | 160 | 280 | 300 |

ಸೂಚನೆ : (Number of tourists (in hundred) = ಪ್ರವಾಸಿಗರ ಸಂಖ್ಯೆ (ನೂರು ಗಳಲ್ಲಿ), Jan = ಜನವರಿ : Feb = ಫೆಬ್ರವರಿ : Mar = ಮಾರ್ಚ್ : Apr = ಏಪ್ರಿಲ್ : May = ಮೇ : City = ನಗರ)
ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ A ನಗರದಲ್ಲಿನ ಪ್ರವಾಸಿಗರ ಒಟ್ಟು ಸಂಖ್ಯೆ ಮತ್ತು ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ B ನಗರದಲ್ಲಿನ ಪ್ರವಾಸಿಗರ ಒಟ್ಟು ಸಂಖ್ಯೆಯ ಅನುಪಾತ ಎಷ್ಟು?

A. 38 : 47

B. 71 : 80

C. 59 : 65

D. 55 : 38 ✓

**Q23** Proportion

ಮೂರು ಸಂಖ್ಯೆಗಳಿಗೆ ನಾಲ್ಕನೇ ಸಮಾನುಪಾತ 36 ಆಗಿದೆ. ಮೊದಲ ಎರಡು ಸಂಖ್ಯೆಗಳು 8 ಮತ್ತು 12 ಆಗಿವೆ. ಹಾಗಾದರೆ ಮೂರನೇ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 24 ✓

B. 28

C. 21

D. 18

**Q24** Sector Area & Arc Length

ಒಂದು ವೃತ್ತಖಂಡದ ತ್ರಿಜ್ಯ ಮತ್ತು ವಿಸ್ತೀರ್ಣವು ಕ್ರಮವಾಗಿ 54 cm ಮತ್ತು 405 π $cm^2$ ಇವೆ. ಹಾಗಾದರೆ ವೃತ್ತಖಂಡಕ್ಕೆ ಅನುರೂಪವಾದ ಕಂಸದ ಉದ್ದ ಎಷ್ಟು?

A. 876π cm

B. 15π cm ✓

C. 745π cm

D. 810π cm

Blackbook Vocabulary — Now in the App! ▶ Download Now on Google Play

**Q25** Volume

6 m ಉದ್ದ, 5 m ಎತ್ತರ ಮತ್ತು $\frac{1}{2}$ m ದಪ್ಪವಿರುವ ಗೋಡೆಯನ್ನು ನಿರ್ಮಿಸಲು ಪ್ರತಿಯೊಂದೂ P cm ×12.5 cm × 7.5 cm ಅಳತೆಯ 7600 ಇಟ್ಟಿಗೆಗಳ ಅಗತ್ಯವಿದೆ. ಒಂದು ವೇಳೆ ಸಿಮೆಂಟ್ ಮತ್ತು ಮರಳಿನ ಮಿಶ್ರಣವು ಗೋಡೆಯ ಘನಫಲದ $\frac{1}{20}$ ನೇ ಭಾಗವನ್ನು ಆವರಿಸಿಕೊಂಡರೆ, P ಯ ಮೌಲ್ಯ ಇದಾಗಿರುತ್ತದೆ:

- **A.** 25
- **B.** 22.5
- **C.** 27.5
- **D.** 20 ✓

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** (a+b)^2, (a-b)^2

ಈ ಗಣಿತೋಕ್ತಿಯನ್ನು ಸರಳೀಕರಿಸಿ: $(x + 3)^2 - x^2 - 9 - 6x$

- A. 0 ✓
- B. 6x
- C. 9
- D. 3x

**Q2** Annual Compounding

ರಾಧಿಕಾ ಅವರು ₹5,800 ಮೊತ್ತವನ್ನು ವಾರ್ಷಿಕ ಚಕ್ರಬಡ್ಡಿ ದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಿದರು. ಒಂದುವೇಳೆ 2 ವರ್ಷಗಳ ಕೊನೆಯಲ್ಲಿ ಗಳಿಸಿದ ಚಕ್ರಬಡ್ಡಿಯು ₹594.50 ಆದರೆ, ವಾರ್ಷಿಕ ಬಡ್ಡಿ ದರವನ್ನು ಕಂಡುಹಿಡಿಯಿರಿ.

- A. 4%
- B. 6.3%
- C. 5.6%
- D. 5% ✓

**Q3** Arithmetic Mean

ಈ ಕೆಳಗಿನ ದತ್ತಾಂಶದ ಸರಾಸರಿಯನ್ನು ಕಂಡುಹಿಡಿಯಿರಿ.

163, 141, 155, 175, 186

- A. 166
- B. 162
- C. 164 ✓
- D. 160

**Q4** Crossing Bridge/Platform

63 km/h ವೇಗದಲ್ಲಿ ಚಲಿಸುವ ಒಂದು ರೈಲು ಒಂದು ಪ್ಲಾಟ್‌ಫಾರ್ಮ್ ಅನ್ನು 30 ಸೆಕೆಂಡುಗಳಲ್ಲಿ ದಾಟುತ್ತದೆ. ನಂತರ ಆ ರೈಲು ತಾನು ಹೋಗುತ್ತಿರುವ ದಿಕ್ಕಿನಲ್ಲಿಯೇ 9 km/h ವೇಗದಲ್ಲಿ ಸೈಕಲ್ ತುಳಿಯುತ್ತಾ ಹೋಗುತ್ತಿರುವ ಒಬ್ಬ ವ್ಯಕ್ತಿಯನ್ನು 18 ಸೆಕೆಂಡುಗಳಲ್ಲಿ ದಾಟುತ್ತದೆ. ಹಾಗಾದರೆ ರೈಲಿನ ಉದ್ದ ಮತ್ತು ಪ್ಲಾಟ್‌ಫಾರ್ಮ್‌ನ ಉದ್ದಗಳ ನಡುವಿನ ಅನುಪಾತ ಎಷ್ಟು?

- A. 8 : 7
- B. 18 : 17 ✓
- C. 21 : 19
- D. 10 : 9

**Q5** Dividing Quantity in Ratio

ಒಂದು ದೀರ್ಘ-ಪ್ರಯಾಣದ ರೈಲಿನಲ್ಲಿ ಪ್ರಥಮ ದರ್ಜೆ, ದ್ವಿತೀಯ ದರ್ಜೆ ಮತ್ತು ಸ್ಲೀಪರ್ ದರ್ಜೆಯ ಪ್ರಯಾಣಿಕರು 2 : 3 : 5 ಅನುಪಾತದಲ್ಲಿರುತ್ತಾರೆ. ಈ ಮೂರು ದರ್ಜೆಗಳ ಟಿಕೆಟ್ ದರಗಳು 8 : 7 : 3 ಅನುಪಾತದಲ್ಲಿರುತ್ತವೆ. ಟಿಕೆಟ್ ಮಾರಾಟದಿಂದ ಸಂಗ್ರಹವಾದ ಒಟ್ಟು ಆದಾಯ ₹ 96,200 ಆಗಿದ್ದರೆ, ದ್ವಿತೀಯ ದರ್ಜೆ ಟಿಕೆಟ್‌ಗಳಿಂದ ಬರುವ ಆದಾಯದ ಮೊತ್ತವನ್ನು ಕಂಡುಹಿಡಿಯಿರಿ.

- A. ₹42,600
- B. ₹38,850 ✓
- C. ₹42,000
- D. ₹39,800

**Q6** Find SI

ಪ್ರತಿ ತಿಂಗಳಿಗೆ 6% ಬಡ್ಡಿದರದಲ್ಲಿ ₹1,200 ಮೊತ್ತದ ಮೇಲೆ 11 ತಿಂಗಳಲ್ಲಿ ಪಡೆಯುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 132
- B. 792 ✓
- C. 86
- D. 66

**Q7** Half-Yearly Compounding

ಒಂದು ಬ್ಯಾಂಕ್, ಅರ್ಧವಾರ್ಷಿಕ ಚಕ್ರಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ, ಒಂದು ಮೊತ್ತಕ್ಕೆ ವಾರ್ಷಿಕ 6.9% ಚಕ್ರಬಡ್ಡಿಯನ್ನು ನೀಡುತ್ತದೆ. ಒಬ್ಬ ಗ್ರಾಹಕನು ಒಂದು ವರ್ಷದ ಜನವರಿ 1 ಮತ್ತು ಜುಲೈ 1 ರಂದು ತಲಾ ₹9,688 ಠೇವಣಿ ಇಡುತ್ತಾನೆ. ವರ್ಷದ ಕೊನೆಯಲ್ಲಿ, ಅವನು ಬಡ್ಡಿಯ ರೂಪದಲ್ಲಿ ಗಳಿಸುವ ಮೊತ್ತ ________ ಆಗಿದೆ. (ನಿಮ್ಮ ಉತ್ತರವನ್ನು ಹತ್ತಿರದ ಪೈಸೆಗೆ ಮಿತಿಗೊಳಿಸಿ)

- A. ₹1,021.44
- B. ₹1,014.24 ✓
- C. ₹1,025.70
- D. ₹1,022.06

**Q8** Laws of Indices

ಒಂದು ವೇಳೆ $81^{0.4} = x$, $81^{0.78} = y$ ಮತ್ತು $x^z = y^2$ ಆಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

- A. 4.9
- B. 1.9
- C. 2.9
- D. 3.9 ✓

Blackbook Vocabulary — Now in the App! ▶ Download Now on Google Play

**Q9** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 6 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 24 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 24 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಮೂರೂ ಕೊಳವೆಗಳನ್ನು ಒಟ್ಟಿಗೆ ತೆರೆದರೆ ತೊಟ್ಟಿಯ ನಾಲ್ಕನೇ-ಒಂದು ಭಾಗದಷ್ಟು ತುಂಬಲು ಅವು ತೆಗೆದುಕೊಳ್ಳುವ ಸಮಯ (ಗಂಟೆಗಳಲ್ಲಿ) ಎಷ್ಟು?

A. 1 ✓

B. 2

C. 3

D. 4

**Q10** Percentage Increase/Decrease

ಸುಧಾ ಅವರ ಖರ್ಚು ಅವರ ಉಳಿತಾಯಕ್ಕಿಂತ 150% ಹೆಚ್ಚಾಗಿದೆ. ಅವರ ಖರ್ಚು 7% ರಷ್ಟು ಕಡಿಮೆಯಾದರೆ ಮತ್ತು ಉಳಿತಾಯವು 21% ರಷ್ಟು ಹೆಚ್ಚಾದರೆ, ಅವರ ಆದಾಯವು ಶೇಕಡಾವಾರು ಎಷ್ಟು ಹೆಚ್ಚಾಗುತ್ತದೆ?

A. 3%

B. 6%

C. 5%

D. 1% ✓

**Q11** Population Based Problems

ಒಂದು ನಗರದ ಜನಸಂಖ್ಯೆಯು ಒಂದು ವರ್ಷದಲ್ಲಿ 64,000 ದಿಂದ 93,500 ಕ್ಕೆ ಹೆಚ್ಚಾಗುತ್ತದೆ. ಹಾಗಾದರೆ ಜನಸಂಖ್ಯೆಯಲ್ಲಿನ ಶೇಕಡಾವಾರು ಹೆಚ್ಚಳ ಎಷ್ಟು? (ಎರಡು ದಶಮಾಂಶ ಸ್ಥಳಗಳ ಪೂರ್ಣಾಂಕಕ್ಕೆ ತನ್ನಿ)

A. 46.09% ✓

B. 46.64%

C. 46.39%

D. 46.56%

**Q12** Prime & Composite Numbers

ಈ ಕೆಳಗಿನ ಯಾವ ಸಂಖ್ಯೆಗಳ ಜೋಡಿಯು ಸಹ-ಅವಿಭಾಜ್ಯವಾಗಿದೆ?

A. 30, 201

B. 49, 217

C. 119, 239 ✓

D. 48, 111

**Q13** Profit/Loss Percentage

ಒಬ್ಬ ಅಂಗಡಿಯವನು 20 ಚಾಕೊಲೇಟ್‌ಗಳನ್ನು ಒಂದು ರೂಪಾಯಿಗೆ ಮಾರಾಟ ಮಾಡಿ 100% ಲಾಭ ಗಳಿಸಿದನು. ಹಾಗಾದರೆ ಅವನು ಮೂಲತಃ ಒಂದು ರೂಪಾಯಿಗೆ ಎಷ್ಟು ಚಾಕೊಲೇಟ್‌ಗಳನ್ನು ಖರೀದಿಸಿದ್ದನು?

A. 40 ✓

B. 44

C. 46

D. 42

**Q14** Simple Ratio Partnership

ಅಮಿತ್, ಸುಮಿತ್ ಮತ್ತು ರೋಹಿತ್ ಎಂಬ ಮೂವರು ಸ್ನೇಹಿತರು ವ್ಯವಹಾರವನ್ನು ಪ್ರಾರಂಭಿಸಲು ಕ್ರಮವಾಗಿ ₹4,000, ₹6,000 ಮತ್ತು ₹8,000 ಹೂಡಿಕೆ ಮಾಡಿದರು. ವರ್ಷದ ಕೊನೆಯಲ್ಲಿ, ಅವರು ₹9,000 ಲಾಭ ಗಳಿಸಿದರು. ಈ ಲಾಭದಲ್ಲಿ ಸುಮಿತ್ ಪಾಲು ಎಷ್ಟು?

A. ₹3,000 ✓

B. ₹2,000

C. ₹4,500

D. ₹4,000

**Q15** Still Water Speed

ಒಂದು ದೋಣಿಯು ಒಂದು ನಿರ್ದಿಷ್ಟ ದೂರವನ್ನು ಕ್ರಮಿಸುತ್ತದೆ. ದೋಣಿಯು ಪ್ರವಾಹದ ದಿಕ್ಕಿನಲ್ಲಿ ಚಲಿಸಲು ತೆಗೆದುಕೊಳ್ಳುವ ಸಮಯ ಮತ್ತು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಚಲಿಸಲು ತೆಗೆದುಕೊಳ್ಳುವ ಸಮಯಗಳ ನಡುವಿನ ಅನುಪಾತವು 5 :7 ಆಗಿದೆ. ಒಂದುವೇಳೆ ಪ್ರವಾಹದ ದಿಕ್ಕಿನಲ್ಲಿ ವೇಗವು 21 km ಆಗಿದ್ದರೆ, ನಿಶ್ಚಲ ನೀರಿನಲ್ಲಿ ದೋಣಿಯ ವೇಗವನ್ನು ಕಂಡುಹಿಡಿಯಿರಿ.

A. 18 km/h ✓

B. 12 km/h

C. 13 km/h

D. 9 km/h

Blackbook Vocabulary — Now in the App! ▶ Download Now on Google Play

**Q16** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 73% ಮತ್ತು 79% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 49% ಮತ್ತು 32% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 14% ಮತ್ತು 92% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 76%, 49% ಮತ್ತು 55% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- **A.** I
- **B.** III
- **C.** IV ✓
- **D.** II

**Q17** Surface Area

ಒಂದು ಘನ ಗೋಳದ ಮೇಲ್ಮೈಗೆ ಬಣ್ಣ ಬಳಿಯಲು ನಾಲ್ಕು ಲೀಟರ್ ಬಣ್ಣ ಬೇಕಾಗುತ್ತದೆ. ಒಂದುವೇಳೆ ಈ ಘನ ಗೋಳವನ್ನು ಒಂದೇ ರೀತಿಯ 4 ಭಾಗಗಳನ್ನು ಮಾಡಿದರೆ, ಆ 4 ಭಾಗಗಳ ಎಲ್ಲಾ ಮೇಲ್ಮೈಗಳಿಗೆ ಬಣ್ಣ ಬಳಿಯಲು ಎಷ್ಟು ಲೀಟರ್ ಬಣ್ಣವು ಬೇಕಾಗುತ್ತದೆ?

- **A.** 8 ✓
- **B.** 12
- **C.** 16
- **D.** 6

**Q18** Two Items Mixing

ಒಂದು ರಾಸಾಯನಿಕಗಳ ಮಿಶ್ರಣವು X ಎಂಬ ರಾಸಾಯನಿಕ ಮತ್ತು Y ಎಂಬ ರಾಸಾಯನಿಕವನ್ನು ಹೊಂದಿರುತ್ತದೆ. ಒಂದು ವೇಳೆ 3 L ನಷ್ಟು Y ರಾಸಾಯನಿಕವನ್ನು ಕೂಡಿಸಿದರೆ, X ರಾಸಾಯನಿಕವು 40% ಆಗುತ್ತದೆ. ಒಂದುವೇಳೆ ಬದಲಿಗೆ 3 L ನಷ್ಟು X ರಾಸಾಯನಿಕವನ್ನು ಕೂಡಿಸಿದರೆ, X ರಾಸಾಯನಿಕವು 50% ಆಗುತ್ತದೆ. ಹಾಗಾದರೆ ಮಿಶ್ರಣದ ಆರಂಭಿಕ ಪ್ರಮಾಣವನ್ನು ಕಂಡುಹಿಡಿಯಿರಿ.

- **A.** 25 L
- **B.** 22 L
- **C.** 27 L ✓
- **D.** 21 L

**Q19** sin^2 + cos^2 = 1

ಒಂದು ವೇಳೆ sin A + cos A = √2 ಆಗಿದ್ದರೆ, sin A - cos A ಯ ಮೌಲ್ಯ ಎಷ್ಟು?

- **A.** -0.75
- **B.** 0 ✓
- **C.** -0.6
- **D.** 0.75

Blackbook Vocabulary — Now in the App! ► Download Now on Google Play

generated by rank.qmaths.in

**Q20** Double Pie Chart

ನೀಡಲಾದ ಪೈ ನಕಾಶೆಗಳು ಕ್ರಮವಾಗಿ 300 ವಿದ್ಯಾರ್ಥಿಗಳು ಮತ್ತು 200 ವಿದ್ಯಾರ್ಥಿಗಳನ್ನು ಹೊಂದಿರುವ A ಮತ್ತು B ಶಾಲೆಗಳ ವಿವರಗಳನ್ನು ಮತ್ತು ವಿದ್ಯಾರ್ಥಿಗಳ ನೆಚ್ಚಿನ ವಿಷಯಗಳ ಶೇಕಡಾವಾರು ವಿತರಣೆಯನ್ನು ತೋರಿಸುತ್ತವೆ. ನಕಾಶೆಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ.







ಗಣಿತ ಅಥವಾ ಇಂಗ್ಲಿಷ್ ನೆಚ್ಚಿನ ವಿಷಯಗಳಾಗಿ ಹೊಂದಿರುವ ಶಾಲೆ A ಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಮತ್ತು ವಿಜ್ಞಾನ ಅಥವಾ ಇಂಗ್ಲಿಷ್ ನೆಚ್ಚಿನ ವಿಷಯಗಳಾಗಿ ಹೊಂದಿರುವ ಶಾಲೆ B ಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ.
(English: ಇಂಗ್ಲಿಷ್; Science: ವಿಜ್ಞಾನ; Mathematics: ಗಣಿತ; History: ಇತಿಹಾಸ; School: ಶಾಲೆ)

**A.** 52 ✓

**B.** 43

**C.** 38

**D.** 49

**Q21** Mean of Grouped Data

ಕೆಳಗಿನ ದತ್ತಾಂಶದ ಸರಾಸರಿಯು 49 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 10-20 | 20-30 | 30-40 | 40-50 | 50-60 |
|---|---|---|---|---|---|
| ಆವರ್ತನ | 50 | 42 | 37 | 41 | x |

**A.** 565 ✓

**B.** 587

**C.** 559

**D.** 547

Blackbook Vocabulary — Now in the App! ► Download Now on Google Play
generated by rank.qmaths.in

**Q22** Pythagorean Identities

ಒಂದು ವೇಳೆ A ಎಂಬುದು ಒಂದು ಲಘು ಕೋನವಾಗಿದ್ದರೆ, ನೀಡಿರುವ ಗಣಿತೋಕ್ತಿಯ ಮೌಲ್ಯ ಎಷ್ಟು?

$$\frac{1 + \cos A}{1 - \cos A} - 2 \cot A \operatorname{cosec} A$$

A. $\operatorname{cosec}^2 A - \cot^2 A$

B. $\operatorname{cosec}^2 A + \cot^2 A$ ✓

C. $\cot^2 A$

D. $\operatorname{cosec}^2 A$

**Q23** Sector & Segment Area

ಒಂದು ವೇಳೆ 14 cm ವ್ಯಾಸವಿರುವ ಒಂದು ವೃತ್ತದ ಕಂಸದ ಉದ್ದವು $3\frac{2}{3}$ cm ಆಗಿದ್ದರೆ, ಈ ಕಂಸದಿಂದ ರೂಪುಗೊಂಡ ತ್ರಿಜ್ಯಖಂಡದ ಎರಡು ಪಟ್ಟು ವಿಸ್ತೀರ್ಣ ($cm^2$ ಗಳಲ್ಲಿ) ಎಷ್ಟಾಗುತ್ತದೆ?

A. $\frac{77}{9}$

B. $\frac{77}{3}$ ✓

C. $\frac{77}{5}$

D. $\frac{77}{2}$

**Q24** Surds

ಒಂದು ವೇಳೆ $\sqrt{x^2 - 21^2} - \sqrt{7.29} = 17.3$ ಆಗಿದ್ದರೆ $x$ ನ ಧನಾತ್ಮಕ ಮೌಲ್ಯವನ್ನು ಕಂಡು ಹಿಡಿಯಿರಿ.

A. 19

B. 27

C. 21

D. 29 ✓

**Q25** Volume

ಒಂದು ಸಿಲಿಂಡರ್‌ನ ತ್ರಿಜ್ಯವನ್ನು $33\frac{1}{3}$% ರಷ್ಟು ಹೆಚ್ಚಿಸಲಾಗುತ್ತದೆ ಮತ್ತು ಅದರ ಎತ್ತರವನ್ನು ಸಿಲಿಂಡರ್‌ನ ಘನಫಲವು ಬದಲಾಗದಂತೆ x% ರಷ್ಟು ಕಡಿಮೆ ಮಾಡಲಾಗುತ್ತದೆ. ಹಾಗಾದರೆ x ಅನ್ನು ಕಂಡುಹಿಡಿಯಿರಿ.

A. 44.15

B. 41.25

C. 42.5

D. 43.75 ✓

Blackbook Vocabulary — Now in the App! ► Download Now on Google Play

generated by rank.qmaths.in

## Mathematics

25 Questions • Answer Key

**Q1** Angle of Elevation

ಒಂದು ಸ್ಮಾರ್ಟ್ ಸಿಟಿ ವಲಯದಲ್ಲಿ 5ಜಿ ಟೆಲಿಕಾಂ ಗೋಪುರವನ್ನು ಸ್ಥಾಪಿಸಲಾಗಿದೆ. ಗೋಪುರದ ಪಾದದಿಂದ 20 m ದೂರದಲ್ಲಿರುವ ನೆಲದ ಮೇಲಿನ ಒಂದು ಬಿಂದುವಿನಿಂದ, ಗೋಪುರದ ತುದಿಯ ಉನ್ನತ ಕೋನವು 45° ಆಗಿದೆ. ಗೋಪುರದ ಎತ್ತರವನ್ನು ಕಂಡುಹಿಡಿಯಿರಿ. (ಮೀಟರ್‌ಗಳಲ್ಲಿ)

A. 25 m
B. 20 m ✓
C. 22 m
D. 18 m

**Q2** Basic Ratio

ಎರಡು ಸಂಖ್ಯೆಗಳು 7:9 ಅನುಪಾತದಲ್ಲಿವೆ. ಒಂದು ವೇಳೆ ಪ್ರತಿಯೊಂದು ಸಂಖ್ಯೆಗೂ 21 ಅನ್ನು ಕೂಡಿಸಿದರೆ, ಅನುಪಾತವು 3:4 ಆಗುತ್ತದೆ. ಹಾಗಾದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

A. -147, -189 ✓
B. -98, -126
C. -91, -117
D. -84, -108

**Q3** Basic TSD

ಪ್ರತಿ 10 ನಿಮಿಷಕ್ಕೊಮ್ಮೆ ಫಾರೆಸ್ಟ್ ಚೆಕ್‌ಪೋಸ್ಟ್‌ನಿಂದ ಜೀಪುಗಳು ಹೊರಡುತ್ತವೆ ಮತ್ತು ಅದೇ ಹಾದಿಯಲ್ಲಿ 24 km/h ಸ್ಥಿರ ವೇಗದಲ್ಲಿ ಚಲಿಸುತ್ತವೆ. ಈಗಾಗಲೇ ದಾರಿಯಲ್ಲಿ ಇರುವ ಯಾವುದೇ ಎರಡು ಜೀಪುಗಳ ನಡುವಿನ ಅಂತರ (km ನಲ್ಲಿ) ಎಷ್ಟು?

A. 4 ✓
B. 3
C. 6
D. 5

**Q4** Corresponding Angles

ಎರಡು ಸಮಾನಾಂತರ ರೇಖೆಗಳನ್ನು ಒಂದು ಛೇದಕ ರೇಖೆಯು ಛೇದಿಸುತ್ತದೆ. ಒಂದು ಕೋನವು (3x + 10)° ಮತ್ತು ಅದರ ಅನುರೂಪ ಕೋನವು (5x - 30)° ಆಗಿದ್ದರೆ, x ನ ಮೌಲ್ಯವನ್ನು ಕಂಡುಹಿಡಿಯಿರಿ.

A. 20 ✓
B. 18
C. 25
D. 15

**Q5** Find SI

A ಮತ್ತು B ಎಂಬ ಎರಡು ಬ್ಯಾಂಕುಗಳು ಕ್ರಮವಾಗಿ ವಾರ್ಷಿಕ 3.5% ಮತ್ತು 8.5% ದರದಲ್ಲಿ ಸಾಲಗಳನ್ನು ನೀಡುತ್ತವೆ. ಡೇವಿಡ್ ಅವರು ಪ್ರತಿ ಬ್ಯಾಂಕಿನಿಂದ ₹4,80,000 ಮೊತ್ತವನ್ನು ಸಾಲವಾಗಿ ಪಡೆದರು. 3 ವರ್ಷಗಳ ನಂತರ ಈ ಎರಡೂ ಬ್ಯಾಂಕುಗಳಿಗೆ ಡೇವಿಡ್ ಅವರು ಪಾವತಿಸಿದ ಸರಳ ಬಡ್ಡಿಯ ಮೊತ್ತಗಳ (₹ ಗಳಲ್ಲಿ) ನಡುವಿನ ಧನಾತ್ಮಕ ವ್ಯತ್ಯಾಸವನ್ನು ಕಂಡುಹಿಡಿಯಿರಿ.

A. 73,000
B. 71,500
C. 72,000 ✓
D. 73,500

**Q6** Finding HCF

120 ಮತ್ತು 150 ರ ಲಸಾಅ ಹಾಗೂ 432 ರ ಮಸಾಅ ಎಷ್ಟು?

A. 12
B. 8
C. 24 ✓
D. 16

**Q7** Finding Present Age

ಒಬ್ಬ ತಂದೆ ಮತ್ತು ಅವರ ಮಗನ ವಯಸ್ಸುಗಳ ಮೊತ್ತವು 50 ವರ್ಷಗಳು. ಒಂದುವೇಳೆ ತಂದೆಯ ವಯಸ್ಸು ಮಗನ ವಯಸ್ಸಿನ 4 ಪಟ್ಟು ಆಗಿದ್ದರೆ, ಮಗನ ವಯಸ್ಸನ್ನು ಕಂಡುಹಿಡಿಯಿರಿ.

A. 14 ವರ್ಷಗಳು
B. 16 ವರ್ಷಗಳು
C. 10 ವರ್ಷಗಳು ✓
D. 12 ವರ್ಷಗಳು

**Q8** HCF/LCM Word Problems

ಎರಡು ಭದ್ರತಾ ವಿದ್ಯುತ್ ದೀಪಗಳು ನಿಯಮಿತ ಅಂತರದಲ್ಲಿ ಮಿನುಗುತ್ತವೆ, ಒಂದು ದೀಪವು ಪ್ರತಿ 36 ನಿಮಿಷಗಳಿಗೊಮ್ಮೆ ಮತ್ತು ಇನ್ನೊಂದು ಪ್ರತಿ 54 ನಿಮಿಷಗಳಿಗೊಮ್ಮೆ ಮಿನುಗುತ್ತದೆ. ಎರಡೂ ದೀಪಗಳು 8:00 AM ಗೆ ಒಟ್ಟಿಗೆ ಮಿನುಗಿದರೆ, ಅವು ಮತ್ತೆ ಯಾವಾಗ ಒಟ್ಟಿಗೆ ಮಿನುಗುತ್ತವೆ?

A. 9:38 AM
B. 9:28 AM
C. 9:08 AM
D. 9:48 AM ✓

Blackbook Vocabulary — Now in the App! ▶ Download Now on Google Play

**Q9** Half-Yearly Compounding

ವಾರ್ಷಿಕ 2% ದರದಲ್ಲಿ (ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ), ಒಂದು ವರ್ಷಕ್ಕೆ ₹6,20,000 ಹೂಡಿಕೆ ಮಾಡಿದರೆ, ಸಿಗುವ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ.

- A. ₹10,682
- B. ₹12,462 ✓
- C. ₹11,667
- D. ₹13,795

**Q10** Heron's Formula

14 cm, 21 cm ಮತ್ತು 29 cm ಬಾಹುಗಳನ್ನು ಹೊಂದಿರುವ ತ್ರಿಭುಜದ ವಿಸ್ತೀರ್ಣವನ್ನು ಕಂಡು ಹಿಡಿಯಿರಿ. (ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

- A. 137.87 cm2 ✓
- B. 137.71 cm2
- C. 137.08 cm2
- D. 137.42 cm2

**Q11** Percentage Increase/Decrease

ಸುಧಾ ಅವರ ಖರ್ಚು ಅವರ ಉಳಿತಾಯಕ್ಕಿಂತ 100% ಹೆಚ್ಚಾಗಿದೆ. ಅವರ ಖರ್ಚು 4% ರಷ್ಟು ಕಡಿಮೆಯಾದರೆ ಮತ್ತು ಉಳಿತಾಯವು 35% ರಷ್ಟು ಹೆಚ್ಚಾದರೆ, ಅವರ ಆದಾಯವು ಶೇಕಡಾವಾರು ಎಷ್ಟು ಹೆಚ್ಚಾಗುತ್ತದೆ?

- A. 12%
- B. 14%
- C. 11%
- D. 9% ✓

**Q12** Profit/Loss Percentage

ಒಬ್ಬ ಅಂಗಡಿಯವನು 24 ವಸ್ತುಗಳನ್ನು ಮಾರಾಟ ಮಾಡಿ 12 ವಸ್ತುಗಳ ಮಾರಾಟ ಬೆಲೆಯ ಲಾಭ ಗಳಿಸುತ್ತಾನೆ. ಹಾಗಾದರೆ ಆತನ ಶೇಕಡಾವಾರು ಲಾಭ ಎಷ್ಟು?

- A. 100% ✓
- B. 50%
- C. 150%
- D. 200%

**Q13** Replacement of Mixture

ಒಂದು ಪಾತ್ರೆಯು 7:3 ಅನುಪಾತದಲ್ಲಿ ಹಾಲು ಮತ್ತು ನೀರಿನ ಮಿಶ್ರಣವನ್ನು ಹಿಡಿದಿಟ್ಟುಕೊಳ್ಳಬಲ್ಲದು. 2 ಲೀಟರ್ ಮಿಶ್ರಣ ಹೊರತೆಗೆದು ಅದರ ಜಾಗಕ್ಕೆ 2 ಲೀಟರ್ ಶುದ್ಧ ನೀರು ಸೇರಿಸಿದ ನಂತರ, ಹಾಲು ಮತ್ತು ನೀರಿನ ಹೊಸ ಅನುಪಾತ 7:5 ಆಗುತ್ತದೆ. ಹಾಗಾದರೆ ಆ ಮಿಶ್ರಣದಲ್ಲಿದ್ದ ಹಾಲಿನ ಆರಂಭಿಕ ಪ್ರಮಾಣ ಎಷ್ಟು?

- A. 8.4 ಲೀಟರ್ ✓
- B. 6.3 ಲೀಟರ್
- C. 5.6 ಲೀಟರ್
- D. 9.1 ಲೀಟರ್

**Q14** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿದೆ. I ನೇ ಅಂಗಡಿಯು 99% ಮತ್ತು 40% ಗಳ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿಯು 53% ಮತ್ತು 52% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿಯು 52% ಮತ್ತು 10% ಗಳ ಅನುಕ್ರಮ ರಿಯಾಯಿತಿಗಳನ್ನು ನೀಡುತ್ತದೆ, ಮತ್ತು IV ನೇ ಅಂಗಡಿಯು 51%, 85% ಮತ್ತು 68% ಗಳ ಅನುಕ್ರಮ ರಿಯಾಯಿತಿಗಳನ್ನು ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- A. IV
- B. I ✓
- C. III
- D. II

**Q15** Two Items Mixing

ಒಬ್ಬ ಅಂಗಡಿಯವನು ಪ್ರತಿ kg ಗೆ ₹40 ರ ದರದಲ್ಲಿ 5 kg ಅಕ್ಕಿ ಮತ್ತು ಪ್ರತಿ kg ಗೆ ₹60 ರ ದರದಲ್ಲಿ 15 kg ಅಕ್ಕಿ ಖರೀದಿಸುತ್ತಾನೆ. ಹಾಗಾದರೆ ಆ ಮಿಶ್ರಣದ ಪ್ರತಿ kg ಯ ಸರಾಸರಿ ಬೆಲೆ ಎಷ್ಟು?

- A. ₹55 ✓
- B. ₹50
- C. ₹45
- D. ₹52

**Q16** Two Successive Changes

ಒಂದು ಸಂಖ್ಯೆಯನ್ನು ಮೊದಲು 30% ದಷ್ಟು ಹೆಚ್ಚಿಸಿ, ನಂತರ 20% ದಷ್ಟು ಕಡಿಮೆ ಮಾಡಲಾಗಿದೆ. ಹಾಗಾದರೆ ಆ ಸಂಖ್ಯೆಯಲ್ಲಿ ಆದ ಒಟ್ಟಾರೆ ಶೇಕಡಾವಾರು ಬದಲಾವಣೆ ಎಷ್ಟು?

- A. 10% ಹೆಚ್ಚಳ
- B. 4% ಇಳಿಕೆ
- C. 8% ಇಳಿಕೆ
- D. 4% ಹೆಚ್ಚಳ ✓

Blackbook Vocabulary — Now in the App! ▶ Download Now on Google Play

**Q17** Two Trains Crossing

ಎರಡು ರೈಲುಗಳು 80 kmph ಮತ್ತು 70 kmph ವೇಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ. ಅವುಗಳ ಉದ್ದಗಳು ಕ್ರಮವಾಗಿ 1.20 km ಮತ್ತು 0.8 km ಆಗಿವೆ. ಹಾಗಾದರೆ ನಿಧಾನವಾಗಿ ಚಲಿಸುವ ರೈಲು ವೇಗವಾಗಿ ಚಲಿಸುವ ರೈಲನ್ನು ದಾಟಲು ಎಷ್ಟು ಸಮಯವನ್ನು (ಸೆಕೆಂಡುಗಳಲ್ಲಿ) ತೆಗೆದುಕೊಳ್ಳುತ್ತದೆ?

A. 40

B. 48 ✓

C. 42

D. 50

**Q18** Value Decrease Over Time

ಕಂಪನಿಯ ಕಾರೊಂದು ಪ್ರತಿ ವರ್ಷ ತನ್ನ ಮೌಲ್ಯದ 20% ದಷ್ಟನ್ನು ಕಳೆದುಕೊಳ್ಳುತ್ತದೆ. ಮೂರು ವರ್ಷಗಳ ನಂತರ, ಕಾರಿನ ಬೆಲೆಯು ₹32,768 ಆಗಿದೆ. ಹಾಗಾದರೆ ಆರಂಭದಲ್ಲಿ ಕಾರಿನ ಮೌಲ್ಯ ಎಷ್ಟಿತ್ತು?

A. ₹61,200

B. ₹67,800

C. ₹64,000 ✓

D. ₹59,800

**Q19** Weighted Average

ಒಂದು ಶಾಲೆಯಲ್ಲಿ ನಾಲ್ಕು ತರಗತಿಗಳಿವೆ. 9ನೇ ತರಗತಿ, 10ನೇ ತರಗತಿ, 11ನೇ ತರಗತಿ ಮತ್ತು 12ನೇ ತರಗತಿಯಲ್ಲಿ ವಿದ್ಯಾರ್ಥಿಗಳು ಪಡೆದ ಸರಾಸರಿ ಅಂಕಗಳು ಕ್ರಮವಾಗಿ 65, 70, 70 ಮತ್ತು 74 ಆಗಿವೆ. ಪ್ರತಿ ಅನುಗುಣವಾದ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 40, 45, 35 ಮತ್ತು 50 ಆಗಿದೆ. ಹಾಗಾದರೆ, ಎಲ್ಲಾ ತರಗತಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳ ತೂಕಿತ ಸಮಾಂತರ ಮಾಧ್ಯ ಅಂಕಗಳು ಎಷ್ಟು?

A. 70 ✓

B. 73

C. 69

D. 68

**Q20** Combined Work Rate

A ಮತ್ತು B ಎಂಬವರು ಒಟ್ಟಾಗಿ ಒಂದು ಕೆಲಸವನ್ನು 15.5 ದಿನಗಳಲ್ಲಿ ಮಾಡಬಲ್ಲರು ಮತ್ತು A ಅವರೊಬ್ಬರೇ ಅದೇ ಕೆಲಸವನ್ನು 21 ದಿನಗಳಲ್ಲಿ ಮಾಡಬಲ್ಲರು. ಹಾಗಾದರೆ B ಅವರೊಬ್ಬರೇ ಅದೇ ಕೆಲಸವನ್ನು ಎಷ್ಟು ದಿನದಲ್ಲಿ ಮಾಡಬಲ್ಲರು?

A. $79\frac{2}{11}$ ದಿನಗಳು

B. $59\frac{2}{11}$ ದಿನಗಳು ✓

C. $89\frac{2}{11}$ ದಿನಗಳು

D. $69\frac{2}{11}$ ದಿನಗಳು

Blackbook Vocabulary — Now in the App! ▶ Download Now on Google Play

generated by rank.qmaths.in

**Q21** Comparative Analysis

ಈ ಸ್ತಂಭನಕ್ಷೆಯು ಒಂದು ಕಂಪನಿಯ ಆರು ಶಾಖೆಗಳಿಂದ (A, B, C, D, E ಮತ್ತು F) X, Y ಮತ್ತು Z ಎಂಬ ಮೂರು ಬ್ರಾಂಡ್‌ಗಳ ಮೊಬೈಲ್ ಫೋನ್‌ಗಳ ಮಾರಾಟವನ್ನು (ಲಕ್ಷಗಳಲ್ಲಿ) ತೋರಿಸುತ್ತದೆ.

ಸ್ತಂಭನಕ್ಷೆಯನ್ನು ಅಧ್ಯಯನ ಮಾಡಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ.




(**ಸೂಚನೆ**: Sales = ಮಾರಾಟ : Branches = ಶಾಖೆಗಳು : Sales in lakhs = ಮಾರಾಟ (ಲಕ್ಷಗಳಲ್ಲಿ).)

A ಶಾಖೆಯ ಒಟ್ಟು ಮಾರಾಟ ಮತ್ತು D ಶಾಖೆಯ ಒಟ್ಟು ಮಾರಾಟದ ಅನುಪಾತ ಎಷ್ಟು?

**A.** 15 : 13

**B.** 15 : 17

**C.** 17 : 15 ✓

**D.** 13 : 15

**Q22** Laws of Indices

ಇದನ್ನು ಸರಳೀಕರಿಸಿ:

$$\frac{(p^2q^{-3})^3(p^{-5}q^4)^2}{p^{-1}q^{-2}}.$$

**A.** $\frac{p^2}{q5}$

**B.** $\frac{q^2}{p5}$

**C.** $\frac{q}{p^3}$ ✓

**D.** $\frac{p}{q^3}$

Blackbook Vocabulary — Now in the App! ► Download Now on Google Play

generated by rank.qmaths.in

**Q23** Mean of Grouped Data

ಕೆಳಗಿನ ದತ್ತಾಂಶದ ಸರಾಸರಿಯು 44 ಆಗಿದ್ದರೆ, x ನ ಮೌಲ್ಯ ಎಷ್ಟು?

| ವರ್ಗ | 10-20 | 20-30 | 30-40 | 40-50 | 50-60 |
|---|---|---|---|---|---|
| ಆವರ್ತನ | 36 | 37 | 26 | 34 | x |

A. 160

B. 161

C. 159

D. 177 ✓

**Q24** Volume

ಒಂದು ಮುಚ್ಚಿದ ಘನಾಭದ ಆಕಾರದ ಪೆಟ್ಟಿಗೆಯ ಹೊರ ಮೇಲ್ಮೈಗೆ ಬಣ್ಣ ಬಳಿಯಲು ಪ್ರತಿ ಚದರ cm ಗೆ ₹10 ದರದಲ್ಲಿ ತಗಲುವ ವೆಚ್ಚವು ₹4,340 ಆಗಿದೆ. ಪೆಟ್ಟಿಗೆಯ ಉದ್ದ ಮತ್ತು ಅಗಲದ ಮೊತ್ತವು 23 cm ಆಗಿದೆ. ಪೆಟ್ಟಿಗೆಯ ಎತ್ತರವು 5 cm ಆಗಿದ್ದರೆ, ಪೆಟ್ಟಿಗೆಯಲ್ಲಿರುವ ಗಾಳಿಯ ಘನಫಲ ಎಷ್ಟು?

A. $500\ \text{cm}^3$

B. $440\ \text{cm}^3$

C. $484\ \text{cm}^3$

D. $510\ \text{cm}^3$ ✓

**Q25** sec^2 - tan^2 = 1

ಒಂದು ವೇಳೆ $\text{m}\sec\alpha = 8, \text{m}\tan\alpha = 4$ ಆಗಿದ್ದರೆ, $\text{m}^2\text{cosec}\alpha$ ನ ಮೌಲ್ಯವು:

A. 96 ✓

B. 2

C. 24

D. 48

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** Annual Compounding

ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ₹10,124 ಮೊತ್ತದ ಮೇಲೆ 2 ವರ್ಷಗಳ ನಂತರ 25% ದರದಲ್ಲಿ ಸಿಗುವ ಚಕ್ರಬಡ್ಡಿ ಎಷ್ಟು?

A. ₹5,994.75
B. ₹5,694.75 ✓
C. ₹5,794.75
D. ₹5,894.75

**Q2** Annual Compounding

ವಾರ್ಷಿಕ ಚಕ್ರಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, ಎಷ್ಟು ವಾರ್ಷಿಕ ಬಡ್ಡಿ ದರದಲ್ಲಿ ಒಂದು ಮೊತ್ತವು 2 ವರ್ಷಗಳಲ್ಲಿ ತನ್ನ 20 ಪಟ್ಟು ಆಗುತ್ತದೆ? (ನಿಮ್ಮ ಉತ್ತರವನ್ನು ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

A. 340.3
B. 347.2 ✓
C. 353.1
D. 345.6

**Q3** Arithmetic

ನಿರ್ಮಲ್ ಅವರ ತಿಂಗಳ ಸಂಬಳವು ₹15,000 ಆಗಿದೆ. ಅವರು ಪ್ರತಿ ತಿಂಗಳು ಮನೆ ಬಾಡಿಗೆಗೆ ₹6,000 ಮತ್ತು ಇತರ ದಿನಪಯೋಗಿ ಬಿಲ್ಲುಗಳ ಪಾವತಿಗೆ ₹1,500 ಖರ್ಚು ಮಾಡಿ, ಉಳಿದ ಮೊತ್ತವನ್ನು ಪ್ರತಿ ತಿಂಗಳು ಉಳಿತಾಯ ಮಾಡುತ್ತಾರೆ. ಒಂದು ವೇಳೆ, ಅವರ ಹುಟ್ಟುಹಬ್ಬದ ತಿಂಗಳಲ್ಲಿ, ಅವರು ತಮ್ಮ ಇಡೀ ತಿಂಗಳ ಉಳಿತಾಯವನ್ನು ಹುಟ್ಟುಹಬ್ಬದ ಆಚರಣೆಗಾಗಿ ಖರ್ಚು ಮಾಡಿದರೆ, ಆ ವರ್ಷದಲ್ಲಿ ಅವರ ಒಟ್ಟು ಉಳಿತಾಯವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 90,000
B. 75,000
C. 82,500 ✓
D. 67,500

**Q4** Average Speed

ಒಂದು ಕಾರು ತನ್ನ ಪ್ರಯಾಣದ ಮೊದಲ ಮೂರನೇ-ಒಂದು ಭಾಗದಷ್ಟು ದೂರವನ್ನು 42 km/hr ವೇಗದಲ್ಲಿ ಕ್ರಮಿಸುತ್ತದೆ, ಮುಂದಿನ ಅರ್ಧದಷ್ಟು ದೂರವನ್ನು 60 km/hr ವೇಗದಲ್ಲಿ ಕ್ರಮಿಸುತ್ತದೆ ಮತ್ತು ಉಳಿದ ದೂರವನ್ನು 72 km/hr ವೇಗದಲ್ಲಿ ಕ್ರಮಿಸುತ್ತದೆ. ಹಾಗಾದರೆ ಇಡೀ ಪ್ರಯಾಣದಲ್ಲಿ ಕಾರಿನ ಅಂದಾಜು ಸರಾಸರಿ ವೇಗವನ್ನು (km/hr ಗಳಲ್ಲಿ) ಕಂಡುಹಿಡಿಯಿರಿ.

A. 58
B. 48.6
C. 53.8 ✓
D. 56

**Q5** Dividing Quantity in Ratio

ಒಂದುವೇಳೆ (a + b):(b + c):(c + a) = 4:6:10 ಆಗಿದ್ದರೆ ಮತ್ತು a + b + c = 40 ಆಗಿದ್ದರೆ, a ನ ಮೌಲ್ಯ ಎಷ್ಟು?

A. 22
B. 18
C. 16 ✓
D. 8

**Q6** Equivalent Discount

ಅಂಗಡಿಯೊಂದು ವಸ್ತುವಿಗೆ ₹1,375 ಬೆಲೆ ನಮೂದಿಸಿದೆ. ಅಂಗಡಿಯು ಯೋಜನೆಯನ್ನು ಆಯೋಜಿಸಿದೆ: ಒಂದೇ ವಿಧದ ಎರಡು ವಸ್ತುಗಳನ್ನು ಖರೀದಿಸಿದಾಗ, ಗ್ರಾಹಕನಿಗೆ ಮೊದಲನೆಯದರ ಮೇಲೆ 20% ರಿಯಾಯಿತಿ ಮತ್ತು ಎರಡನೆಯದರ ಮೇಲೆ 40% ರಿಯಾಯಿತಿ ದೊರೆಯುತ್ತದೆ. ಒಂದು ವೇಳೆ ಗ್ರಾಹಕನು ಎರಡನ್ನೂ ಖರೀದಿಸಿದರೆ, ಒಟ್ಟು ಬಿಲ್ಲಿನ ಮೇಲೆ ಅವನಿಗೆ ಸಿಗುವ ಶೇಕಡಾವಾರು ರಿಯಾಯಿತಿ ಎಷ್ಟು?

A. 27%
B. 30% ✓
C. 24%
D. 25%

Blackbook Vocabulary — Now in the App! ▶ Download Now on Google Play

**Q7** Find SI

A ಮತ್ತು B ಎಂಬ ಎರಡು ಬ್ಯಾಂಕುಗಳು ಕ್ರಮವಾಗಿ ವರ್ಷಕ್ಕೆ 3.5% ಮತ್ತು 8.5% ರ ದರದಲ್ಲಿ ಸಾಲವನ್ನು ನೀಡುತ್ತಿವೆ. ಅತುಲ್ ಅವರು ಪ್ರತಿ ಬ್ಯಾಂಕಿನಿಂದ ₹4,80,000 ಮೊತ್ತವನ್ನು ಸಾಲವಾಗಿ ಪಡೆದಿದ್ದಾರೆ. ಹಾಗಾದರೆ, 2 ವರ್ಷಗಳ ನಂತರ ಅತುಲ್ ಅವರು ಆ ಎರಡೂ ಬ್ಯಾಂಕುಗಳಿಗೆ ಪಾವತಿಸಿದ ಸರಳ ಬಡ್ಡಿಯ ಮೊತ್ತಗಳ (₹ ಗಳಲ್ಲಿ) ನಡುವಿನ ಧನಾತ್ಮಕ ವ್ಯತ್ಯಾಸವನ್ನು ಕಂಡುಹಿಡಿಯಿರಿ.

- A. 47,500
- B. 48,000 ✓
- C. 49,500
- D. 49,000

**Q8** Finding Present Age

ಒಂದು ವೇಳೆ, ತಾಯಿಯ ವಯಸ್ಸಿನ 2 ಪಟ್ಟು ವಯಸ್ಸು, ಅವಳ ಮಗಳ ವಯಸ್ಸಿನ 7 ಪಟ್ಟು ವಯಸ್ಸಿಗಿಂತ 28 ವರ್ಷಗಳು ಹೆಚ್ಚಾಗಿದ್ದರೆ ಮತ್ತು ಮಗಳ ವಯಸ್ಸಿನ 5 ಪಟ್ಟು ವಯುಸ್ಸು, ತಾಯಿಯ ವಯಸ್ಸಿಗಿಂತ 5 ವರ್ಷ ಕಡಿಮೆಯಾಗಿದ್ದರೆ, ತಾಯಿ ಮತ್ತು ಮಗಳ ವಯಸ್ಸಿನ ನಡುವಿನ ವ್ಯತ್ಯಾಸ (ವರ್ಷಗಳಲ್ಲಿ) ಕಂಡುಹಿಡಿಯಿರಿ.

- A. 29 ✓
- B. 34
- C. 33
- D. 25

**Q9** Finding Value from Percentage

ಪ್ರಿಯಾ ಅವರು ತಮ್ಮ ಆದಾಯದ 27% ವನ್ನು ಮನೆ ಬಾಡಿಗೆಗೆ, 22% ವನ್ನು ದಿನಸಿ ದಿನಸಿ ಖರೀದಿಗೆ ಮತ್ತು 18% ವನ್ನು ಶಿಕ್ಷಣಕ್ಕೆ ಖರ್ಚು ಮಾಡುತ್ತಾರೆ. ಒಂದು ವೇಳೆ ಅವರು ಪ್ರತಿ ತಿಂಗಳು ₹12,400 ಉಳಿತಾಯ ಮಾಡಿದ್ದರೆ, ಅವರ ಮಾಸಿಕ ಆದಾಯ (ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ) ಎಷ್ಟು?

- A. ₹37,446
- B. ₹37,216
- C. ₹37,576 ✓
- D. ₹37,356

**Q10** Grouped Data Median

ಒಂದು ಉತ್ಪಾದನಾ ಘಟಕವು 3,000 ಕಾರ್ಮಿಕರನ್ನು ವಿವಿಧ ಗಂಟೆಯ ವೇತನದೊಂದಿಗೆ ನೇಮಿಸಿಕೊಳ್ಳುತ್ತದೆ. ಅವರ ವೇತನದ ವಿತರಣೆಯನ್ನು ಕೆಳಗೆ ನೀಡಲಾಗಿದೆ.

| ವೇತನ ಶ್ರೇಣಿ (ಪ್ರತಿ ಗಂಟೆಗೆ ₹) | ಕಾರ್ಮಿಕರ ಸಂಖ್ಯೆ | |
|---|---|---|
| 3.00 ಕ್ಕಿಂತ ಕಡಿಮೆ | 150 | |
| 3.01 – 4.50 | 580 | |
| 4.51 – 6.00 | 900 | |
| 6.01 – 7.50 | 500 | |
| 7.51 – 9.00 | 600 | |
| 9.00 ಕ್ಕಿಂತ ಹೆಚ್ಚು | 270 | |
| **ಒಟ್ಟು** | **3,000** | |

ಮೇಲಿನ ದತ್ತಾಂಶವನ್ನು ಬಳಸಿಕೊಂಡು, ಉದ್ಯೋಗಿಗಳ ಗಂಟೆಯ ವೇತನದ ಮಧ್ಯಾಂಕವನ್ನು ಕಂಡುಹಿಡಿಯಿರಿ (ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ತನ್ನಿ.)

- A. ₹4.74
- B. ₹5.98
- C. ₹6.23
- D. ₹5.79 ✓

**Q11** Melting & Recasting

15 cm ಆಂತರಿಕ ತ್ರಿಜ್ಯದ ಅರ್ಧಗೋಳಾಕಾರದ ಒಂದು ಬಟ್ಟಲು ದ್ರವದಿಂದ ತುಂಬಿದೆ. ಈ ದ್ರವವನ್ನು 5 cm ವ್ಯಾಸ ಮತ್ತು 6 cm ಎತ್ತರದ ಸಿಲಿಂಡರಾಕಾರದ ಬಾಟಲಿಗಳಲ್ಲಿ ತುಂಬಿಸಬೇಕಿದೆ. ಹಾಗಾದರೆ ಬಟ್ಟಲಲ್ಲಿರುವ ದ್ರವವನ್ನು ಸಂಪೂರ್ಣವಾಗಿ ಖಾಲಿ ಮಾಡಲು ಎಷ್ಟು ಬಾಟಲಿಗಳು ಬೇಕಾಗುತ್ತವೆ?

- A. 60 ✓
- B. 64
- C. 55
- D. 58

**Q12** Profit/Loss Percentage

ಒಬ್ಬ ಮಾರಾಟಗಾರ ₹1 ಕ್ಕೆ 27 ನಿಂಬೆ ಹಣ್ಣುಗಳನ್ನು ಖರೀದಿಸುತ್ತಾನೆ. 80% ಲಾಭ ಪಡೆಯಲು ಅವನು ಅವುಗಳನ್ನು ಎಷ್ಟು ದರದಲ್ಲಿ (ಪ್ರತಿ ₹1 ಕ್ಕೆ ನಿಂಬೆಹಣ್ಣುಗಳ ಸಂಖ್ಯೆ) ಮಾರಾಟ ಮಾಡಬೇಕು?

- A. 17
- B. 16
- C. 19
- D. 15 ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q13** Proportion

6, 9 ಮತ್ತು 15 ರ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

A. 22.5 ✓

B. 25.5

C. 21.5

D. 18.5

**Q14** Two Trains Crossing

ಸಮಾನ ಉದ್ದವಿರುವ ಎರಡು ರೈಲುಗಳು ಕ್ರಮವಾಗಿ 12 ಸೆಕೆಂಡುಗಳು ಮತ್ತು 18 ಸೆಕೆಂಡುಗಳಲ್ಲಿ ಒಂದು ಕಂಬವನ್ನು ದಾಟುತ್ತವೆ. ಒಂದು ವೇಳೆ ಅವು ಒಂದೇ ದಿಕ್ಕಿನಲ್ಲಿ ಸಾಗಿದರೆ, ವೇಗವಾಗಿ ಚಲಿಸುವ ರೈಲು ಹಿಂದಿನಿಂದ ಬಂದು ಇನ್ನೊಂದು ರೈಲನ್ನು ಸಂಪೂರ್ಣವಾಗಿ ದಾಟಲು ತೆಗೆದುಕೊಳ್ಳುವ ಸಮಯವನ್ನು ಕಂಡುಹಿಡಿಯಿರಿ.

A. 75 ಸೆಕೆಂಡುಗಳು

B. 66 ಸೆಕೆಂಡುಗಳು

C. 72 ಸೆಕೆಂಡುಗಳು ✓

D. 60 ಸೆಕೆಂಡುಗಳು

**Q15** Weighted Average

ಒಂದು ತರಗತಿಯಲ್ಲಿನ ಹುಡುಗರು ಮತ್ತು ಹುಡುಗಿಯರ ಅನುಪಾತವು 3:2 ಆಗಿದೆ. ಒಂದು ಪರೀಕ್ಷೆಯಲ್ಲಿ, ಹುಡುಗರ ಸರಾಸರಿ ಅಂಕಗಳು 70 ಮತ್ತು ಹುಡುಗಿಯರ ಸರಾಸರಿ ಅಂಕಗಳು 80 ಆಗಿವೆ. ಹಾಗಾದರೆ ಇಡೀ ತರಗತಿಯ ಸರಾಸರಿ ಅಂಕಗಳನ್ನು ಕಂಡುಹಿಡಿಯಿರಿ.

A. 74 ✓

B. 72

C. 76

D. 75

**Q16** Bracket Simplification

ಇದನ್ನು ಸರಳೀಕರಿಸಿ: $2 \div \frac{4}{5} \times (5 + 8 \times 2 - 4) + \left[\frac{1}{5} \div \frac{7}{25} - \left\{\frac{3}{7} + \frac{16}{28}\right\}\right]$

A. $\frac{591}{14}$ ✓

B. $\frac{589}{14}$

C. $\frac{59}{28}$

D. $\frac{59}{14}$

**Q17** Heron's Formula

12 cm, 10 cm ಮತ್ತು 14 cm ಬಾಹುಗಳನ್ನು ಹೊಂದಿರುವ ಒಂದು ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. $24\sqrt{6}\ \text{cm}^2$ ✓

B. $28\sqrt{2}\ \text{cm}^2$

C. $24\ \text{cm}^2$

D. $28\ \text{cm}^2$

Blackbook Vocabulary — Now in the App! ▶ Download Now on Google Play

generated by rank.qmaths.in

**Q18** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 53 ಆಗಿದ್ದರೆ, (2x + 7y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 7 | 11 | x | 8 | y | 60 |

A. 133 ✓

B. 137

C. 127

D. 151

**Q19** Order of Operations

ಈ ಗಣಿತೋಕ್ತಿಯನ್ನು ಸರಳೀಕರಿಸಿ: $12-3\times 2+\frac{8}{2}$.

A. 10 ✓

B. 8

C. 12

D. 14

**Q20** Percentage Based

ಒಂದು ಸಮಾರಂಭದಲ್ಲಿ, ಒಟ್ಟು 150 ಕೆಜಿ ಹಣ್ಣುಗಳಿಂದ ಹಣ್ಣಿನ ಸಲಾಡ್ ಮಾಡಲಾಗುತ್ತದೆ. ವಿವಿಧ ರೀತಿಯ ಹಣ್ಣುಗಳ ವಿತರಣೆಯನ್ನು ನೀಡಿರುವ ನಕಾಶೆಯಲ್ಲಿ ತೋರಿಸಲಾಗಿದೆ.




Apple : ಸೇಬು
Banana : ಬಾಳೆಹಣ್ಣು
Oragne : ಕಿತ್ತಳೆ
Grapes : ದ್ರಾಕ್ಷಿ
others : ಇತರೆ

ಹಣ್ಣಿನ ಸಲಾಡ್ ನಲ್ಲಿ ಬಳಸಲಾದ ಬಾಳೆಹಣ್ಣಿನ ಪ್ರಮಾಣವು ಬಳಸಲಾದ ಸೇಬಿನ ಪ್ರಮಾಣಕ್ಕಿಂತ ಎಷ್ಟು ಶೇಕಡಾ ಹೆಚ್ಚಾಗಿದೆ?

A. 22%

B. 30%

C. 25%

D. 20% ✓

Blackbook Vocabulary — Now in the App! ▶ Download Now on Google Play

**Q21** Pythagorean Identities

ಒಂದು ವೇಳೆ $A = \frac{\cos\theta + 1 + \sin\theta}{2\sin\theta}$ ಆಗಿದ್ದರೆ, $\frac{\cos\theta}{\sin\theta + 1 - \cos\theta}$ ನ ಮೌಲ್ಯವು:

A. $1 + A$

B. $1 - A^2$

C. $1 + \frac{1}{A}$

D. $A - 1$ ✓

**Q22** Simultaneous Fill & Empty

A ಮತ್ತು B ಎಂಬ ಎರಡು ಕೊಳವೆಗಳು ಒಂದು ತೊಟ್ಟಿಯನ್ನು ಕ್ರಮವಾಗಿ 20 ಗಂಟೆ ಮತ್ತು 30 ಗಂಟೆಗಳಲ್ಲಿ ತುಂಬಿಸಬಲ್ಲವು, C ಕೊಳವೆಯು ಅದೇ ತೊಟ್ಟಿಯನ್ನು 60 ಗಂಟೆಗಳಲ್ಲಿ ಖಾಲಿಮಾಡಬಲ್ಲದು. ಎಲ್ಲಾ ಮೂರು ಕೊಳವೆಗಳನ್ನು ಪ್ರಾರಂಭದಲ್ಲಿಯೇ ತೆರೆಯಲಾಗುತ್ತದೆ. ತೊಟ್ಟಿಯು ತುಂಬುವ 10 ಗಂಟೆಗಳ ಮೊದಲು, C ಕೊಳವೆಯನ್ನು ಮುಚ್ಚಲಾಗುತ್ತದೆ. ಹಾಗಾದರೆ ತೊಟ್ಟಿಯು ತುಂಬಿಕೊಳ್ಳಲು ತೆಗೆದುಕೊಳ್ಳುವ ಒಟ್ಟು ಸಮಯ (ಗಂಟೆಗಳಲ್ಲಿ) ಎಷ್ಟು?

A. $12\frac{1}{2}$ ✓

B. $12\frac{1}{4}$

C. $10\frac{1}{4}$

D. $10\frac{1}{2}$

**Q23** Standard Angle Values

ಒಂದು ವೇಳೆ $A = 7.5°$ ಆಗಿದ್ದರೆ, $\frac{32\sqrt{3}\sin 8A + 28\sec 8A}{13\sqrt{3}\operatorname{cosec} 6A}$ ಯ ಮೌಲ್ಯ ಎಷ್ಟು?

A. $\frac{5\sqrt{6}}{3}$

B. $\frac{2\sqrt{6}}{3}$

C. $\frac{4\sqrt{6}}{3}$ ✓

D. $\frac{3\sqrt{6}}{5}$

**Q24** Surds

ಇದನ್ನು ಸರಳೀಕರಿಸಿ: $\sqrt{9 + 4\sqrt{5}}$

A. $2 + \sqrt{5}$ ✓

B. $3 + \sqrt{5}$

C. $5 + \sqrt{2}$

D. $1 + 2\sqrt{5}$

Blackbook Vocabulary — Now in the App! ► Download Now on Google Play

**Q25** Triangle Area & Perimeter

16 cm, 24 cm, ಮತ್ತು 32 cm ಬಾಹುಗಳನ್ನು ಹೊಂದಿರುವ ಒಂದು ತ್ರಿಭುಜದ ಮಧ್ಯಬಿಂದುಗಳನ್ನು ಜೋಡಿಸಿ ಮತ್ತೊಂದು ತ್ರಿಭುಜವನ್ನು ರೂಪಿಸಲಾಗಿದೆ. ಈ ಮಧ್ಯಬಿಂದುಗಳಿಂದ ರೂಪುಗೊಂಡ ತ್ರಿಭುಜದ ವಿಸ್ತೀರ್ಣವನ್ನು ($cm^2$ ಗಳಲ್ಲಿ) ಕಂಡುಹಿಡಿಯಿರಿ.

A. $12\sqrt{5}$

B. $9\sqrt{7}$

C. $10\sqrt{11}$

D. $12\sqrt{15}$ ✓

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** (a+b)^2, (a-b)^2

ಸರಳೀಕರಿಸಿ : $(3a + 2b)^2 + (3a - 2b)^2 - 2(9a^2 + 4b^2)$

A. −1
B. 1
C. 0 ✓
D. 2

**Q2** Basic TSD

ಕೌಶಲ್ ಅವರು 60 km/h ವೇಗದಲ್ಲಿ 14 ಗಂಟೆ 10 ನಿಮಿಷಗಳವರೆಗೆ ಪ್ರಯಾಣಿಸಿದರು. ಹಾಗಾದರೆ ಅದೇ ದೂರವನ್ನು 17 ಗಂಟೆಗಳಲ್ಲಿ ಕ್ರಮಿಸಬೇಕಾದರೆ ಅವರು ಯಾವ ವೇಗದಲ್ಲಿ (km/h ಗಳಲ್ಲಿ) ಪ್ರಯಾಣಿಸಬೇಕು?

A. 51
B. 52
C. 50 ✓
D. 53

**Q3** Building/Tower Problems

ಒಂದು ಗೋಪುರದ ಪಾದದಲ್ಲಿ ಬೆಟ್ಟದ ಮೇಲ್ತುದಿಗೆ ಇರುವ ಉನ್ನತಕೋನ $60^\circ$ ಆಗಿದೆ ಮತ್ತು ಗೋಪುರದ ಮೇಲ್ತುದಿಯಿಂದ ಬೆಟ್ಟದ ಪಾದದವರೆಗೆ ಇರುವ ಅವನತಕೋನವು $30^\circ$ ಆಗಿದೆ. ಒಂದು ವೇಳೆ ಗೋಪುರವು 96 m ಎತ್ತರವಿದ್ದರೆ, ಬೆಟ್ಟದ ಎತ್ತರ ಮತ್ತು ಗೋಪುರದ ಎತ್ತರದ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ.

A. 172 m
B. 163 m
C. 192 m ✓
D. 188 m

**Q4** CI-SI Difference

ಒಂದು ನಿರ್ದಿಷ್ಟ ಮೊತ್ತದ ಮೇಲೆ ವಾರ್ಷಿಕ 8% ದರದಲ್ಲಿ 1½ ವರ್ಷಗಳ ಅವಧಿಗೆ ಸಿಗುವ ಚಕ್ರಬಡ್ಡಿ (ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸವು ₹36 ಆಗಿದೆ. ಹಾಗಾದರೆ ಅಸಲು ಮೊತ್ತ ಎಷ್ಟು? (ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ.)

A. ₹7,404
B. ₹7,201
C. ₹7,411
D. ₹7,401 ✓

**Q5** Cost with Overhead Expenses

ಅರವಿಂದ್ ಅವರು ₹x ನೀಡಿ ಒಂದು ವಸ್ತುವನ್ನು ಖರೀದಿಸಿದರು. ಅದನ್ನು ಬೀರು ಅವರಿಗೆ 27% ನಷ್ಟಕ್ಕೆ ಮಾರಾಟ ಮಾಡಿದರು. ಬೀರು ಅವರು ಅದರ ಸಾಗಣೆಗೆ ₹163 ಖರ್ಚು ಮಾಡಿದರು ಮತ್ತು ಅದನ್ನು ಮೀನು ಅವರಿಗೆ 60% ಲಾಭದಲ್ಲಿ ಮಾರಾಟ ಮಾಡಿದರು. ಮೀನು ಅದನ್ನು ₹1,896 ಗೆ ಖರೀದಿಸಿದ್ದರೆ, x ನ ಮೌಲ್ಯ ಎಷ್ಟು?

A. 1,386
B. 1,400 ✓
C. 1,382
D. 1,388

**Q6** Dividing Quantity in Ratio

ರವಿ, ಸೋಹನ್, ರಘು ಮತ್ತು ಅನಿ ಅವರುಗಳು 7 : 4 : 6 : 3 ಅನುಪಾತದಲ್ಲಿ ಹಣ ಹಂಚಿಕೊಂಡರು. ಒಂದುವೇಳೆ ರಘುವಿನ ಪಾಲು ಅನಿಯ ಪಾಲಿಗಿಂತ ₹1,800 ಹೆಚ್ಚಿದ್ದರೆ, ಸೋಹನ್ ಅವರ ಪಾಲು ಎಷ್ಟು?

A. ₹2,200
B. ₹2,400 ✓
C. ₹2,500
D. ₹2,300

**Q7** Find SI

ಪ್ರತಿ ತಿಂಗಳಿಗೆ 3% ಬಡ್ಡಿದರದಲ್ಲಿ ₹1,500 ರ ಮೇಲೆ 1 ತಿಂಗಳಿಗೆ ಪಡೆಯುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 7.50
B. 3.75
C. 23.75
D. 45 ✓

**Q8** Finding HCF

85, 153 ಮತ್ತು 221 ಗಳನ್ನು ಭಾಗಿಸುವ ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಒಂದೇ ರೀತಿಯ ಶೇಷವನ್ನು ಕೊಡುವ ಅತಿದೊಡ್ಡ ಸಂಖ್ಯೆಯನ್ನು ಕಂಡುಹಿಡಿಯಿರಿ.

A. 60
B. 34
C. 38
D. 68 ✓

Blackbook Vocabulary — Now in the App! ▶ Download Now on Google Play

**Q9** Finding Value from Percentage

ಒಂದು ಜಿಲ್ಲೆಯ ಜನಸಂಖ್ಯೆಯು 3,35,000 ಆಗಿದ್ದು, ಅದರಲ್ಲಿ 2,14,000 ಪುರುಷರಿದ್ದಾರೆ. ಜನಸಂಖ್ಯೆಯ 31% ಸಾಕ್ಷರರಾಗಿದ್ದಾರೆ. ಒಂದು ವೇಳೆ 31% ಪುರುಷರು ಸಾಕ್ಷರರಾಗಿದ್ದರೆ, ಶೇಕಡಾವಾರು ಎಷ್ಟು ಮಹಿಳೆಯರು ಸಾಕ್ಷರರಾಗಿದ್ದಾರೆ?

A. 30%

B. 33%

C. 31% ✓

D. 28%

**Q10** Grouped Data Median

ನೀಡಿರುವ ದತ್ತಾಂಶ ಮೌಲ್ಯಗಳ ಗಣದಲ್ಲಿನ ಮಧ್ಯಾಂಕವನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

| ಲಾಭ (₹) | ಅಂಗಡಿಗಳ ಸಂಖ್ಯೆ |
|---|---|
| 1,000-2,000 | 12 |
| 2,000-3,000 | 18 |
| 3,000-4,000 | 20 |
| 4,000-5,000 | 15 |
| 5,000-6,000 | 5 |

A. ₹3,250 ✓

B. ₹3,150

C. ₹3,300

D. ₹3,200

**Q11** HCF/LCM Word Problems

ಕೊಠಡಿಯ ಅಳತೆ 4 m x 3.2 m ಇದ್ದರೆ, ಅದಕ್ಕೆ ಹಾಕಲು ಬೇಕಾಗುವ ಒಂದೇ ರೀತಿಯ ಚೌಕಾಕಾರದ ಟೈಲ್ ಗಳ ಅತ್ಯಂತ ಕಡಿಮೆ ಸಂಖ್ಯೆ ಎಷ್ಟು?

A. 18

B. 40

C. 9

D. 20 ✓

**Q12** Half-Yearly Compounding

ವಾರ್ಷಿಕ 4% ದರದಲ್ಲಿ (ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ), 1 ವರ್ಷಕ್ಕೆ ₹60,000 ಹೂಡಿಕೆ ಮಾಡಲಾಗುತ್ತದೆ. ಹಾಗಾದರೆ ವರ್ಷದ ಕೊನೆಗೆ ಗಳಿಸಿದ ಚಕ್ರಬಡ್ಡಿ ಎಷ್ಟು?

A. ₹3,244

B. ₹2,424 ✓

C. ₹3,102

D. ₹2,999

**Q13** Laws of Indices

ಒಂದುವೇಳೆ $24^{0.64} = x$, $24^{0.05} = y$ ಮತ್ತು $x^z = y^3$ ಆಗಿದ್ದರೆ, Z ನ ಮೌಲ್ಯವು ______ ಕ್ಕೆ ಸಮೀಪದಲ್ಲಿರುತ್ತದೆ.

A. 0.91

B. 0.23 ✓

C. 1.89

D. 1.75

**Q14** Multiple Pipes

A ಕೊಳವೆಯು ಒಂದು ತೊಟ್ಟಿಯನ್ನು 6 ಗಂಟೆಗಳಲ್ಲಿ ತುಂಬಿಸಬಲ್ಲದು, B ಕೊಳವೆಯು ಅದೇ ತೊಟ್ಟಿಯನ್ನು 21 ಗಂಟೆಗಳಲ್ಲಿ ತುಂಬಿಸಬಲ್ಲದು ಮತ್ತು C ಕೊಳವೆಯು ಅದೇ ತೊಟ್ಟಿಯನ್ನು 28 ಗಂಟೆಗಳಲ್ಲಿ ತುಂಬಿಸಬಲ್ಲದು. ಒಂದು ವೇಳೆ ಅವೆಲ್ಲವನ್ನೂ ಒಟ್ಟಿಗೆ ತೆರೆದರೆ ಅದೇ ತೊಟ್ಟಿಯ ನಾಲ್ಕನೇ-ಒಂದು ಭಾಗದಷ್ಟು ತುಂಬಲು ಅವು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತವೆ?

A. 4

B. 2

C. 1 ✓

D. 3

**Q15** Parallelogram & Rhombus

ಒಂದು ಸಮಬಾಹು ಚತುರ್ಭುಜದ ಕೋನ ದ್ವಿಭಾಜಕಗಳು ಲಂಬ ಕೋನಗಳಲ್ಲಿ ಛೇದಿಸುತ್ತವೆ ಎಂದು ಪರಿಗಣಿಸಿ. ಚತುರ್ಭುಜದ ಒಂದು ಬಾಹು 10 cm ಅಳತೆ ಹೊಂದಿದೆ ಮತ್ತು ಅದರ ಲಂಬವಾಗಿರುವ ಕರ್ಣಗಳಲ್ಲಿ ಒಂದು ಕರ್ಣವು 12 cm ಇದೆ. ಹಾಗಾದರೆ ಚತುರ್ಭುಜದ ವಿಸ್ತೀರ್ಣದ ಅರ್ಧಭಾಗವನ್ನು ಕಂಡುಹಿಡಿಯಿರಿ.

A. 50 cm2

B. 96 cm2

C. 52 cm2

D. 48 cm2 ✓

**Q16** Still Water Speed

ದೋಣಿ ಚಾಲಕನು 22 km ದೂರವನ್ನು ಪ್ರವಾಹದ ದಿಕ್ಕಿನಲ್ಲಿ ಮತ್ತು 15 km ದೂರವನ್ನು ಪ್ರವಾಹದ ದಿಕ್ಕಿಗೆ ವಿರುದ್ಧವಾಗಿ 3 ಗಂಟೆ 20 ನಿಮಿಷಗಳಲ್ಲಿ ಕ್ರಮಿಸಬಹುದು. ಅವನು 14 km ದೂರವನ್ನು ಪ್ರವಾಹದ ದಿಕ್ಕಿನಲ್ಲಿ ಮತ್ತು 12 km ದೂರವನ್ನು ಪ್ರವಾಹದ ದಿಕ್ಕಿಗೆ ವಿರುದ್ಧವಾಗಿ 2 ಗಂಟೆ 24 ನಿಮಿಷಗಳಲ್ಲಿ ಕ್ರಮಿಸಬಹುದು. ಹಾಗಾದರೆ ನಿಶ್ಚಲ ನೀರಿನಲ್ಲಿ ದೋಣಿಯ ವೇಗ ಎಷ್ಟು? (ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಳಗಳಿಗೆ ಸರಿದೂಗಿಸಿ)

A. 11.75 km/h

B. 11.15 km/h ✓

C. 13.15 km/h

D. 13.50 km/h

Blackbook Vocabulary — Now in the App! ► Download Now on Google Play

generated by rank.qmaths.in

**Q17** Successive Discount

ಒಬ್ಬ ಸಗಟು ವ್ಯಾಪಾರಿಯು ಶಾಲಾ ಸಮವಸ್ತ್ರಗಳ ಮೇಲೆ ತಲಾ ₹1,200 ನಮೂದಿಸಿದನು. ನಂತರ ಅವನು ಚಿಲ್ಲರೆ ವ್ಯಾಪಾರಿಗೆ 25% ವ್ಯಾಪಾರ ರಿಯಾಯಿತಿಯನ್ನು ನೀಡಿದನು. ಅಲ್ಲದೆ ಚಿಲ್ಲರೆ ವ್ಯಾಪಾರಿಯು ಖರೀದಿಸಿದ ಪ್ರತಿ 5 ಸಮವಸ್ತ್ರಗಳಿಗೆ 1 ಸಮವಸ್ತ್ರ ಉಚಿತದ ರಿಯಾಯಿತಿಯನ್ನು ಕೂಡ ಪಡೆದನು. ಹೆಚ್ಚುವರಿಯಾಗಿ, 10 ದಿನಗಳಲ್ಲಿ ಹಣವನ್ನು ಪಾವತಿಯನ್ನು ಮಾಡಿದರೆ, ಬಿಲ್ ಮಾಡಿದ ಮೊತ್ತದ ಮೇಲೆ (ವ್ಯಾಪಾರ ರಿಯಾಯಿತಿಯ ನಂತರ) 8% ನಗದು ರಿಯಾಯಿತಿಯನ್ನು ನೀಡಲಾಯಿತು. ಚಿಲ್ಲರೆ ವ್ಯಾಪಾರಿ ಒಟ್ಟು 72 ಸಮವಸ್ತ್ರಗಳನ್ನು ಪಡೆದು 10 ದಿನಗಳಲ್ಲಿ ಪಾವತಿಯನ್ನು ಮಾಡಿದರೆ, ಪ್ರತಿ ಸಮವಸ್ತ್ರದ ಪರಿಣಾಮಕಾರಿ ಬೆಲೆ (ರೂಪಾಯಿಗಳಲ್ಲಿ) ಕಂಡುಹಿಡಿಯಿರಿ.

- A. ₹672
- B. ₹690 ✓
- C. ₹668
- D. ₹700

**Q18** Two Items Mixing

ಪ್ರತಿ kg ಗೆ ₹22.50 ದರದ 10 kg ಅಕ್ಕಿಯನ್ನು, ಪ್ರತಿ kg ಗೆ ₹37.50 ದರದ 10 kg ಅಕ್ಕಿಯೊಂದಿಗೆ ಮಿಶ್ರಣ ಮಾಡಲಾಗುತ್ತದೆ. ಹಾಗಾದರೆ ಮಿಶ್ರಣದ ಪ್ರತಿ kg ಯ ಬೆಲೆ (₹ ಗಳಲ್ಲಿ) ಎಷ್ಟು?

- A. 22
- B. 28
- C. 30 ✓
- D. 25

**Q19** Two Persons Age Relation

A ಮತ್ತು B ಅವರ ಪ್ರಸ್ತುತ ವಯಸ್ಸುಗಳ ನಡುವಿನ ಅನುಪಾತವು 5 : 7 ಆಗಿದೆ. ಹತ್ತು ವರ್ಷಗಳ ನಂತರ, ಈ ಅನುಪಾತವು 7 : 9 ಆಗುತ್ತದೆ. ಹಾಗಾದರೆ A ಅವರ ಪ್ರಸ್ತುತ ವಯಸ್ಸು ಎಷ್ಟು?

- A. 25 ವರ್ಷಗಳು ✓
- B. 30 ವರ್ಷಗಳು
- C. 40 ವರ್ಷಗಳು
- D. 35 ವರ್ಷಗಳು

**Q20** Two Successive Changes

ಒಂದು ಸಂಖ್ಯೆಯನ್ನು 25% ಹೆಚ್ಚಿಸಿ ನಂತರ 10% ಕಡಿಮೆ ಮಾಡಿದರೆ, ಆ ಸಂಖ್ಯೆಯು ಶೇಕಡಾ ಎಷ್ಟು ಹೆಚ್ಚಾಗುತ್ತದೆ?

- A. 10.4%
- B. 12.5% ✓
- C. 13.9%
- D. 15.6%

**Q21** Algebra

ಒಂದು ವೇಳೆ $\frac{\sin^2\theta}{\tan^2\theta - \sin^2\theta} = \frac{1}{3}$, $0° < \theta < 90°$ ಆಗಿದ್ದರೆ, $(\cot\theta + \operatorname{cosec}\theta)$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

- A. $1 - \sqrt{3}$
- B. $\sqrt{3}$ ✓
- C. $3\sqrt{3}$
- D. $2 + \sqrt{3}$

**Q22** Chord Properties

ಒಂದು ವೃತ್ತದಲ್ಲಿ, ವ್ಯಾಸ AB ಮತ್ತು ಜ್ಯಾ PQ (ಇದು ವ್ಯಾಸವಲ್ಲ) ಪರಸ್ಪರ ಲಂಬವಾಗಿ X ಬಿಂದುವಿನಲ್ಲಿ ಛೇದಿಸುತ್ತವೆ. ಒಂದು ವೇಳೆ AX : XB = 3 : 2 ಮತ್ತು ವೃತ್ತದ ತ್ರಿಜ್ಯವು 5 cm ಆಗಿದ್ದರೆ, ಜ್ಯಾ PQ ನ ಉದ್ದ (cm ಗಳಲ್ಲಿ) ಎಷ್ಟು?

- A. $2\sqrt{6}$
- B. $5\sqrt{6}$
- C. $4\sqrt{6}$ ✓
- D. $3\sqrt{6}$

Blackbook Vocabulary — Now in the App! ▶ Download Now on Google Play

**Q23** Double Pie Chart

ನೀಡಲಾದ ಪೈ ನಕಾಶೆಗಳು A ಮತ್ತು B ಎಂಬ ಎರಡು ಶಾಲೆಗಳಲ್ಲಿ ವಿಭಿನ್ನ ವಿಭಾಗಗಳಲ್ಲಿನ ವಿದ್ಯಾರ್ಥಿಗಳ ವಿತರಣೆಯನ್ನು ತೋರಿಸುತ್ತವೆ. A ಶಾಲೆಯಲ್ಲಿ 1000 ವಿದ್ಯಾರ್ಥಿಗಳು ಮತ್ತು B ಶಾಲೆಯಲ್ಲಿ 1200 ವಿದ್ಯಾರ್ಥಿಗಳು ಇದ್ದರೆ, ಎರಡೂ ಶಾಲೆಗಳ ವಿಜ್ಞಾನ ವಿಭಾಗಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಾಸವೇನು?
[School: ಶಾಲೆ; Science: ವಿಜ್ಞಾನ; Commerce: ವಾಣಿಜ್ಯ; Arts: ಕಲೆ]







A. 200

B. 100

C. 150

D. 180 ✓

Blackbook Vocabulary — Now in the App! ▶ Download Now on Google Play
generated by rank.qmaths.in

**Q24** Mean of Grouped Data

ಕೋಷ್ಟಕವನ್ನು ಪರಿಶೀಲಿಸಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ.

ಕೆಳಗಿನ ಕೋಷ್ಟಕವು ಒಂದು ನಿರ್ದಿಷ್ಟ ವಿತರಣೆಯ ವರ್ಗಾಂತರ ಮತ್ತು ಆವೃತ್ತಿಯನ್ನು ತೋರಿಸುತ್ತದೆ.

| ವರ್ಗಾಂತರ | 0-20 | 20-40 | 40-60 | 60-80 | 80-100 |
|---|---|---|---|---|---|
| ಆವೃತ್ತಿ | 17 | 28 | 32 | A | 19 |

ಒಂದು ವೇಳೆ ಈ ವಿತರಣೆಯ ಸರಾಸರಿಯು 50 ಆಗಿದ್ದರೆ, A ಯ ಮೌಲ್ಯವನ್ನು ಕಂಡುಹಿಡಿಯಿರಿ.

A. 20

B. 30

C. 24 ✓

D. 29

**Q25** Total Surface Area

ಒಂದು ಮುಚ್ಚಿದ ಲೋಹದ ಸಿಲಿಂಡರಾಕಾರದ ಪೆಟ್ಟಿಗೆಯ ಎತ್ತರ 1.4 m ಆಗಿದೆ ಮತ್ತು ಅದರ ಪಾದದ ತ್ರಿಜ್ಯವು 56 cm ಆಗಿದೆ. ಒಂದು ವೇಳೆ ಲೋಹದ ಬೆಲೆಯು ಪ್ರತಿ $m^2$ ಗೆ ₹90 ಆಗಿದ್ದರೆ, ಪೆಟ್ಟಿಗೆಯಲ್ಲಿ ಬಳಸಿದ ವಸ್ತುವಿನ ಬೆಲೆ ಎಷ್ಟು?

$(\pi = \frac{22}{7})$ ಎಂದು ಬಳಸಿ

A. ₹738.4

B. ₹633.6 ✓

C. ₹855.5

D. ₹483.4

Blackbook Vocabulary — Now in the App! ▶ Download Now on Google Play

## Mathematics

25 Questions • Answer Key

**Q1** Arithmetic

ಸಚಿನ್ ಅವರ ಮಾಸಿಕ ಸಂಬಳ ₹15,000 ಆಗಿದೆ. ಅವರು ಮನೆ ಬಾಡಿಗೆಗೆ ₹5,500 ಮತ್ತು ದಿನಪಯೋಗಿ ಬಿಲ್‌ಗಳಿಗೆ ₹2,000 ಖರ್ಚು ಮಾಡುತ್ತಾರೆ ಮತ್ತು ಪ್ರತಿ ತಿಂಗಳು ಉಳಿದ ಮೊತ್ತವನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರು ತಮ್ಮ ಹುಟ್ಟುಹಬ್ಬದ ತಿಂಗಳಲ್ಲಿ, ತಮ್ಮ ಇಡೀ ಮಾಸಿಕ ಉಳಿತಾಯವನ್ನು ಹುಟ್ಟುಹಬ್ಬದ ಆಚರಣೆಗಾಗಿ ಖರ್ಚು ಮಾಡಿದರೆ, ಆ ವರ್ಷದಲ್ಲಿ ಅವರ ಒಟ್ಟು ಉಳಿತಾಯವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 90,000
- B. 82,500 ✓
- C. 75,000
- D. 67,500

**Q2** Basic CI Calculation

ಒಂದು ನಿರ್ದಿಷ್ಟ ಮೊತ್ತವು ಎರಡು ವರ್ಷಗಳ ಅವಧಿಯಲ್ಲಿ ವಾರ್ಷಿಕ 40% ದರದಲ್ಲಿ ₹1,08,864 (ಅರ್ಧ ವಾರ್ಷಿಕವಾಗಿ ಚಕ್ರ ಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ) ಆಗುತ್ತದೆ. ಹಾಗಾದರೆ ವಾರ್ಷಿಕವಾಗಿ ಚಕ್ರ ಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ, ಅದೇ ಮೊತ್ತಕ್ಕೆ ಅದೇ ದರದಲ್ಲಿ ಮತ್ತು ಅದೇ ಅವಧಿಗೆ ಪಾವತಿಸಬೇಕಾದ ಮೊತ್ತ (₹ ಗಳಲ್ಲಿ) ಎಷ್ಟು?

- A. 1,08,200
- B. 1,07,300
- C. 1,02,900 ✓
- D. 1,07,600

**Q3** Basic TSD

**M** ಎಂಬ ಕಾರು A ಬಿಂದುವಿನಿಂದ B ಬಿಂದುವಿಗೆ ಪ್ರಯಾಣಿಸಲು 7 ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಒಂದು ವೇಳೆ ಅದು ಅದೇ ದೂರವನ್ನು ತನ್ನ ಮೂಲ ವೇಗಕ್ಕಿಂತ 23.8 km/hr ಕಡಿಮೆ ವೇಗದಲ್ಲಿ ಪ್ರಯಾಣಿಸಿದ್ದರೆ 8 ಗಂಟೆ ಸಮಯ ತೆಗೆದುಕೊಳ್ಳುತ್ತಿತ್ತು. ಹಾಗಾದರೆ A ಮತ್ತು B ಬಿಂದುಗಳ ನಡುವಿನ ಅಂತರವನ್ನು ಕಂಡುಹಿಡಿಯಿರಿ?

- A. 1332.8 km ✓
- B. 1331.5 km
- C. 1330.2 km
- D. 1333.9 km

**Q4** CP-SP Relation

ಒಬ್ಬ ವ್ಯಾಪಾರಿಯು ₹21,115 ಕ್ಕೆ 41 ಲ್ಯಾಪ್‌ಟಾಪ್ ಬ್ಯಾಗ್‌ಗಳನ್ನು ಖರೀದಿಸುತ್ತಾನೆ ಮತ್ತು ಅವುಗಳಲ್ಲಿ 26 ಬ್ಯಾಗ್‌ಗಳನ್ನು ₹13,520 ಕ್ಕೆ ಮಾರಾಟ ಮಾಡುತ್ತಾನೆ. ಇದೇ ದರದಲ್ಲಿ, ಅನು ಒಟ್ಟು ₹8,845 ಲಾಭವನ್ನು ಗಳಿಸಲು ಎಷ್ಟು ಲ್ಯಾಪ್‌ಟಾಪ್ ಬ್ಯಾಗ್‌ಗಳನ್ನು ಖರೀದಿಸಬೇಕು ಮತ್ತು ಮಾರಾಟ ಮಾಡಬೇಕು?

- A. 1745
- B. 1760
- C. 1757
- D. 1769 ✓

**Q5** Direct Proportion

ರಾಮ್ ಅವರು ₹240 ಕ್ಕೆ 8 ಪೆನ್ನುಗಳನ್ನು ಮತ್ತು ₹54 ಕ್ಕೆ 6 ಪೆನ್ಸಿಲು ಗಳನ್ನು ಖರೀದಿಸುತ್ತಾರೆ. ಹಾಗಾದರೆ, 1 ಪೆನ್ನು ಮತ್ತು 3 ಪೆನ್ಸಿಲುಗಳನ್ನು ಖರೀದಿಸಲು ಅವರಿಗೆ ಎಷ್ಟು ಹಣ ಬೇಕಾಗುತ್ತದೆ?

- A. ₹57 ✓
- B. ₹48
- C. ₹69
- D. ₹78

**Q6** Divisibility Rules

**1408** ಅನ್ನು ಈ ಕೆಳಗಿನ ಯಾವ ಸಂಖ್ಯೆಯಿಂದ ನಿಶ್ಶೇಷವಾಗಿ ಭಾಗಿಸಬಹುದು?

- A. 21
- B. 13
- C. 22 ✓
- D. 24

Blackbook Vocabulary — Now in the App! ► Download Now on Google Play

**Q7** Find SI

A ಮತ್ತು B ಎಂಬ ಎರಡು ಬ್ಯಾಂಕುಗಳು ಕ್ರಮವಾಗಿ ವಾರ್ಷಿಕ 3.5% ಮತ್ತು 8.5% ದರದಲ್ಲಿ ಸಾಲಗಳನ್ನು ನೀಡಿದವು. ಶಿವಂ ಅವರು ಪ್ರತಿಯೊಂದು ಬ್ಯಾಂಕಿನಿಂದ ₹2,40,000 ಮೊತ್ತವನ್ನು ಸಾಲವಾಗಿ ಪಡೆದರು. 4 ವರ್ಷಗಳ ನಂತರ ಶಿವಂ ಅವರು ಈ ಎರಡೂ ಬ್ಯಾಂಕುಗಳಿಗೆ ಪಾವತಿಸಿದ ಸರಳ ಬಡ್ಡಿಯ ಮೊತ್ತಗಳ ನಡುವಿನ ಧನಾತ್ಮಕ ವ್ಯತ್ಯಾಸವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 48,000 ✓
- B. 49,500
- C. 49,000
- D. 47,500

**Q8** Finding Present Age

ಒಂದು ವೇಳೆ, ತಾಯಿಯ ಪ್ರಸ್ತುತ ವಯಸ್ಸಿನ ಮೂರು ಪಟ್ಟು, ಅವಳ ಮಗಳ ವಯಸ್ಸಿನ ಎಂಟು ಪಟ್ಟಿಗಿಂತ 24 ವರ್ಷ ಹೆಚ್ಚಾಗಿದ್ದರೆ ಮತ್ತು ಮಗಳ ವಯಸ್ಸಿನ ಮೂರು ಪಟ್ಟು, ತಾಯಿಯ ವಯಸ್ಸಿಗಿಂತ 3 ವರ್ಷ ಕಡಿಮೆಯಿದ್ದರೆ, ತಾಯಿ ಮತ್ತು ಮಗಳ ವಯಸ್ಸುಗಳ ನಡುವಿನ ವ್ಯತ್ಯಾಸ (ವರ್ಷಗಳಲ್ಲಿ) ಎಷ್ಟು?

- A. 36
- B. 35
- C. 28
- D. 33 ✓

**Q9** Finding Value from Percentage

ರಾಜನ್ ಅವರು ತಮ್ಮ ಆದಾಯದ 60% ವನ್ನು ಮನೆಯ ಖರ್ಚುಗಳಿಗೆ ವ್ಯಯಿಸುತ್ತಾರೆ. ಉಳಿದ ಆದಾಯದಿಂದ, 50% ವನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಉಳಿತಾಯವು ₹8,000 ಆಗಿದ್ದರೆ, ಅವರ ಒಟ್ಟು ಆದಾಯ ಎಷ್ಟು?

- A. ₹45,000
- B. ₹40,000 ✓
- C. ₹35,000
- D. ₹32,000

**Q10** Half-Yearly Compounding

ಒಂದು ವೇಳೆ ವಾರ್ಷಿಕ 10% ದರದಲ್ಲಿ (ಅರ್ಧವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ) ಒಂದು ವರ್ಷದ ಅವಧಿಗೆ ₹2,70,000 ಹೂಡಿಕೆ ಮಾಡಿದರೆ, ದೊರೆಯುವ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ.

- A. ₹25,825
- B. ₹27,625
- C. ₹27,850
- D. ₹27,675 ✓

**Q11** Ratio Comparison

ಈ ಕೆಳಗಿನ ಅನುಪಾತಗಳ ಸರಿಯಾದ ಏರಿಕೆಯ ಕ್ರಮ ಯಾವುದು?
12:13, 25:26, 2:3, 5:6

- A. 5:6, 2:3, 12:13, 25:26
- B. 2:3, 12:13, 5:6, 25:26
- C. 2:3, 5:6, 12:13, 25:26 ✓
- D. 2:3, 5:6, 25:26, 12:13

**Q12** Ratio Simplification

P, Q ಮತ್ತು R ಎಂಬವರ ವೇತನಗಳು 3 : 4 : 5 ಅನುಪಾತದಲ್ಲಿವೆ. ಅವರ ವೇತನಗಳು ಕ್ರಮವಾಗಿ 5%, 10% ಮತ್ತು 15% ದಷ್ಟು ಹೆಚ್ಚಳವಾಗಿವೆ. ಈ ಹೆಚ್ಚಳದ ನಂತರ ಅವರ ವೇತನಗಳ ನಡುವಿನ ಹೊಸ ಅನುಪಾತವನ್ನು ಕಂಡುಹಿಡಿಯಿರಿ.

- A. 63 : 88 : 115 ✓
- B. 63 : 78 : 115
- C. 53 : 88 : 105
- D. 63 : 84 : 115

**Q13** Rectangle & Square

ಒಂದು ಚೌಕದ ಸುತ್ತಳತೆಯು 564 m ಆಗಿದೆ. ಅದರ ವಿಸ್ತೀರ್ಣವು ($m^2$ ಗಳಲ್ಲಿ):

- A. 19892
- B. 19881 ✓
- C. 19841
- D. 19880

**Q14** Replacement in Group

42 kg ತೂಕದ ಒಂದು ಮಗುವಿನ ಸ್ಥಾನಕ್ಕೆ ಹೊಸ ಮಗು ಬಂದಾಗ 12 ಮಕ್ಕಳ ಸರಾಸರಿ ತೂಕವು 1.5 kg ಯಷ್ಟು ಹೆಚ್ಚಾಗುತ್ತದೆ. ಹಾಗಾದರೆ ಹೊಸ ಮಗುವಿನ ತೂಕ ಎಷ್ಟು?

- A. 60 kg ✓
- B. 61 kg
- C. 62 kg
- D. 59 kg

Blackbook Vocabulary — Now in the App! ► Download Now on Google Play

**Q15** Sequential Workers

A ಅವರು ಒಂದು ಕೆಲಸವನ್ನು 24 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು, B ಅವರು ಅದೇ ಕೆಲಸವನ್ನು 16 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. A ಅವರು ಆ ಕೆಲಸವನ್ನು ಪ್ರಾರಂಭಿಸಿದರು ಹಾಗೂ B ಅವರನ್ನು ಸೇರುವ ಮೊದಲು 6 ದಿನಗಳ ಕಾಲ ಕೆಲಸಮಾಡಿದರು. ಆನಂತರ, ಇಬ್ಬರೂ ಒಟ್ಟಾಗಿ ಉಳಿದ ಕೆಲಸವನ್ನು ಪೂರ್ಣಗೊಳಿಸಿದರು. ಹಾಗಾದರೆ ಅವರು ಆ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿದರು?

- A. 14.5 ದಿನಗಳು
- B. 16.2 ದಿನಗಳು
- C. 15 ದಿನಗಳು
- D. 13.2 ದಿನಗಳು ✓

**Q16** Simple Mean

10 ವಿದ್ಯಾರ್ಥಿಗಳ ಗುಂಪಿನಲ್ಲಿ, ಕನಿಷ್ಠ 9 ಅಂಕಗಳ ಸರಾಸರಿ 46 ಆಗಿದ್ದರೆ, ಗರಿಷ್ಠ 9 ಅಂಕಗಳ ಸರಾಸರಿ 50 ಆಗಿದೆ. ಒಟ್ಟು 10 ವಿದ್ಯಾರ್ಥಿಗಳ ಆ ಗುಂಪಿಗೆ, ಗರಿಷ್ಠ ಸಂಭವನೀಯ ಸರಾಸರಿಯು ಕನಿಷ್ಠ ಸಂಭವನೀಯ ಸರಾಸರಿಗಿಂತ ಎಷ್ಟು ಹೆಚ್ಚಿದೆ?

- A. 3.2 ✓
- B. 3.4
- C. 4.3
- D. 3.6

**Q17** Volume

ಒಂದು ಘನಾಭವು ಸಮಾಂತರ ಶ್ರೇಢಿಯಲ್ಲಿ ಮೂರು ಅಂಚುಗಳನ್ನು ಹೊಂದಿದ್ದು ಅದರ ಘನಫಲವು 384 $cm^3$ ಆಗಿದೆ. ಒಂದು ವೇಳೆ ಅತ್ಯಂತ ಚಿಕ್ಕ ಅಂಚು 4 cm ಅಳತೆ ಹೊಂದಿದ್ದರೆ, ಅತ್ಯಂತ ದೊಡ್ಡ ಅಂಚಿನ ಉದ್ದವನ್ನು ಕಂಡುಹಿಡಿಯಿರಿ.

- A. 14 cm
- B. 12 cm ✓
- C. 17 cm
- D. 32 cm

**Q18** Average Speed

1 ವಿಮಾನವು $10\frac{1}{2}$ ಗಂಟೆಗಳಲ್ಲಿ A ಸ್ಥಳದಿಂದ B ಸ್ಥಳಕ್ಕೆ 1440 km ದೂರವನ್ನು ಕ್ರಮಿಸಿತು. ವಿಮಾನವು ಮಧ್ಯದಲ್ಲಿ ಎರಡು ಸ್ಥಳಗಳಲ್ಲಿ ಕ್ರಮವಾಗಿ 10 ನಿಮಿಷ ಮತ್ತು 20 ನಿಮಿಷಗಳ ಕಾಲ ನಿಂತಿತು. ಹಾಗಾದರೆ, ವಿಮಾನದ ಸರಾಸರಿ ವೇಗ ಎಷ್ಟು?

- A. 144 km/hr ✓
- B. 148 km/hr
- C. 140 km/hr
- D. 154 km/hr

Blackbook Vocabulary — Now in the App! ▶ Download Now on Google Play

generated by rank.qmaths.in

**Q19** Degree Based

ವಾರದ ವಿವಿಧ ದಿನಗಳಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆಯ ದತ್ತಾಂಶವನ್ನು ಒಳಗೊಂಡಿರುವ ಪೈ ನಕ್ಷೆಯನ್ನು ಪರಿಶೀಲಿಸಿ ಮತ್ತು ಅದರ ಕೆಳಗಿನ ಪ್ರಶ್ನೆಗೆ ಉತ್ತರಿಸಿ.




[**ಸೂಚನೆ**: Accidents= ಅಪಘಾತಗಳು, Sunday = ಭಾನುವಾರ , Monday = ಸೋಮವಾರ, Tuesday = ಮಂಗಳವಾರ, Wednesday = ಬುಧವಾರ ,Thursday = ಗುರುವಾರ, Friday = ಶುಕ್ರವಾರ, Saturday = ಶನಿವಾರ)

ಗುರುವಾರದ ದತ್ತಾಂಶವನ್ನು ತೆಗೆದುಹಾಕಿ, ಉಳಿದ ದತ್ತಾಂಶವನ್ನು ಪೈ ನಕ್ಷೆಯಲ್ಲಿ ಪ್ರತಿನಿಧಿಸಿದರೆ, ಬುಧವಾರದ ದತ್ತಾಂಶವು ಕೇಂದ್ರದಲ್ಲಿ ಉಂಟುಮಾಡುವ ಕೋನದಲ್ಲಿ (ಡಿಗ್ರಿಗಳಲ್ಲಿ) ಮೊದಲಿಗೆ ಮತ್ತು ಈಗ ಇರುವ ವ್ಯತ್ಯಾಸ ಎಷ್ಟು?

A. 45

B. 25

C. 30

D. 20 ✓

**Q20** Laws of Indices

ಇದನ್ನು ಸರಳೀಕರಿಸಿ:

$$\frac{(a^3 b^{-2})^2(a^{-1}b^5)^3}{a^4b^{-1}}$$

A. $\frac{b^{12}}{a}$ ✓

B. $\frac{b^8}{a^3}$

C. $\frac{a^2}{b^6}$

D. $\frac{a}{b^9}$

Blackbook Vocabulary — Now in the App! ► Download Now on Google Play

generated by rank.qmaths.in

**Q21** MP with Discount and Profit

ಒಬ್ಬ ಅಂಗಡಿಯವನು ಒಂದು ಆಟಿಕೆಯ ನಮೂದಿತ ಬೆಲೆಯ ಮೇಲೆ 23% ರಿಯಾಯಿತಿಯನ್ನು ನೀಡಿದ ನಂತರವೂ ಸಹ ₹56 ಲಾಭವನ್ನು ಗಳಿಸುತ್ತಾನೆ. ಒಂದುವೇಳೆ ಅವನು 10% ಲಾಭವನ್ನು ಗಳಿಸಿದರೆ, ಆ ಆಟಿಕೆಯ ನಮೂದಿತ ಬೆಲೆ ಎಷ್ಟು?

A. ₹805
B. ₹800 ✓
C. ₹770
D. ₹870

**Q22** Mean of Grouped Data

ಒಂದು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಹಂಚಿಕೆಯನ್ನು ಈ ಕೆಳಗಿನ ಕೋಷ್ಟಕವು ತೋರಿಸುತ್ತದೆ. ನೇರ ವಿಧಾನವನ್ನು ಬಳಸಿಕೊಂಡು ಅಂಕಗಳ ಸಮಾಂತರ ಮಾಧ್ಯವನ್ನು ಕಂಡುಹಿಡಿಯಿರಿ.

| ಅಂಕಗಳು (x) | 10 | 15 | 20 | 25 | 30 |
|---|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 3 | 7 | 12 | 6 | 2 |

A. 19.5 ✓
B. 23.5
C. 13.5
D. 18.5

**Q23** Parallelogram

ಒಂದು ವೇಳೆ ಒಂದು ಚತುರ್ಭುಜದ ಕೋನಗಳ ನಡುವಿನ ಅನುಪಾತವು $2 : 7 : 2 : 7$ ಆಗಿದ್ದರೆ ಇದೊಂದು:

A. ಸಮಾನಾಂತರ ಚತುರ್ಭುಜ ✓
B. ತ್ರ್ಯಾಪಿಜ್ಯ
C. ಚೌಕ
D. ಆಯತ

**Q24** Pythagorean Identities

ಮೌಲ್ಯಮಾಪನ ಮಾಡಿ: $\frac{1+\sin\theta}{\cos\theta}+\frac{\cos\theta}{1+\sin\theta}$

A. $2\sin\theta$
B. $2\cos\theta$
C. $2\sec\theta$ ✓
D. $2\operatorname{cosec}\theta$

Blackbook Vocabulary — Now in the App! ► Download Now on Google Play

**Q25** cosec^2 - cot^2 = 1

ಒಂದು ವೇಳೆ cosec θ + cot θ = p, p > 1 ಆಗಿದ್ದರೆ, $\frac{\sec\theta + 1}{\sec\theta - 1}$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. p2 ✓

B. 2p

C. p2− 1

D. p2+ 1

Blackbook Vocabulary — Now in the App! ► Download Now on Google Play

generated by rank.qmaths.in

## Mathematics

25 Questions • Answer Key

**Q1** Annual Compounding

ಒಂದು ನಿರ್ದಿಷ್ಟ ಮೊತ್ತವನ್ನು, ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, ಚಕ್ರ ಬಡ್ಡಿಯ ದರದಲ್ಲಿ 4 ವರ್ಷಗಳ ಅವಧಿಗೆ ಹೂಡಿಕೆ ಮಾಡಿದಾಗ ತನ್ನ ಮೌಲ್ಯದ ಮೂರು ಪಟ್ಟು ಆಗುತ್ತದೆ. ಹಾಗಾದರೆ ಅಷ್ಟೇ ಮೊತ್ತವು ಅಷ್ಟೇ ಬಡ್ಡಿ ದರದಲ್ಲಿ ಎಷ್ಟು ವರ್ಷಗಳಲ್ಲಿ ತನ್ನ ಮೂಲ ಮೌಲ್ಯದ ಒಂಬತ್ತು ಪಟ್ಟು ಆಗುತ್ತದೆ?

- A. 8 ವರ್ಷಗಳು ✓
- B. 6 ವರ್ಷಗಳು
- C. 5 ವರ್ಷಗಳು
- D. 9 ವರ್ಷಗಳು

**Q2** Basic TSD

ಗಿರಿ ಎಂಬವರು 7 ಗಂಟೆಗಳಲ್ಲಿ 56 km ದೂರವನ್ನು ಕ್ರಮಿಸುತ್ತಾರೆ. ಅವರು ಆ ದೂರವನ್ನು ಭಾಗಶಃ ಕಾಲ್ನಡಿಗೆಯಲ್ಲಿ 6 km/h ವೇಗದಲ್ಲಿ ಕ್ರಮಿಸುತ್ತಾರೆ ಮತ್ತು ಭಾಗಶಃ ಬೈಸಿಕಲ್ ನಲ್ಲಿ 11 km/h ವೇಗದಲ್ಲಿ ಕ್ರಮಿಸುತ್ತಾರೆ. ಹಾಗಾದರೆ ಅವರು ಬೈಸಿಕಲ್ ನಲ್ಲಿ ಕ್ರಮಿಸಿದ ದೂರ ಎಷ್ಟು?

- A. 30.5 km
- B. 30.7 km
- C. 30.2 km
- D. 30.8 km ✓

**Q3** Basic TSD

ಒಬ್ಬ ಡೆಲಿವರಿ ಸವಾರನು 6 ನಿಮಿಷ 40 ಸೆಕೆಂಡು ತಡವಾಗಿ ಪ್ರಯಾಣ ಆರಂಭಿಸಿದರೂ ತನ್ನ ಸಾಮಾನ್ಯ ವೇಗಕ್ಕಿಂತ 12 km/hr ವೇಗವಾಗಿ ಸಾಗುವ ಮೂಲಕ 21 km ದೂರದ ಗಮ್ಯಸ್ಥಾನವನ್ನು ಸಮಯಕ್ಕೆ ಸರಿಯಾಗಿ ತಲುಪುತ್ತಾನೆ. ಹಾಗಾದರೆ ಅವನ ಸಾಮಾನ್ಯ ವೇಗವು km/hr ಗಳಲ್ಲಿ ಎಷ್ಟು?

- A. 43
- B. 41
- C. 42 ✓
- D. 40

**Q4** Building/Tower Problems

ನೆಲದ ಮೇಲಿನ ಒಂದು ಬಿಂದುವಿನಿಂದ ಗೋಪುರದ ತುದಿಯ ಉನ್ನತ ಕೋನವು 45° ಆಗಿದೆ. ಗೋಪುರದ ಪಾದದ ಕಡೆಗೆ ನೇರವಾಗಿ 24 m ಚಲಿಸಿದಾಗ, ಉನ್ನತ ಕೋನವು 60° ಗೆ ಬದಲಾಗುತ್ತದೆ. ಹಾಗಾದರೆ ಗೋಪುರದ ಎತ್ತರ ಎಷ್ಟು?

($\sqrt{3}$ = 1.732 ಬಳಸಿ ಮತ್ತು ಉತ್ತರವನ್ನು ಎರಡು ದಶಮಾಂಶಗಳಿಗೆ ಸ್ಥಾನಗಳಿಗೆ ಸೀಮಿತಗೊಳಿಸಿ)

- A. 54.78 m
- B. 56.78 m ✓
- C. 53.78 m
- D. 55.78 m

**Q5** Combined Work Rate

A, B ಮತ್ತು C ಅವರು ಒಟ್ಟಾಗಿ ಒಂದು ಕೆಲಸವನ್ನು 2 ದಿನಗಳಲ್ಲಿ ಮಾಡಿ ಮುಗಿಸುತ್ತಾರೆ. ಒಂದು ವೇಳೆ ಆ ಕೆಲಸವನ್ನು A ಒಬ್ಬರೇ 4 ದಿನಗಳಲ್ಲಿ ಮತ್ತು B ಒಬ್ಬರೇ 8 ದಿನಗಳಲ್ಲಿ ಮುಗಿಸಲು ಸಾಧ್ಯವಾದರೆ, ಆ ಕೆಲಸದ ಎರಡು ಪಟ್ಟನ್ನು C ಒಬ್ಬರೇ ಎಷ್ಟು ಸಮಯದಲ್ಲೀ (ದಿನಗಳಲ್ಲಿ) ಮಾಡಬಲ್ಲರು?

- A. 17
- B. 8
- C. 9
- D. 16 ✓

**Q6** Cost with Overhead Expenses

ಅರವಿಂದ್ ಅವರು ಒಂದು ವಸ್ತುವನ್ನು ₹ x ಗೆ ಖರೀದಿಸಿದರು. ಅವರು ಅದನ್ನು ಬೀರು ಅವರಿಗೆ 10% ನಷ್ಟದಲ್ಲಿ ಮಾರಾಟ ಮಾಡಿದರು. ಬೀರು ಅವರು ಅದರ ಸಾಗಾಟಕ್ಕಾಗಿ ₹135 ಖರ್ಚು ಮಾಡಿದರು ಮತ್ತು ಅದನ್ನು ಮೀನು ಅವರಿಗೆ 50% ಲಾಭಕ್ಕೆ ಮಾರಾಟ ಮಾಡಿದರು. ಒಂದು ವೇಳೆ ಮೀನು ಅವರು ಅದನ್ನು ₹1,728 ಕ್ಕೆ ಖರೀದಿಸಿದರೆ, x ನ ಮೌಲ್ಯ ಎಷ್ಟು?

- A. 1,130 ✓
- B. 1,140
- C. 1,080
- D. 1,150

Blackbook Vocabulary — Now in the App! ► Download Now on Google Play

generated by rank.qmaths.in

**Q7** Dividing Quantity in Ratio

ಒಂದು ನಿಗದಿತ ಮೊತ್ತವನ್ನು 8:5 ಅನುಪಾತದಲ್ಲಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ವೇಳೆ ಒಂದು ಭಾಗವು ಇನ್ನೊಂದಕ್ಕಿಂತ ₹306 ರಷ್ಟು ಹೆಚ್ಚಾದರೆ, ಆ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 510
- B. 1,326 ✓
- C. 816
- D. 1,122

**Q8** Find SI

2 ತಿಂಗಳ ಅವಧಿಗೆ ₹1,500 ಮೊತ್ತದ ಮೇಲೆ ಮಾಸಿಕ 3% ಬಡ್ಡಿದರದಲ್ಲಿ ಆಗುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 27.50
- B. 7.50
- C. 90 ✓
- D. 15

**Q9** Finding Value from Percentage

ಇಬ್ಬರು ಅಭ್ಯರ್ಥಿಗಳ ನಡುವಿನ ಚುನಾವಣೆಯಲ್ಲಿ ನೋಂದಾಯಿತ ಮತದಾರರಲ್ಲಿ 80% ರಷ್ಟು ಮಂದಿ ಮತ ಚಲಾಯಿಸಿದರು ಮತ್ತು ಚಲಾವಣೆಯಾದ ಮತಗಳಲ್ಲಿ 10% ರಷ್ಟು ಮತಗಳು ಅಸಿಂಧುವಾದವು. ವಿಜೇತ ಅಭ್ಯರ್ಥಿಯು ಸಿಂಧು ಮತಗಳಲ್ಲಿ 55% ರಷ್ಟು ಪಡೆದು 378 ಮತಗಳ ಅಂತರದಿಂದ ಚುನಾವಣೆಯಲ್ಲಿ ಗೆದ್ದರು. ಹಾಗಾದರೆ ಒಟ್ಟು ನೋಂದಾಯಿತ ಎಷ್ಟು ಮತದಾರರು ಎಷ್ಟು?

- A. 5251
- B. 5250 ✓
- C. 5249
- D. 5253

**Q10** Finding Value from Percentage

ಒಂದು ಚುನಾವಣೆಯಲ್ಲಿ A ಅವರು ಚಲಾವಣೆಯಾದ ಒಟ್ಟು ಮತಗಳಲ್ಲಿ 63.2% ದಷ್ಟನ್ನು ಪಡೆಯುತ್ತಾರೆ. ಒಂದು ವೇಳೆ ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆ 5000 ಆಗಿದ್ದರೆ, A ಅವರು ಪಡೆದ ಮತಗಳು ಎಷ್ಟು?

- A. 3160 ✓
- B. 2760
- C. 3580
- D. 2580

**Q11** Half-Yearly Compounding

ವಾರ್ಷಿಕ 4% ಬಡ್ಡಿ ದರದಲ್ಲಿ (ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) 1 ವರ್ಷಕ್ಕೆ ₹2,20,000 ಹೂಡಿಕೆ ಮಾಡಲಾಗುತ್ತದೆ. ಹಾಗಾದರೆ ವರ್ಷದ ಕೊನೆಗೆ ಗಳಿಸಿದ ಚಕ್ರಬಡ್ಡಿ ಎಷ್ಟು?

- A. ₹8,648
- B. ₹9,551
- C. ₹9,364
- D. ₹8,888 ✓

**Q12** Laws of Indices

ಒಂದು ವೇಳೆ $102^{0.63} = x$, $102^{0.94} = y$ ಮತ್ತು $x^z = y^5$ ಆಗಿದ್ದರೆ, z ನ ಮೌಲ್ಯವು ________ ಕ್ಕೆ ಸಮೀಪದಲ್ಲಿರುತ್ತದೆ.

- A. 6.41
- B. 9.71
- C. 8.63
- D. 7.46 ✓

**Q13** Measures of Central Tendency

ಒಂದು ದತ್ತಾಂಶ ಗಣವು ಸರಾಸರಿ μ, ಮಧ್ಯಾಂಕ M ಮತ್ತು ರೂಢಿಬೆಲೆ m ಅನ್ನು ಹೊಂದಿದ್ದು, ಪ್ರಾಯೋಗಿಕ ಸೂತ್ರವನ್ನು (empirical formula) ಅನುಸರಿಸಿ $m = 3M - 2\mu$ ಆಗಿದೆ. ಪ್ರತಿಯೊಂದು ದತ್ತಾಂಶ ಬಿಂದು x ಇಲ್ಲಿ $x' = kx + d$ ನಿಂದ ನೀಡಲಾದ ರೇಖೀಯ ರೂಪಾಂತರಕ್ಕೆ ಒಳಪಡುತ್ತದೆ. ಇಲ್ಲಿ k ಮತ್ತು d ಸ್ಥಿರಾಂಕಗಳಾಗಿವೆ. ರೂಪಾಂತರಗೊಂಡ ದತ್ತಾಂಶ ಗಣವು ಹೊಸ ಸರಾಸರಿ μ′, ಮಧ್ಯಾಂಕ M′, ಮತ್ತು ರೂಢಿಬೆಲೆ m′ ಅನ್ನು ಹೊಂದಿರುತ್ತದೆ.
ಪ್ರಾಯೋಗಿಕ ಸಂಬಂಧವು ಮಾನ್ಯವಾಗಿರುವುದನ್ನು ಖಚಿತಪಡಿಸಿ, ಕೆಳಗಿನ ಯಾವ ಆಯ್ಕೆಯು μ′, M′, ಮತ್ತು m′ ಅನ್ನು ಸರಿಯಾಗಿ ಪ್ರತಿನಿಧಿಸುತ್ತದೆ?

- A. $\mu' = k\mu$, $M' = kM + d$, $m' = km + d$
- B. $\mu' = k\mu + d$, $M' = kM$, $m' = km + d$
- C. $\mu' = k\mu + d$, $M' = kM + d$, $m' = km + d$ ✓
- D. $\mu' = k\mu + d$, $M' = kM + d$, $m' = k(m + d)$

**Q14** Melting & Recasting

ಒಂದು ಘನ ಶಂಕುವನ್ನು ಕರಗಿಸಿ, ಅದೇ ತ್ರಿಜ್ಯವನ್ನು ಹೊಂದಿರುವ ಒಂದು ಘನ ಸಿಲಿಂಡರಾಗಿ ಮರುರೂಪಿಸಲಾಗುತ್ತದೆ. ಹಾಗಾದರೆ, ಆ ಶಂಕುವಿನ ಎತ್ತರ ಮತ್ತು ಸಿಲಿಂಡರಿನ ಎತ್ತರದ ನಡುವಿನ ಅನುಪಾತವನ್ನು ಕಂಡುಹಿಡಿಯಿರಿ.

- A. 1:1
- B. 1:2
- C. 3:1 ✓
- D. 2:3

Blackbook Vocabulary — Now in the App! ▸ Download Now on Google Play
generated by rank.qmaths.in

**Q15** Partnership

A ಮತ್ತು B ಎಂಬ ಇಬ್ಬರು ಪಾಲುದಾರರು ಒಂದು ವ್ಯವಹಾರದಲ್ಲಿ ಕ್ರಮವಾಗಿ ₹1,50,000 ಮತ್ತು ₹1,80,000 ಹೂಡಿಕೆ ಮಾಡುತ್ತಾರೆ. ಅವರು ಲಾಭದ 50% ಭಾಗವನ್ನು ಸಮಾನವಾಗಿ ಮತ್ತು ಉಳಿದ 50% ಭಾಗವನ್ನು ತಮ್ಮ ಬಂಡವಾಳದ ಹೂಡಿಕೆಯ ಸಮಾನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಿಕೊಳ್ಳುತ್ತಾರೆ. ಒಟ್ಟು ಲಾಭದಲ್ಲಿ ಒಂದು ವೇಳೆ B ಅವರ ಪಾಲು ₹46,000 ಆಗಿದ್ದರೆ, ಗಳಿಸಿದ ಒಟ್ಟು ಲಾಭವನ್ನು ಕಂಡುಹಿಡಿಯಿರಿ.

- A. ₹88,000 ✓
- B. ₹86,000
- C. ₹98,000
- D. ₹96,000

**Q16** Rules for 2,3,4,5,6

7K8508 ಎಂಬ ಆರಂಕಿ ಸಂಖ್ಯೆಯು 6 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡಬೇಕಾದರೆ ($3K^2$-2) ನ ಕನಿಷ್ಠ ಮೌಲ್ಯವನ್ನು ಕಂಡು ಹಿಡಿಯಿರಿ.

- A. 17
- B. 14
- C. 10 ✓
- D. 8

**Q17** Rules for 2,3,4,5,6

7-ಅಂಕಿಯ ಸಂಖ್ಯೆಯಾದ 36A836B ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

- A. 4
- B. 5
- C. 1 ✓
- D. 6

**Q18** Simple Ratio Partnership

A, B, ಮತ್ತು C ಅವರು ಒಂದು ವ್ಯವಹಾರದಲ್ಲಿ ಕ್ರಮವಾಗಿ ₹5,000, ₹7,000 ಮತ್ತು ₹8,000 ಹೂಡಿಕೆ ಮಾಡುತ್ತಾರೆ. ಒಂದುವೇಳೆ ಅವರೆಲ್ಲರ ಒಟ್ಟು ಲಾಭವು ₹4,000 ಆಗಿದ್ದರೆ, A ಅವರ ಪಾಲನ್ನು ಕಂಡುಹಿಡಿಯಿರಿ.

- A. ₹1,100
- B. ₹1,400
- C. ₹1,200
- D. ₹1,000 ✓

**Q19** Single Right Triangle

ಒಂದು ಏಣಿಯು ಲಂಬ ಗೋಡೆಗೆ ಒರಗಿ ನಿಂತಿದೆ. ಆ ಏಣಿಯ ಉದ್ದವು 25 ಮೀಟರ್ ಆಗಿದ್ದು, ಅದು ನೆಲದೊಂದಿಗೆ 30 ಡಿಗ್ರಿ ಕೋನವನ್ನು ಉಂಟುಮಾಡುತ್ತದೆ. ಹಾಗಾದರೆ, ಏಣಿಯು ಗೋಡೆಯ ಮೇಲೆ ಎಷ್ಟು ಎತ್ತರವನ್ನು ತಲುಪುತ್ತದೆ?

- A. 25 ಮೀಟರ್
- B. 21.7 ಮೀಟರ್
- C. 12.5 ಮೀಟರ್ ✓
- D. 15 ಮೀಟರ್

**Q20** Successive Discount

I, II, III ಮತ್ತು IV ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 74% ಮತ್ತು 72% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿ 12% ಮತ್ತು 70% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿ 51% ಮತ್ತು 92% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 29%, 78% ಮತ್ತು 56% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- A. IV
- B. I
- C. II
- D. III ✓

**Q21** Surface Area (TSA/LSA)

ತಲಾ 216 $cm^3$ ಘನಫಲ ಹೊಂದಿರುವ ಎರಡು ಘನಗಳನ್ನು ತುದಿಯಿಂದ ತುದಿಗೆ ಒಟ್ಟಿಗೆ ಜೋಡಿಸಲಾಗಿದೆ. ಇವುಗಳಿಂದ ಉಂಟಾಗುವ ಘನಾಭದ ಮೇಲ್ಮೈ ವಿಸ್ತೀರ್ಣ ಇಷ್ಟಿರುತ್ತದೆ:

- A. 300 cm2
- B. 495 cm2
- C. 360 cm2 ✓
- D. 406 cm2

**Q22** Weighted Average

8 ರ ಮೊದಲ 6 ಗುಣಕಗಳ ತೂಕದ ಸಮಾಂತರ ಮಾಧ್ಯವನ್ನು ಕಂಡುಹಿಡಿಯಿರಿ. ಇಲ್ಲಿ ಪ್ರತಿಯೊಂದು ಗುಣಕಗಳ ತೂಕವು ಅದರ ಮೌಲ್ಯದ ಅರ್ಧದಷ್ಟು ಇರುತ್ತದೆ. (ನಿಮ್ಮ ಉತ್ತರವನ್ನು ಎರಡು ದಶಮಾಂಶಗಳಿಗೆ ಸೀಮಿತಗೊಳಿಸಿ)

- A. 52.52
- B. 43.67
- C. 34.67 ✓
- D. 25.36

Blackbook Vocabulary — Now in the App! ► Download Now on Google Play

## Q23 Congruence & Similarity

ಒಂದು ವೇಳೆ $\angle F = \angle Z$ ಮತ್ತು $DF = XZ$ ಆಗಿದ್ದರೆ, $\Delta DEF$ ಮತ್ತು $\Delta XYZ$ ಗೆ ಸರ್ವಸಮವಾಗಲು ಈ ಕೆಳಗಿನ ಯಾವ ಷರತ್ತು ಸರಿಯಾಗಿರಬೇಕು?

A. SAS ಮಾನದಂಡದ ಪ್ರಕಾರ EF = YZ ✓

B. SSS ಮಾನದಂಡದ ಪ್ರಕಾರ DE = XY

C. SAS ಮಾನದಂಡದ ಪ್ರಕಾರ DE = XY

D. SSA ಮಾನದಂಡದ ಪ್ರಕಾರ EF = YZ

## Q24 Double Pie Chart

ನೀಡಲಾದ ಪೈ ನಕ್ಷೆಗಳು **ಎಂಬಿಬಿಎಸ್** ಪ್ರವೇಶ ಪರೀಕ್ಷೆಗೆ ದಾಖಲಾದ ಅಭ್ಯರ್ಥಿಗಳು ಮತ್ತು ವಿವಿಧ ಸಂಸ್ಥೆಗಳಲ್ಲಿ (A, B, C, D ಮತ್ತು E) ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ (ದಾಖಲಾದವರಲ್ಲಿ) ಮಾಹಿತಿಯನ್ನು ಪ್ರತಿನಿಧಿಸುತ್ತವೆ.







(Students Enrolled = ಪರೀಕ್ಷೆಗೆ ದಾಖಲಾದ ವಿದ್ಯಾರ್ಥಿಗಳು : Candidate Passed = ಉತ್ತೀರ್ಣರಾದ ಅಭ್ಯರ್ಥಿಗಳು)

A ಮತ್ತು E ಎರಡೂ ಸಂಸ್ಥೆಗಳಿಗೆ, ದಾಖಲಾದ ಒಟ್ಟು ಅಭ್ಯರ್ಥಿಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಶೇಕಡಾವಾರು ಎಷ್ಟು?

A. 42.25%

B. 57.75% ✓

C. 62.25%

D. 64.75%

## Q25 Simple Mean

ಐದು ಸಂಖ್ಯೆಗಳ ಸರಾಸರಿಯು18.45 ಆಗಿದೆ. ಹಾಗಾದರೆ ಆ ಐದು ಸಂಖ್ಯೆಗಳ ಮೊತ್ತ ಎಷ್ಟು?

A. 95.25

B. 84.25

C. 92.25 ✓

D. 90.25

Blackbook Vocabulary — Now in the App! ▸ Download Now on Google Play

## Mathematics

25 Questions • Answer Key

**Q1** 2-Year Difference

₹1,000 ಮೊತ್ತವನ್ನು ವಾರ್ಷಿಕ 10% ದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಲಾಗುತ್ತದೆ. ಒಂದುವೇಳೆ ಚಕ್ರಬಡ್ಡಿಯನ್ನು ವರ್ಷಕ್ಕೊಮ್ಮೆ ಲೆಕ್ಕ ಹಾಕಿದರೆ, ಚಕ್ರಬಡ್ಡಿ ಮತ್ತು ಸರಳ ಬಡ್ಡಿಗಳ ನಡುವಿನ ವ್ಯತ್ಯಾಸವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 20
- B. 40
- C. 10 ✔
- D. 30

**Q2** Annual Compounding

ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ಎಷ್ಟು ವಾರ್ಷಿಕ ಬಡ್ಡಿದರದಲ್ಲಿ 2 ವರ್ಷಗಳಲ್ಲಿ ಒಂದು ಮೊತ್ತವು ಅದರ ಮೂಲ ಮೊತ್ತದ 40 ಪಟ್ಟು ಆಗುತ್ತದೆ? (ನಿಮ್ಮ ಉತ್ತರವನ್ನು ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

- A. 529.3%
- B. 532.5% ✔
- C. 537.9%
- D. 538.3%

**Q3** Basic TSD

ಕೌಶಲ್ ಅವರು 90 km/h ವೇಗದಲ್ಲಿ 24 ಗಂಟೆ 56 ನಿಮಿಷಗಳವರೆಗೆ ಪ್ರಯಾಣಿಸಿದರು. ಹಾಗಾದರೆ ಅದೇ ದೂರವನ್ನು 17 ಗಂಟೆಗಳಲ್ಲಿ ಕ್ರಮಿಸಬೇಕಾದರೆ ಅವರು ಯಾವ ವೇಗದಲ್ಲಿ (km/h ಗಳಲ್ಲಿ) ಪ್ರಯಾಣಿಸಬೇಕು?

- A. 135
- B. 130
- C. 132 ✔
- D. 131

**Q4** CP-SP Relation

ಒಬ್ಬ ಮಾರಾಟಗಾರನು 28 ನಿಂಬೆಹಣ್ಣುಗಳನ್ನು ₹1 ಗೆ ಖರೀದಿಸುತ್ತಾನೆ. 75% ಲಾಭ ಗಳಿಸಲು ಅವನು ಎಷ್ಟು ನಿಂಬೆಹಣ್ಣುಗಳನ್ನು ₹1 ಕ್ಕೆ ಮಾರಾಟ ಮಾಡಬೇಕು?

- A. 18
- B. 16 ✔
- C. 20
- D. 17

**Q5** Combined Work Rate

ನಿತಿನ್ ಅವರು ಒಂದು ಮರದ ಶೂ ಸ್ಟ್ಯಾಂಡ್ ಅನ್ನು 2 ದಿನಗಳಲ್ಲಿ ತಯಾರಿಸಬಲ್ಲರು ಮತ್ತು ಪ್ರವೀಣ್ ಅವರು ಅದೇ ಶೂ ಸ್ಟ್ಯಾಂಡ್ ಅನ್ನು 4 ದಿನಗಳಲ್ಲಿ ತಯಾರಿಸಬಲ್ಲರು. ಒಂದು ವೇಳೆ ಅವರಿಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ, ಎಷ್ಟು ದಿನಗಳಲ್ಲಿ ಅವರು 117 ಶೂ ಸ್ಟ್ಯಾಂಡ್‌ಗಳನ್ನು ತಯಾರಿಸಬಲ್ಲರು?

- A. 160
- B. 156 ✔
- C. 158
- D. 152

**Q6** Dividing Quantity in Ratio

ಒಂದು ಚೀಲವು 2 : 5 : 8 ಅನುಪಾತದಲ್ಲಿ 50-ಪೈಸೆಯ ನಾಣ್ಯ, ₹1, ನಾಣ್ಯ ಮತ್ತು ₹2 ನಾಣ್ಯಗಳನ್ನು ಹೊಂದಿದೆ. ಒಂದುವೇಳೆ ಎಲ್ಲಾ ನಾಣ್ಯಗಳ ಒಟ್ಟು ಮೌಲ್ಯ ₹352 ಆಗಿದ್ದರೆ, ಚೀಲದಲ್ಲಿರುವ ಒಟ್ಟು ನಾಣ್ಯಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

- A. 235
- B. 215
- C. 260
- D. 240 ✔

**Q7** False Weight

ಒಬ್ಬ ಅಪ್ರಾಮಾಣಿಕ ವ್ಯಾಪಾರಿ ತನ್ನ ಸರಕುಗಳನ್ನು ಅಸಲು ಬೆಲೆಯಲ್ಲಿ ಮಾರಾಟ ಮಾಡುವುದಾಗಿ ಹೇಳಿಕೊಳ್ಳುತ್ತಾನೆ. ಆದರೆ ಅವನು ಖರೀದಿಸುವಾಗ 7% ಮತ್ತು ಮಾರಾಟ ಮಾಡುವಾಗ 9% ರಷ್ಟು ಮೋಸ ಮಾಡುತ್ತಾನೆ. ಹಾಗಾದರೆ ಅವನಿಗೆ ಎಷ್ಟು ಶೇಕಡಾ ಲಾಭ ಸಿಗುತ್ತದೆ?

- A. 12.25%
- B. 16.63% ✔
- C. 17.20%
- D. 14%

**Q8** Find SI

ತಿಂಗಳಿಗೆ 3% ಸರಳ ಬಡ್ಡಿ ದರದಲ್ಲಿ ₹1,500 ಮೊತ್ತದ ಮೇಲೆ 4 ತಿಂಗಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 35
- B. 15
- C. 180 ✔
- D. 30

Blackbook Vocabulary — Now in the App! ▶ Download Now on Google Play

**Q9** Percentage Increase/Decrease

ಸುಧಾ ಅವರ ಖರ್ಚು ಅವರ ಉಳಿತಾಯಕ್ಕಿಂತ 150% ಹೆಚ್ಚಾಗಿದೆ. ಅವರ ಖರ್ಚು 3% ಕಡಿಮೆಯಾದರೆ ಮತ್ತು ಉಳಿತಾಯ 21.5% ಹೆಚ್ಚಾದರೆ, ಅವಳ ಆದಾಯವು ಶೇಕಡಾ ಎಷ್ಟು ಹೆಚ್ಚಾಗುತ್ತದೆ?

A. 3%

B. 1%

C. 6%

D. 4% ✓

**Q10** Rules for 2,3,4,5,6

604A4744 ಎಂಬ ಸಂಖ್ಯೆಯನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬೇಕಾದರೆ, A ಗೆ ನೀಡಬೇಕಾದ ಕನಿಷ್ಠ ಮೌಲ್ಯ ಎಷ್ಟು?

A. 1 ✓

B. 8

C. 4

D. 7

**Q11** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆಯು ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 66% ಮತ್ತು 81% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿ 42% ಮತ್ತು 41% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿ 57% ಮತ್ತು 99% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿಯು 35%, 32% ಮತ್ತು 15% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯು ಕುಕ್ಕರ್ ಅನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

A. II

B. IV

C. III ✓

D. I

**Q12** Train Problems

P ಮತ್ತು Q ಎಂಬ ಎರಡು ರೈಲುಗಳು, S ಮತ್ತು T ಎಂಬ ನಿಲ್ದಾಣಗಳಿಂದ ಪರಸ್ಪರ ಅಭಿಮುಖವಾಗಿ ಹೊರಡುತ್ತವೆ. ಅವು T ಮತ್ತು S ಗಳನ್ನು ತಲುಪಲು ಕ್ರಮವಾಗಿ 4 ಗಂಟೆ 48 ನಿಮಿಷಗಳು ಮತ್ತು 3 ಗಂಟೆ 20 ನಿಮಿಷಗಳನ್ನು ತೆಗೆದುಕೊಳ್ಳುತ್ತವೆ. ಒಂದು ವೇಳೆ P ರೈಲು 45 km/hr ವೇಗದಲ್ಲಿ ಚಲಿಸುತ್ತಿದ್ದರೆ, Q ರೈಲಿನ ವೇಗ ಎಷ್ಟು?

A. 54 km/hr ✓

B. 50 km/hr

C. 60 km/hr

D. 45 km/hr

**Q13** Two Persons Age Relation

10 ವರ್ಷಗಳ ಹಿಂದೆ, ಆನೆಯ ವಯಸ್ಸು ಜಿರಾಫೆಯ ವಯಸ್ಸಿಗಿಂತ ಐದು ಪಟ್ಟು ಹೆಚ್ಚು ಇತ್ತು. ಇಂದಿನಿಂದ ಐದು ವರ್ಷಗಳ ನಂತರ, ಆನೆಯ ವಯಸ್ಸು ಜಿರಾಫೆಯ ವಯಸ್ಸಿನ ಎರಡು ಪಟ್ಟು ಆಗುತ್ತದೆ. ಹಾಗಾದರೆ ಐದು ವರ್ಷಗಳ ಹಿಂದೆ, ಆನೆ ಮತ್ತು ಜಿರಾಫೆಯ ವಯಸ್ಸಿನ ಮೊತ್ತ ಎಷ್ಟು?

A. 45 ವರ್ಷಗಳು

B. 50 ವರ್ಷಗಳು

C. 40 ವರ್ಷಗಳು ✓

D. 35 ವರ್ಷಗಳು

**Q14** Weighted Average

ಒಂದು ತರಗತಿಯಲ್ಲಿ 25 ವಿದ್ಯಾರ್ಥಿಗಳ ಸರಾಸರಿ ಸ್ಕೋರ್ 80 ಆಗಿದೆ. ಒಂದು ವೇಳೆ ಈ ವಿದ್ಯಾರ್ಥಿಗಳ ಪೈಕಿ 15 ವಿದ್ಯಾರ್ಥಿಗಳ ಸರಾಸರಿ ಸ್ಕೋರ್ 85 ಆಗಿದ್ದರೆ, ಉಳಿದ ವಿದ್ಯಾರ್ಥಿಗಳ ಸರಾಸರಿ ಸ್ಕೋರ್ ಎಷ್ಟು?

A. 73.5

B. 72.5 ✓

C. 72

D. 73

**Q15** (a+b)^2, (a-b)^2

ಒಂದುವೇಳೆ $\sqrt{x}+\frac{1}{\sqrt{x}}=3$ ಆಗಿದ್ದರೆ, $x+\frac{1}{x}$ ನ ಮೌಲ್ಯವನ್ನು ಕಂಡುಹಿಡಿಯಿರಿ.

A. 9

B. 7 ✓

C. 11

D. 5

Blackbook Vocabulary — Now in the App! ▶ Download Now on Google Play

generated by rank.qmaths.in

**Q16** Circle Area & Circumference

ಒಂದು ಚೌಕದ ಒಳಗೆ ಒಂದು ವೃತ್ತವನ್ನು ಅಂತರ್ರಚಿಸಲಾಗಿದೆ. ವೃತ್ತದ ತ್ರಿಜ್ಯವು 5√7 cm ಆಗಿದೆ. ಹಾಗಾದರೆ ಪರಿವೃತ್ತದ ವಿಸ್ತೀರ್ಣವನ್ನು ($cm^2$ ನಲ್ಲಿ) ಕಂಡುಹಿಡಿಯಿರಿ.

($\pi = \frac{22}{7}$ ಬಳಸಿ)

A. 1,000

B. 1,100 ✓

C. 550

D. 1,155

**Q17** Mean Price

ಒಬ್ಬ ಅಂಗಡಿಯವನು ಎರಡು ರೀತಿಯ ಅಕ್ಕಿಗಳನ್ನು ಬೆರೆಸಿ ಒಂದೇ ಮಿಶ್ರಣವನ್ನು ತಯಾರಿಸಿ ಮಾರಾಟ ಮಾಡಲು ಯೋಜಿಸುತ್ತಾನೆ.
ಅವನು ಪ್ರತಿ ಕೆಜಿಗೆ ₹120 ಬೆಲೆಯ 4 kg ಬಾಸ್ಮತಿ ಅಕ್ಕಿಯನ್ನು ಪ್ರತಿ ಕೆಜಿಗೆ ₹80 ಬೆಲೆಯ 6 kg ಸೋನಾ ಮಸೂರಿ ಅಕ್ಕಿಯೊಂದಿಗೆ ಬೆರೆಸುತ್ತಾನೆ.
ಯಾವುದೇ ಲಾಭ ಅಥವಾ ನಷ್ಟವಾಗದಂತೆ ಅವನು ಪ್ರತಿ ಕೆಜಿಗೆ ಯಾವ ಬೆಲೆಗೆ ಮಿಶ್ರಣವನ್ನು ಮಾರಾಟ ಮಾಡಬೇಕು?

A. ₹96 ✓

B. ₹100

C. ₹88

D. ₹90

**Q18** Mean of Grouped Data

ಕೆಳಗಿನ ದತ್ತಾಂಶದ ಸರಾಸರಿಯು 47 ಆಗಿದ್ದರೆ, x ನ ಮೌಲ್ಯ ಎಷ್ಟು?

| **ವರ್ಗ** | 20-30 | 30-40 | 40-50 | 50-60 | 60-70 |
|---|---|---|---|---|---|
| **ಆವರ್ತನ** | 44 | 50 | 16 | 20 | x |

A. 66

B. 68

C. 61

D. 80 ✓

**Q19** Order of Operations

ಒಂದು ವೇಳೆ $29 \times 6 \times 780 \div \sqrt{2704} = y + 602$ ಆಗಿದ್ದರೆ, y ಯ ಮೌಲ್ಯವನ್ನು ಕಂಡುಹಿಡಿಯಿರಿ.

A. 1998

B. 2016

C. 2007

D. 2008 ✓

Blackbook Vocabulary — Now in the App! ► Download Now on Google Play

**Q20** Pythagorean Identities

ಒಂದು ವೇಳೆ $X = \frac{1 + \sec\theta + \tan\theta}{2\tan\theta}$ ಆಗಿದ್ದರೆ, $\frac{\sec\theta - 1 + \tan\theta}{\sec\theta + \tan\theta}$ ನ ಮೌಲ್ಯವು:

A. $1 + \frac{1}{X}$

B. $X$

C. $\frac{1}{X}$ ✔

D. $1 + X^2$

**Q21** Rectangle & Square

ಒಂದು ಚೌಕದ ಸುತ್ತಳತೆಯು 28 cm ಆಗಿದೆ, ಹಾಗಾದರೆ ಅದರ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. $28\ cm^2$

B. $64\ cm^2$

C. $84\ cm^2$

D. $49\ cm^2$ ✔

**Q22** Sphere & Hemisphere

ಒಂದು ಗೋಳದ ಮೇಲ್ಮೈ ವಿಸ್ತೀರ್ಣವು ಸಂಖ್ಯಾತ್ಮಕವಾಗಿ ತ್ರಿಜ್ಯ $\frac{R}{2}$ cm ಇರುವ ಅರ್ಧಗೋಳದ ಘನಫಲಕ್ಕೆ ಸಮನಾಗಿರುತ್ತದೆ. ಒಂದು ವೇಳೆ ಗೋಳದ ಮೇಲ್ಮೈ ವಿಸ್ತೀರ್ಣವು v $cm^2$ ಆಗಿದ್ದರೆ, $\left(\frac{12v}{\pi}\right)^{\frac{1}{3}}$ ಇದರ ಮೌಲ್ಯವನ್ನು $R$ ನ ರೂಪದಲ್ಲಿ ಕಂಡುಹಿಡಿಯಿರಿ.

A. $R^2$

B. $R$ ✔

C. $2R$

D. $R^3$

**Q23** Trigonometric Identities

ಒಂದು ವೇಳೆ $4\cot A = 2$ ಆಗಿದ್ದರೆ, $\frac{1 - \tan^2 A}{1 + \tan^2 A}$ ರ ಮೌಲ್ಯವನ್ನು ಕಂಡು ಹಿಡಿಯಿರಿ.

A. $\frac{-3}{5}$ ✔

B. $\frac{3}{5}$

C. $\frac{-3}{4}$

D. $\frac{3}{4}$

Blackbook Vocabulary — Now in the App! ► Download Now on Google Play

generated by rank.qmaths.in

**Q24** Two Items Mixing

ರಾಹುಲ್ ಅವರು ಹಣ್ಣು ಮತ್ತು ನೀರನ್ನು $17:8$ ರ ಅನುಪಾತದಲ್ಲಿ ಮಿಶ್ರಣ ಮಾಡುವ ಮೂಲಕ ಹಣ್ಣಿನ ಜ್ಯೂಸ್ ಅನ್ನು ಮಾರಾಟ ಮಾಡುತ್ತಾರೆ. ಆದುದರಿಂದ ರಾಹುಲ್ ಅವರ ಜ್ಯೂಸ್ ಒಳ್ಳೆಯ ರುಚಿ ಹೊಂದಿದೆ. ರೋಹನ್ ಅವರು ರಾಹುಲ್ ಅವರ ಪಾಕವಿಧಾನವನ್ನು ಅನುಸರಿ, ಅದೇ ಮಿಶ್ರಣವನ್ನು m ಲೀಟರ್ ನೀರು ಮತ್ತು 153 ಲೀಟರ್ ಹಣ್ಣು ಬಳಸಿ ತಯಾರಿಸುತ್ತಾರೆ. ಹಾಗಾದರೆ $\sqrt{\frac{m}{2}}$ ನ ಮೌಲ್ಯವನ್ನು ಕಂಡು ಹಿಡಿಯಿರಿ.

A. $9$

B. $5$

C. $3$

D. $6$ ✓

**Q25** Year-on-Year Comparison

ಎರಡು ಪೈ ನಕಾಶೆಗಳು 2023 ಮತ್ತು 2024 ರ ಕಂಪನಿಯ ವಾರ್ಷಿಕ ವೆಚ್ಚದ ವಿತರಣೆಯನ್ನು ತೋರಿಸುತ್ತವೆ.
ಒಟ್ಟು ವೆಚ್ಚವು 2023 ರಲ್ಲಿ ₹4 ಕೋಟಿ ಮತ್ತು 2024 ರಲ್ಲಿ ₹5 ಕೋಟಿ ಆಗಿತ್ತು.







2023 ರಿಂದ 2024 ಕ್ಕೆ ಯಾವ ವರ್ಗವು ಖರ್ಚಿನಲ್ಲಿ ಅತಿ ಹೆಚ್ಚು ಹೆಚ್ಚಳವನ್ನು ದಾಖಲಿಸಿದೆ?

[Salaries: ಸಂಬಳ; Operations: ಕಾರ್ಯನಿರ್ವಹಣೆ; Miscellaneous: ಇತರ; Research & Development: ಸಂಶೋಧನೆ ಮತ್ತು ಅಭಿವೃದ್ಧಿ; Salaries: ಸಂಬಳ; Pie Chart: ಪೈ ನಕಾಶೆ]

A. ಮಾರ್ಕೆಟಿಂಗ್

B. ಸಂಬಳ

C. ಸಂಶೋಧನೆ ಮತ್ತು ಅಭಿವೃದ್ಧಿ (R&D) ✓

D. ಕಾರ್ಯನಿರ್ವಹಣೆ

Blackbook Vocabulary — Now in the App! ▶ Download Now on Google Play

generated by rank.qmaths.in

## Mathematics

25 Questions • Answer Key

**Q1** Annual Compounding

ವಾರ್ಷಿಕವಾಗಿ ಚಕ್ರಬಡ್ಡಿನ್ನು ಲೆಕ್ಕ ಮಾಡುವ ವಿಧಾನದಲ್ಲಿ ಶೇಕಡಾ ಎಷ್ಟು ದರದಲ್ಲಿ 2 ವರ್ಷಗಳಲ್ಲಿ ಒಂದು ಮೊತ್ತವು ಅದರ ಮೂಲ ಮೊತ್ತದ 57 ಪಟ್ಟು ಆಗುತ್ತದೆ? (ನಿಮ್ಮ ಉತ್ತರವನ್ನು ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ)

- A. 660%
- B. 662%
- C. 655% ✓
- D. 653%

**Q2** Average Speed

ಒಂದು ಕಾರು 52 km/hr ವೇಗದಲ್ಲಿ ಚಲಿಸಲು ಪ್ರಾರಂಭಿಸುತ್ತದೆ ಮತ್ತು ಪ್ರತಿ 30 ನಿಮಿಷಕ್ಕೆ ತನ್ನ ವೇಗವನ್ನು 7 km/hr ನಷ್ಟು ಹೆಚ್ಚಿಸಿಕೊಳ್ಳುತ್ತದೆ. ಹಾಗಾದರೆ 3 ಗಂಟೆಗಳಲ್ಲಿ ಕಾರಿನ ಸರಾಸರಿ ವೇಗವನ್ನು (km/hr ಗಳಲ್ಲಿ) ಕಂಡುಹಿಡಿಯಿರಿ.

- A. 70.2
- B. 65.6
- C. 69.5 ✓
- D. 60.8

**Q3** Boat and Stream

S1, S2 ಮತ್ತು S3 ನದಿಯ ಮೇಲೆ ಸರಳ ರೇಖೆಯಲ್ಲಿರುವ ಮೂರು ಅಂಗಡಿಗಳಾಗಿವೆ. ಆ ನದಿಯು S1 ರಿಂದ S3 ಕಡೆಗೆ ಸ್ಥಿರ ವೇಗದಲ್ಲಿ ಹರಿಯುತ್ತದೆ. S2 ಅಂಗಡಿಯು S1 ಮತ್ತು S3 ನಡುವೆ ಸಮಾನ ದೂರದಲ್ಲಿದೆ. ಸೀರತ್ ಅವರು ಒಂದು ವಸ್ತುವನ್ನು ಖರೀದಿಸಲು S1 ರಿಂದ S2 ಗೆ ಹೋಗಿ ಮರಳಿ ಬರಲು 12.5 ಗಂಟೆಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು S1 ಅಂಗಡಿಯಿಂದ S3 ಅಂಗಡಿಗೆ 9.5 ಗಂಟೆಗಳಲ್ಲಿ ದೋಣಿ ಚಲಾಯಿಸುತ್ತಾರೆ. ಹಾಗಾದರೆ ನಿಶ್ಚಲ ನೀರಿನಲ್ಲಿನ ದೋಣಿಯ ವೇಗವನ್ನು ನದಿಯ ವೇಗದೊಂದಿಗೆ ಹೋಲಿಸಿ.

- A. 8:3
- B. 25 : 6 ✓
- C. 8:1
- D. 25 : 8

**Q4** Combined Work Rate

ವರುಣ್ ಅವರು ಒಂದು ಮರದ ಮೇಜನ್ನು 2 ದಿನಗಳಲ್ಲಿ ತಯಾರಿಸಬಲ್ಲರು ಮತ್ತು ಆಶಿಶ್ ಅವರು ಅದೇ ಮೇಜನ್ನು 4 ದಿನಗಳಲ್ಲಿ ತಯಾರಿಸಬಲ್ಲರು. ಒಂದು ವೇಳೆ ಅವರು ಒಟ್ಟಿಗೆ ಕೆಲಸ ಮಾಡಿದರೆ, ಅದೇ ರೀತಿಯ 123 ಮೇಜುಗಳನ್ನು ಎಷ್ಟು ದಿನಗಳಲ್ಲಿ ತಯಾರಿಸಬಲ್ಲರು?

- A. 164 ✓
- B. 160
- C. 166
- D. 168

**Q5** Find SI

ಪ್ರತಿ ತಿಂಗಳಿಗೆ 3% ಬಡ್ಡಿದರದಲ್ಲಿ ₹1,500 ರ ಮೇಲೆ 3 ತಿಂಗಳಿಗೆ ಪಡೆಯುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 22.50
- B. 11.25
- C. 135 ✓
- D. 31.25

**Q6** Finding Present Age

A ಅವರ ವಯಸ್ಸು B ಅವರ ವಯಸ್ಸಿನ ಎರಡು ಪಟ್ಟಿಗಿಂತ 5 ವರ್ಷಗಳು ಹೆಚ್ಚು ಇದೆ. B ಅವರಿಗೆ 8 ವರ್ಷವಾಗಿದ್ದರೆ, A ಅವರ ವಯಸ್ಸು ಎಷ್ಟು?

- A. 18 ವರ್ಷಗಳು
- B. 16 ವರ್ಷಗಳು
- C. 21 ವರ್ಷಗಳು ✓
- D. 19 ವರ್ಷಗಳು

**Q7** Finding Ratio

₹20/kg ಬೆಲೆಯ ಅಕ್ಕಿಯನ್ನು ₹30/kg ಬೆಲೆಯ ಅಕ್ಕಿಯೊಂದಿಗೆ ಯಾವ ಅನುಪಾತದಲ್ಲಿ ಬೆರೆಸಿದರೆ, ಆ ಮಿಶ್ರಣದ ಸರಾಸರಿ ಬೆಲೆಯು ₹25/kg ಆಗುತ್ತದೆ?

- A. 5 : 3
- B. 1 : 1 ✓
- C. 2 : 3
- D. 3 : 2

Blackbook Vocabulary — Now in the App! ► Download Now on Google Play

**Q8** Finding Value from Percentage

ಇಬ್ಬರು ಅಭ್ಯರ್ಥಿಗಳ ನಡುವಿನ ಚುನಾವಣೆಯಲ್ಲಿ, ನೋಂದಾಯಿತ ಮತದಾರರಲ್ಲಿ 18% ಮತ ಚಲಾಯಿಸಲಿಲ್ಲ, ಮತ್ತು ಚಲಾಯಿಸಿದ ಮತಗಳಲ್ಲಿ 750 ಮತಗಳು ಅಸಿಂಧು ಎಂದು ಘೋಷಿಸಲ್ಪಟ್ಟವು. ವಿಜೇತ ಅಭ್ಯರ್ಥಿಯು ಸಿಂಧು ಮತಗಳಲ್ಲಿ 70% ಗಳಿಸಿದರು ಮತ್ತು 4,620 ಮತಗಳ ಅಂತರದಿಂದ ಗೆದ್ದರು. ಹಾಗಾದರೆ ನೋಂದಾಯಿತ ಮತದಾರರ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಿರಿ.

- A. 16,700
- B. 15,000 ✓
- C. 16,200
- D. 15,600

**Q9** Parallelogram & Rhombus

ಒಂದು ವಜ್ರಾಕೃತಿಯ ಕರ್ಣಗಳು 30 cm ಮತ್ತು 40 cm ಅಳತೆಯನ್ನು ಹೊಂದಿವೆ. ಹಾಗಾದರೆ ವಜ್ರಾಕೃತಿಯ ವಿಸ್ತೀರ್ಣ ಮತ್ತು ಸುತ್ತಳತೆಯನ್ನು ಕಂಡುಹಿಡಿಯಿರಿ.

- A. ಸುತ್ತಳತೆ = 130 cm, ವಿಸ್ತೀರ್ಣ = 700 $cm^2$
- B. ಸುತ್ತಳತೆ = 100 cm, ವಿಸ್ತೀರ್ಣ= 500 $cm^2$
- C. ಸುತ್ತಳತೆ = 140 cm, ವಿಸ್ತೀರ್ಣ = 800 $cm^2$
- D. ಸುತ್ತಳತೆ = 100 cm, ವಿಸ್ತೀರ್ಣ= 600 $cm^2$ ✓

**Q10** Percentage Increase/Decrease

ಸುಧಾ ಅವರ ಖರ್ಚು ಅವರ ಉಳಿತಾಯಕ್ಕಿಂತ 150% ಹೆಚ್ಚಾಗಿದೆ. ಒಂದು ವೇಳೆ ಅವರ ಖರ್ಚು 12% ಕಡಿಮೆಯಾದರೆ ಮತ್ತು ಉಳಿತಾಯವು 37% ಹೆಚ್ಚಾದರೆ, ಅವರ ಆದಾಯವು ಶೇಕಡಾ ಎಷ್ಟು ಹೆಚ್ಚಾಗುತ್ತದೆ?

- A. 5%
- B. 3%
- C. 2% ✓
- D. 7%

**Q11** Prime & Composite Numbers

ಈ ಕೆಳಗಿನ ಯಾವ ಸಂಖ್ಯಾ ಜೋಡಿಯು ಸಹ-ಅವಿಭಾಜ್ಯವಲ್ಲ?

- A. (143, 286) ✓
- B. (211, 337)
- C. (137, 221)
- D. (101, 107)

**Q12** Profit/Loss Percentage

ಒಬ್ಬ ಮಾರಾಟಗಾರ ಒಂದು ರೂಪಾಯಿಗೆ 28 ನಿಂಬೆಹಣ್ಣನ್ನು ಖರೀದಿಸಿದನು. 40% ಲಾಭ ಗಳಿಸಲು ಅವನು ಒಂದು ರೂಪಾಯಿಗೆ ಎಷ್ಟು ನಿಂಬೆಹಣ್ಣುಗಳನ್ನು ಮಾರಾಟ ಮಾಡಬೇಕು?

- A. 22
- B. 24
- C. 20 ✓
- D. 21

**Q13** Rules for 7,8,9,11

391A6922 ಸಂಖ್ಯೆಯು 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡಬೇಕಾದರೆ, A ಗೆ ನಿಗದಿಪಡಿಸಬೇಕಾದ ಮೌಲ್ಯ ಎಷ್ಟು?

- A. 3 ✓
- B. 6
- C. 7
- D. 5

**Q14** Simple Ratio Partnership

ರಿಷಭ್ ಮತ್ತು ನೇಹಾ ಒಟ್ಟಿಗೆ ಒಂದು ವ್ಯವಹಾರವನ್ನು ಪ್ರಾರಂಭಿಸಿದರು. ರಿಷಭ್ ₹21,000 ಮತ್ತು ನೇಹಾ ₹35,000 ಹೂಡಿಕೆ ಮಾಡಿದರು. ಎರಡು ವರ್ಷಗಳ ಕೊನೆಯಲ್ಲಿ, ಅವರು ₹10,000 ಲಾಭ ಗಳಿಸಿದರು. ಹಾಗಾದರೆ ಒಟ್ಟು ಲಾಭದಲ್ಲಿ ನೇಹಾ ಅವರ ಪಾಲನ್ನು ಕಂಡುಹಿಡಿಯಿರಿ.

- A. ₹6,520
- B. ₹6,025
- C. ₹6,250 ✓
- D. ₹6,205

**Q15** Successive Discount

I, II, III ಮತ್ತು IV ಎಂಬ ನಾಲ್ಕು ಅಂಗಡಿಗಳಲ್ಲಿ ಒಂದು ಕುಕ್ಕರ್‌ನ ನಮೂದಿತ ಬೆಲೆ ಒಂದೇ ಆಗಿರುತ್ತದೆ. ಕುಕ್ಕರ್‌ನ ನಮೂದಿತ ಬೆಲೆಯ ಮೇಲೆ, I ನೇ ಅಂಗಡಿ 12% ಮತ್ತು 37% ಗಳ ಎರಡು ಸತತ ರಿಯಾಯಿತಿಗಳನ್ನು ನೀಡುತ್ತದೆ, II ನೇ ಅಂಗಡಿ 54% ಮತ್ತು 63% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ, III ನೇ ಅಂಗಡಿ 28% ಮತ್ತು 83% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ ಮತ್ತು IV ನೇ ಅಂಗಡಿ 19%, 59% ಮತ್ತು 25% ಗಳ ಸತತ ರಿಯಾಯಿತಿಗಳನ್ನು ನೀಡುತ್ತದೆ. ಹಾಗಾದರೆ ಯಾವ ಅಂಗಡಿಯಲ್ಲಿ ಕುಕ್ಕರ್ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ?

- A. III ✓
- B. IV
- C. II
- D. I

Blackbook Vocabulary — Now in the App! ▸ Download Now on Google Play

**Q16** Two Successive Changes

ಅರವಿಂದ್ ಅವರ ಆದಾಯವು ಮೊದಲು 19% ರಷ್ಟು ಹೆಚ್ಚಾಯಿತು, ನಂತರ ಮತ್ತೆ 10% ರಷ್ಟು ಹೆಚ್ಚಾಯಿತು. ಹಾಗಾದರೆ ಒಟ್ಟು ಶೇಕಡಾವಾರು ಹೆಚ್ಚಳವನ್ನು ಕಂಡುಹಿಡಿಯಿರಿ.

A. 30%

B. 30.9% ✓

C. 28.2%

D. 29%

**Q17** Ungrouped Data Median

ಕೆಳಗಿನ ಸಂಖ್ಯೆಗಳನ್ನು ಅವುಗಳ ಪ್ರಮಾಣಗಳ ಏರಿಕೆ ಕ್ರಮದಲ್ಲಿ ನೀಡಲಾಗಿದೆ.

20, 22, 25, 30, x − 11, x − 8, x − 3, 52, 60 ಮತ್ತು 68. ಒಂದು ವೇಳೆ ದತ್ತಾಂಶದ ಮಧ್ಯಾಂಕವು 39 ಆಗಿದ್ದರೆ, x ನ ಮೌಲ್ಯವನ್ನು ಕಂಡುಹಿಡಿಯಿರಿ.

A. 43.5

B. 46.7

C. 44.6

D. 48.5 ✓

**Q18** Volume

7 cm ತ್ರಿಜ್ಯದ ಸಿಲಿಂಡರಾಕಾರದ ತೊಟ್ಟಿಯಲ್ಲಿ 20 cm ಎತ್ತರದವರೆಗೆ ನೀರಿದೆ. ಈ ನೀರನ್ನು 14 cm ತ್ರಿಜ್ಯದ ಮತ್ತೊಂದು ಸಿಲಿಂಡರಾಕಾರದ ತೊಟ್ಟಿಗೆ ಸುರಿಯಲಾಗುತ್ತದೆ. ಹಾಗಾದರೆ ಎರಡನೇ ತೊಟ್ಟಿಯಲ್ಲಿ ಎಷ್ಟು ಎತ್ತರದವರೆಗೆ ನೀರಿದೆ?

A. 8 cm

B. 7 cm

C. 5 cm ✓

D. 6 cm

**Q19** Bar Graph

ಕೊಟ್ಟಿರುವ ನಕ್ಷೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ.

**ಒಂದು ವರ್ಷದಲ್ಲಿ ಮೂರು ಕಂಪನಿಗಳು ಉತ್ಪಾದನೆ ಮಾಡಲಾದ ಸ್ಕೂಟರ್‌ಗಳು** (1000 ಗಳಲ್ಲಿ)




1992 ರಿಂದ 1993 ರವರೆಗೆ B ಎಂಬ ಕಂಪನಿಯ ಸ್ಕೂಟರ್‌ಗಳ ಉತ್ಪಾದನೆಯಲ್ಲಿ ಉಂಟಾದ ಶೇಕಡಾವಾರು ಇಳಿಕೆ (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ) ಎಷ್ಟು?

A. 18.3%

B. 17.2%

C. 19.2%

D. 16.7% ✓

Blackbook Vocabulary — Now in the App! ▶ Download Now on Google Play

**Q20** Congruence & Similarity

$\Delta DEF$ ಮತ್ತು $\Delta XYZ$ ಎಂಬ ಎರಡು ತ್ರಿಭುಜಗಳು $\Delta XYZ \cong \Delta FDE$ ಯ ರೀತಿಯಲ್ಲಿವೆ. ಒಂದು ವೇಳೆ $XY = 23$ cm $\angle Y = 68°$ ಮತ್ತು $\angle X = 43°$ ಆಗಿದ್ದರೆ, ಈ ಕೆಳಗಿನ ಯಾವ ಆಯ್ಕೆಯು ಸರಿಯಾಗಿದೆ?

A. $DF = 23$ cm, $\angle D = 69°$

B. $DE = 23$ cm, $\angle E = 69°$

C. $DE = 23$ cm, $\angle D = 69°$

D. $DF = 23$ cm, $\angle E = 69°$ ✓

**Q21** Laws of Indices

ಒಂದುವೇಳೆ $3^{(n+1)} = 27 \times 9^n$ ಆಗಿದ್ದರೆ, $n$ ನ ಮೌಲ್ಯ ಎಷ್ಟು?

A. 2

B. -2 ✓

C. 6

D. 4

**Q22** Mean of Grouped Data

ಈ ಕೆಳಗಿನ ವಿತರಣೆಯ ಸರಾಸರಿಯು 53 ಆಗಿದ್ದರೆ, (7x + 4y) ನ ಮೌಲ್ಯ ಎಷ್ಟು?

| ವರ್ಗ | 0-20 | 20-40 | 40-60 | 60-80 | 80-100 | ಒಟ್ಟು |
|---|---|---|---|---|---|---|
| ಆವರ್ತನ | 2 | 10 | x | 4 | y | 40 |

A. 124

B. 133

C. 154

D. 144 ✓

**Q23** Pythagorean Identities

ಸರಳೀಕರಿಸಿ : $\dfrac{\cot A + \operatorname{cosec} A - 1}{\cot A - \operatorname{cosec} A + 1}$

A. $\dfrac{1 - \cos A}{\sin A}$

B. $\dfrac{1 + \cos A}{\sin A}$ ✓

C. $\dfrac{1 - \operatorname{cosec} A}{1 + \operatorname{cosec} A}$

D. $\dfrac{\cos A}{\sin A}$

Blackbook Vocabulary — Now in the App! ► Download Now on Google Play

generated by rank.qmaths.in

**Q24** Pythagorean Identities

ಒಂದು ವೇಳೆ $\sec\alpha + \tan\alpha = 9$ ಆಗಿದ್ದರೆ, $\tan\alpha$ ದ ಮೌಲ್ಯ ಎಷ್ಟು?

A. $\frac{40}{9}$ ✓

B. $\frac{9}{40}$

C. $\frac{81}{80}$

D. $\frac{80}{81}$

**Q25** Ratio Simplification

ಒಂದುವೇಳೆ $A:B:C$ ಯ ಮೌಲ್ಯವು $3:5:6$ ಆಗಿದ್ದರೆ, $\frac{A}{B}:\frac{B}{C}:\frac{C}{A}$ ಯ ______ಗೆ ಸಮಾನವಾಗಿದೆ.

A. 12:25:55

B. 12:34:65

C. 18:25:60 ✓

D. 15:25:62

Blackbook Vocabulary — Now in the App! ► Download Now on Google Play

## Mathematics

25 Questions • Answer Key

**Q1** Annual Compounding

ಒಂದು ನಿರ್ದಿಷ್ಟ ಮೊತ್ತವು ನಿಗದಿತ ವಾರ್ಷಿಕ ಚಕ್ರಬಡ್ಡಿ ದರದಲ್ಲಿ 20 ವರ್ಷಗಳ ಕೊನೆಯಲ್ಲಿ ₹752 ಮತ್ತು 21 ವರ್ಷಗಳ ಕೊನೆಯಲ್ಲಿ ₹7,896 ಆಗುತ್ತದೆ. ವಾರ್ಷಿಕ ಚಕ್ರಬಡ್ಡಿ ದರವನ್ನು ಕಂಡುಹಿಡಿಯಿರಿ.

A. 850%

B. 8.5%

C. 9.5%

D. 950% ✓

**Q2** Area/Volume Error

ಒಂದು ಆಯತಾಕಾರದ ಉದ್ಯಾನವನದ ಬಾಹುಗಳನ್ನು ಅಳೆಯುವಾಗ, ಒಂದು ಬಾಹುವನ್ನು 6% ಹೆಚ್ಚು ತೆಗೆದುಕೊಂಡರೆ ಮತ್ತು ಇನ್ನೊಂದು ಬಾಹುವನ್ನು 5% ಕಡಿಮೆ ತೆಗೆದುಕೊಂಡರೆ, ವಿಸ್ತೀರ್ಣದ ಲೆಕ್ಕಾಚಾರದಲ್ಲಿ ಆಗಬಹುದಾದ ಶೇಕಡಾವಾರು ದೋಷ ಎಷ್ಟು?

A. ಏನೂ ಬದಲಾವಣೆ ಆಗುವುದಿಲ್ಲ

B. 0.7% ಹೆಚ್ಚಾಗುತ್ತದೆ ✓

C. 0.7% ಕಡಿಮೆಯಾಗುತ್ತದೆ

D. 0.2% ಹೆಚ್ಚಾಗುತ್ತದೆ

**Q3** Combined Work Rate

ಅಶೋಕ್ ಅವರು ಒಂದು ಮರದ ಕುರ್ಚಿಯನ್ನು 2 ದಿನಗಳಲ್ಲಿ ತಯಾರಿಸಬಲ್ಲರು ಮತ್ತು ರಾಬಿನ್ ಅವರು ಅದೇ ಕುರ್ಚಿಯನ್ನು 4 ದಿನಗಳಲ್ಲಿ ತಯಾರಿಸಬಲ್ಲರು. ಒಂದು ವೇಳೆ ಅವರಿಬ್ಬರೂ ಒಟ್ಟಿಗೆ ಸೇರಿ ಕೆಲಸ ಮಾಡಿದರೆ, ಅದೇ ರೀತಿಯ 120 ಕುರ್ಚಿಗಳನ್ನು ಎಷ್ಟು ದಿನಗಳಲ್ಲಿ ತಯಾರಿಸಬಲ್ಲರು?

A. 162

B. 156

C. 164

D. 160 ✓

**Q4** Cost with Overhead Expenses

ರೇಣು ₹14,500 ಗೆ ಹಳೆಯ ಸ್ಕೂಟರ್ ಖರೀದಿಸಿ ಅದರ ದುರಸ್ತಿಗೆ ₹3,500 ಖರ್ಚು ಮಾಡಿದರು. ನಂತರ ಅದನ್ನು ₹3,500 ಲಾಭಕ್ಕೆ ರೋಹಿತ್‌ಗೆ ಮಾರಿದರು. ರೋಹಿತ್ ಸ್ಕೂಟರ್‌ಗೆ ₹1,200 ಕ್ಕೆ ಬಣ್ಣ ಬಳಿದು ಮುಖೇಶ್‌ಗೆ 10% ಲಾಭಕ್ಕೆ ಮಾರಿದರು. ಹಾಗಾದರೆ ಮುಕೇಶ್ ಸ್ಕೂಟರ್‌ಗೆ ಎಷ್ಟು ಹಣ ಪಾವತಿಸಿದರು?

A. ₹24,970 ✓

B. ₹24,530

C. ₹25,240

D. ₹23,840

**Q5** Crossing Bridge/Platform

